

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 17 ಮಂಗಳವಾರ 2024

ಸಂಪುಟ: 45 | ಸಂಚಿಕೆ: 240 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



6ರಿಂದ 10ನೇ ತರಗತಿಗೆ ಗಣಿತ, ವಿಜ್ಞಾನ ವಿಷಯದಲ್ಲಿ ಸಿಬಿಎಸ್‌ಇ ಪಠ್ಯಕ್ರಮ



ಬೆಳಗಾವಿ, ವಿಧಾನಮಂಡಲ, ಡಿ.16(ಕೆಎಂಶಿ)– ಆರರಿಂದ 10ನೇ ತರಗತಿವರೆಗೆ ರಾಜ್ಯ ಪಠ್ಯಕ್ರಮದ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಸಿಬಿಎಸ್‌ಇ ಪಠ್ಯಕ್ರಮವನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ವಿಧಾನಪರಿಷತ್‌ಗೆ ತಿಳಿಸಿದ್ದಾರೆ.

ಎಂ.ಎಲ್.ಅನಿಲಕುಮಾರ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಕಡ್ಡಾಯ ಶಿಕ್ಷಣ ಕಾಯ್ದೆ (ಆರ್‌ಟಿಇ) ಅನುಷ್ಠಾನದಿಂದ ಒಂದರಿಂದ 8ನೇ ತರಗತಿವರೆಗೆ ಪ್ರವೇಶ ಶುಲ್ಕವನ್ನು ಸರ್ಕಾರವೇ ಭರಿಸುತ್ತಿದೆ, 8ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೂ ಈ ಯೋಜನೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದರು.

ಠೇವಣಿದಾರರ ಹಿತಾಸಕ್ತಿ ರಕ್ಷಣೆ ಸೇರಿ ಎಂಟು ವಿಧೇಯಕ ಅಂಗೀಕಾರ

ಬೆಳಗಾವಿ: ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ತಿದ್ದುಪಡಿ ಮಸೂದೆ ಸೇರಿದಂತೆ ಒಟ್ಟು ಎಂಟು ವಿಧೇಯಕಗಳನ್ನು ವಿಧಾನಸಭೆಯಲ್ಲಿಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ರಕ್ಷಣೆ (ತಿದ್ದುಪಡಿ) ■ 2ನೇ ಪುಟಕ್ಕೆ

ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿಗೆ 150 ಕೋಟಿ ಆಫರ್ ಆರೋಪ

ಸಿಬಿಐ ತನಿಖೆಗೆ ಒಪ್ಪಿಸಲು ವಿಜಯೇಂದ್ರ ಪಟ್ಟು

● ವಿಧಾನಸಭೆಯಲ್ಲಿ ಸರ್ಕಾರದ ವಿರುದ್ಧ ವಾಗ್ದಾಳಿ ● ನಿಮ್ಮ ಮೇಲಿನ ಮುಡಾ ಸೇರಿದಂತೆ ನಾನಾ ಆರೋಪಗಳನ್ನೂ ಸಿಬಿಐ ತನಿಖೆಗೊಪ್ಪಿಸಿ; ಸಿಎಂ ಸಿದ್ದರಾಮಯ್ಯರಿಗೆ ಸವಾಲು

ಬೆಳಗಾವಿ, ವಿಧಾನಮಂಡಲ, ಡಿ.16 (ಕೆಎಂಶಿ)–ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಅವರಿಗೆ 150 ಕೋಟಿ ರೂ. ಆಮಿಷ ಒಡ್ಡಿದ್ದೇನೆ ಎಂಬ ಆರೋಪದ ತನಿಖೆಯನ್ನು ಸಿಬಿಐಗೆ ವಹಿಸಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಧಾನಸಭೆಯಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಮಾಡಿರುವ ಆರೋಪ ಪ್ರಸ್ತಾಪಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ನಿಮಗೆ ಸಿಬಿಐ ಮೇಲೆ ವಿಶ್ವಾಸ ಕೊನೆಗೂ ಬಂದಂತಿದೆ ಎಂದು ಮುಖ್ಯಮಂತ್ರಿ ಅವರನ್ನು ಮೂದಲಿಸಿದ ಅವರು, ನನ್ನ ಮೇಲಿನ ಆರೋಪವೂ ಸೇರಿದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಡೆದಿರುವ 5,000 ಕೋಟಿ ರೂ.ಗಳ ಬಿಡಿ ನಿವೇಶನ ಹಗರಣ, ವಕ್ಫ್ ಅವ್ಯವಹಾರಕ್ಕೆ ಸಂಬಂಧಿಸಿದ ಅವ್ಯವಹಾರವನ್ನು ಸಿಬಿಐ ತನಿಖೆಗೆ ವಹಿಸಿ ಎಂದರು. ವಕ್ಫ್ ಆಸ್ತಿ ಕಬಳಿಕೆ ಬಗ್ಗೆ ಉಪಲೋಕಾಯುಕ್ತ, ನ್ಯಾಯ ಮೂರ್ತಿ ಆನಂದ್ ಅವರು, ಕಳೆದ 2016 ರಲ್ಲಿ ನೀಡಿದ್ದ ವರದಿಯನ್ನು ಮುಚ್ಚಿಹಾಕಿದ್ದೀರಿ. ಅಷ್ಟೇ ಅಲ್ಲ, ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ■ 9ನೇ ಪುಟಕ್ಕೆ



ಪ್ರಿಯಾಂಕ್ ಖರ್ಗೆ



ಬಿ.ವೈ.ವಿಜಯೇಂದ್ರ

ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಅನ್ವರ್ ಮಾಣಿಪ್ಪಾಡಿ ಹೇಳಿಕೆ!



ಮಾಣಿಪ್ಪಾಡಿ

ಮಂಗಳೂರು, ಡಿ.16–ವಕ್ಫ್ ವಿಚಾರವಾಗಿ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಅವರಿಗೆ ವಿಜಯೇಂದ್ರ 150 ಕೋಟಿ ರೂ. ಆಫರ್ ನೀಡಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದ ವಿಚಾರ ಇಂದು ಬೆಳಗಾವಿ ಅಧಿವೇಶನದಲ್ಲಿ ಕೋಲಾಹಲ ಎಬ್ಬಿಸಿತ್ತು. ಮುಖ್ಯಮಂತ್ರಿಗಳು ಸುಳ್ಳು ಹೇಳಿದ್ದಾರೆ ವಿಜಯೇಂದ್ರ ನನಗೆ ಯಾವುದೇ ಆಫರ್ ನೀಡಿಲ್ಲ ಎಂದು ನಿನ್ನೆ ಅನ್ವರ್ ಮಾಣಿಪ್ಪಾಡಿ ಅವರು ಹೇಳಿಕೆ ನೀಡಿದ್ದರು. ಆದರೆ ಇಂದು ಸಚಿವ ಪ್ರಿಯಾಂಕ್ ಖರ್ಗೆ ಮಾಣಿಪ್ಪಾಡಿ ಅವರ ಹಳೇ ವೀಡಿಯೋವೊಂದನ್ನು ಪತ್ರಕರ್ತರ ಮುಂದೆ ಪ್ರದರ್ಶಿಸಿದ ನಂತರ ಮಾಣಿಪ್ಪಾಡಿ ಉಲ್ಟಾ ಹೊಡೆದಿದ್ದಾರೆ.

ಪ್ರಿಯಾಂಕ್‌ಖರ್ಗೆ ಪ್ರದರ್ಶಿಸಿದ ವೀಡಿಯೋದಲ್ಲಿ ಮಾಣಿಪ್ಪಾಡಿ ಅವರು, ವಕ್ಫ್ ವಿಚಾರದಲ್ಲಿ ನನಗೆ ಕೋಟಿ ಕೋಟಿ ರೂ.ಗಳ ಆಫರ್ ನೀಡಲಾಗಿತ್ತು. ವಿಜಯೇಂದ್ರ ಅವರೇ 150 ಕೋಟಿ ರೂ. ಆಫರ್ ಮಾಡಿದ್ದರು. ಅದನ್ನು ತೆಗೆದುಕೊಳ್ಳದೆ ಬಂದವನು ನಾನು. ಮನುಷ್ಯ ಸಹಜ ಕೋಪ ನನಗೆ ■ 9ನೇ ಪುಟಕ್ಕೆ

ಕ್ಲಿನಿಕ್ ತೆರೆಯಲು ನೋಂದಣಿ ಪ್ರಮಾಣಪತ್ರ ಕಡ್ಡಾಯ

● ನಕಲಿ ವೈದ್ಯರ ಹಾವಳಿ ತಡೆಗೆ ಸರ್ಕಾರದ ಕಟ್ಟುನಿಟ್ಟಿನ ಕ್ರಮ
● ಅನಗತ್ಯ ಸಿಸೇರಿಯನ್ ತಡೆಗೂ ವಿಶೇಷ ಕಾರ್ಯಕ್ರಮ
● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ



ದಿನೇಶ್ ಗುಂಡೂರಾವ್

ಬೆಳಗಾವಿ: ನಕಲಿ ವೈದ್ಯರ ಕ್ಲಿನಿಕ್‌ಗಳ ವಿರುದ್ಧ ಕೆಪಿಎಂಇ ತಿದ್ದುಪಡಿ ಅಧಿನಿಯಮದಡಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನಪರಿಷತ್ತಿನಲ್ಲಿ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಗೋವಿಂದರಾಜು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಕ್ಲಿನಿಕ್ ಪ್ರಾರಂಭಿಸಲು ನೋಂದಣಿಗೆ ಅರ್ಜಿ ಸಲ್ಲಿಸಿ, ನಿಯಮಾನುಸಾರ ಕೆಪಿಎಂಇ ನೋಂದಣಿ ಪ್ರಮಾಣಪತ್ರ ಪಡೆಯಬೇಕಿದೆ. ಸದರಿ ನಿಯಮಗಳ ಉಲ್ಲಂಘಿಸಿದವರ ವಿರುದ್ಧ ಕ್ರಮಕೈಗೊಳ್ಳಲು, ಕೆಪಿಎಂಇ ಅಧಿನಿಯಮ ■ 2ನೇ ಪುಟಕ್ಕೆ


ಬಡತನ ರೇಖೆಗಿಂತ ಕೆಳಗಿರುವವರಿಗೆ ಐದು ಲಕ್ಷದವರೆಗೆ ಉಚಿತ ಚಿಕಿತ್ಸೆ

● ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಹೇಳಿಕೆ ● ಕ್ಯಾನ್ಸರ್ ಪೀಡಿತರಿಗೆ ಕಡಿಮೆ ದರದಲ್ಲಿ ವಿಶ್ವದರ್ಜೆ ಚಿಕಿತ್ಸೆ ವ್ಯವಸ್ಥೆ

ಬೆಳಗಾವಿ, ವಿಧಾನಮಂಡಲ, ಡಿ.16(ಕೆಎಂಶಿ)–ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸರ್ಕಾರ ಉಚಿತ ಚಿಕಿತ್ಸೆ ನೀಡಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಆರ್.ಪಾಟೀಲ್ ತಿಳಿಸಿದ್ದಾರೆ.

ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ಕೈಗೆಟುಕುವ ಬೆಲೆಯಲ್ಲಿ ವಿಶ್ವದರ್ಜೆಯ ಕ್ಯಾನ್ಸರ್ ಚಿಕಿತ್ಸೆಯನ್ನು ನೀಡಲಾಗುತ್ತಿದೆ ಎಂದು ವಿಧಾನಪರಿಷತ್ತಿನಲ್ಲಿ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಎಂ.ನಾಗರಾಜು ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ 5 ಲಕ್ಷ ರೂ. ವರೆಗೂ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ, ಅಂದರೆ, 30% ಸರ್ಕಾರದ ಅಡಿಯಿಂದ ಮತ್ತು 70% ರೋಗಿಗಳಿಂದ ಪಡೆದು ಚಿಕಿತ್ಸೆಗಾಗಿ ಭರಿಸಲಾಗುತ್ತದೆ.



ಶರಣ ಪ್ರಕಾಶ್

ವಿವಿಧ ಯೋಜನೆ ಅಡಿಯಲ್ಲಿ ಉಚಿತ ಕ್ಯಾನ್ಸರ್ ಚಿಕಿತ್ಸೆ ನೀಡಲಾಗುತ್ತದೆ. ದುಬಾರಿ ಚಿಕಿತ್ಸೆಗಳಾದ ರೋಬೋಟಿಕ್ ಶಸ್ತ್ರಚಿಕಿತ್ಸೆ, ಅಸ್ಥಿಮಜ್ಜೆ ಹಾಗೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಕ್ಯಾನ್ಸರ್ ತಪಾಸಣೆಗೆ ಸಂಪೂರ್ಣ ಉಚಿತವಾಗಿ ಕಿದ್ವಾಯಿ ಸ್ಮಾರಕ ಗ್ರಂಥಿ ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆಯಡಿ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕ್ಯಾನ್ಸರ್ ರೋಗಕ್ಕೆ ರಾಜ್ಯದಾದ್ಯಂತ 31 ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ಉಪಕರಣಗಳ ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಪುನೀತ್ ಹೃದಯ ಜ್ಯೋತಿ ಯೋಜನೆಯಡಿ 16 ಜಿಲ್ಲಾ ಮತ್ತು 70 ತಾಲೂಕು ಆಸ್ಪತ್ರೆಗಳಲ್ಲಿ ಹಠಾತ್ ಹೃದಯಾಘಾತ ಚಿಕಿತ್ಸೆಗೆ ಒಟ್ಟು 86 ಉಪಕರಣಗಳು ಲಭ್ಯವಿದೆ. ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿರುವವರಿಗೆ ರಾಜ್ಯದಾದ್ಯಂತ 193 ಕೇಂದ್ರಗಳಲ್ಲಿ ಒಟ್ಟು 763 ಡಯಾಲಿಸಿಸ್ ಯಂತ್ರಗಳು ಲಭ್ಯವಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗದಿಂದ ಸರ್ಕಾರಿ ಆಸ್ಪತ್ರೆಗಳಿಗೆ ಮೂಲಸೌಕರ್ಯ ಒದಗಿಸುವಲ್ಲಿ 2024–25ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆವಾರು ಆಸ್ಪತ್ರೆಗಳ ನಿರ್ಮಾಣ ಹಾಗೂ ದುರಸ್ತಿಗೆ 67084.35 ಲಕ್ಷ ರೂ. ಅನುದಾನ ನಿಗದಿಪಡಿಸಿದ್ದು, ಅನುದಾನವನ್ನು ಆದ್ಯತೆ ಮೇರೆಗೆ ಅವಶ್ಯವಿರುವ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದರು.

ಮಾಗಿ ಉತ್ಸವದ ಹಿನ್ನೆಲೆಯಲ್ಲಿ ಡಿ.21 ರಿಂದ 11 ದಿನ

ಮೈಸೂರು ಅರಮನೆ ಅಂಗಳದಲ್ಲಿ ಫಲಪುಷ್ಪದ ಚೆಲುವು

● ಹೂವುಗಳಿಂದ ತಲೆ ಎತ್ತಲಿದೆ ನವದೆಹಲಿಯ ಅಕ್ಷರಧಾಮ, ನಂಜುಂಡೇಶ್ವರನ ಮೂರ್ತಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಆಕೃತಿ ● ಗಮನ ಸೆಳೆಯಲಿವೆ ಮಹತ್ವದ ಪಂಚ ಗ್ಯಾರಂಟಿ ಯೋಜನೆ, ಹದ್ದು, ಮರಿಯಾನೆ, ಆಮೆ ಇನ್ನಿತರ ರೂಪಗಳು



ಹೊಸ ವರ್ಷದ ಅಂಗವಾಗಿ ಜ.1ರಂದು ಮಧ್ಯರಾತ್ರಿ 12ರಿಂದ 12.15ರವರೆಗೆ ಅರಮನೆ ಮಂಡಳಿ ವತಿಯಿಂದ ಶಬ್ದರಹಿತ, ಹಸಿರು ಪಟಾಕಿ, ಬಾಣ ಬಿರುಸುಗಳ ಸಿಡಿತವಿರುತ್ತದೆ.

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಡಿ.16– ಹೊಸ ವರ್ಷದ ಸಂಭ್ರಮಾಚರಣೆಯೊಂದಿಗೆ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪ್ರವಾಸಿಗರಿಗೆ ವಿಶೇಷ ಮುದ ನೀಡಲು ಅರಮನೆ ಆವರಣದಲ್ಲಿ ಹನ್ನೊಂದು ದಿನಗಳ ಫಲ–ಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ಈ ಬಾರಿ ಲಕ್ಷಾಂತರ ಹೂವುಗಳ ಬಳಸಿ, ದೆಹಲಿಯ ಅಕ್ಷರಧಾಮ, ನಂಜುಂಡೇಶ್ವರ ಹಾಗೂ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಯ ಆಕೃತಿಗಳು ರೂಪತಾಳಿ, ಕಣ್ಮನ ಸೆಳೆಯಲಿವೆ.

ಈ ಬಾರಿಯೂ ಮೈಸೂರು ಜಿಲ್ಲಾಡಳಿತ ಅರಮನೆ ಮಂಡಳಿಯೊಂದಿಗೆ ಅರಮನೆ ಆವರಣದಲ್ಲಿ ಮಾಗಿ ಉತ್ಸವ ಆಯೋಜಿಸಿದ್ದು, ಹಲವು ವೈಶಿಷ್ಟ್ಯತೆಯೊಂದಿಗೆ ಅರಮನೆ ಹಾಗೂ ಮೈಸೂರಿಗೆ ಬರುವ ಪ್ರವಾಸಿಗರನ್ನು ಸಸ್ಯಲೋಕ ಆಕರ್ಷಿಸಲಿದೆ. ಡಿ.21ರಿಂದ 31ರವರೆಗೂ ಫಲಪುಷ್ಪ ಪ್ರದರ್ಶನವಿದ್ದು, 25 ಸಾವಿರ ನಾನಾ ಹೂವಿನ ಕುಂಡಗಳಲ್ಲಿ ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯ, ನಸ್ಟರ್‌ಸಿಯಂ, ಆಂಟಿರೈನಂ, ವರ್ಬಿನ, ■ 9ನೇ ಪುಟಕ್ಕೆ

ಅರಮನೆ ಆವರಣದಲ್ಲಿ ಸಂಗೀತ ಕಾರ್ಯಕ್ರಮ

■ **ಡಿ.21:** ಸಂಜೆ 5.30ರಿಂದ 6.30ರವರೆಗೆ ಸಿ.ಆರ್.ರಾಘವೇಂದ್ರ ಪ್ರಸಾದ್ ತಂಡದಿಂದ ವಾದ್ಯ ಸಂಗೀತ, ಸಂಜೆ 7ಕ್ಕೆ ಎ.ಆರ್.ಕಲಾತಂಡದಿಂದ ನಾಡಗೀತೆ, ಮೈಸೂರು ಸಂಸ್ಥಾನದ ನಾಡಗೀತೆ ಕಾಯೋ ಶ್ರೀಗೌರಿ ಕರುಣಾಲಹರಿ ಗೀತೆ ಗಾಯನ, 7.15ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ, ಸಂ. 7.30 ರಿಂದ 9.30ರವರೆಗೆ ಗಾಯಕ ಮಧುಬಾಲಕೃಷ್ಣನ್ ತಂಡದಿಂದ ಸಂಗೀತ ಸಂಜೆ.



■ **ಡಿ.22:** ಸಂಜೆ 6ರಿಂದ 6.45ರವರೆಗೆ ಆರ್.ರಘು ತಂಡದಿಂದ ಗೀತ ಗಾಯನ, 6.45ರಿಂದ 7.15ರವರೆಗೆ ಭಾರತೀಯ ವಿದ್ಯಾಭವನದ ವಿದ್ಯಾರ್ಥಿಗಳಿಂದ ನೃತ್ಯರೂಪಕ, ಸಂಜೆ 7.30ರಿಂದ ರಾತ್ರಿ 9.30ರವರೆಗೆ ಹಿನ್ನೆಲೆ ಗಾಯಕ ವಿಜಯ್ ಪ್ರಕಾಶ್ ಮತ್ತು ತಂಡದಿಂದ ಸಂಗೀತ ಸಂಜೆ.

■ **ಡಿ.23:** ಸಂಜೆ 6ರಿಂದ 6.45ರವರೆಗೆ ಆಯುಷ್ ಎಂ.ಡಿ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸಂಜೆ 8ರಿಂದ ರಾತ್ರಿ 9.30ರವರೆಗೆ ಮೃದಂಗ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಮತ್ತು ತಂಡದಿಂದ ಲಯ–ಲಾವಣ್ಯ ಕಾರ್ಯಕ್ರಮ.

■ **ಡಿ.24:** ಸಂಜೆ 6ರಿಂದ 6.45ರವರೆಗೆ ಷಡಜ್ ಗೋಡ್ಖಿಂಡಿ(ಕೊಳಲು) ಮತ್ತು ಅಪೂರ್ವ ಕೃಷ್ಣ(ಪಿಟೀಲು) ಮತ್ತು ತಂಡದಿಂದ ಫ್ಯೂಷನ್ ಸಂಗೀತ, ಸಂ.7ರಿಂದ 8ರವರೆಗೆ ಸಿದ್ಧಾರ್ಥ್ ಬೆಲ್ಮಣ್ಣು ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಗೂ ವರ್ಣಚಿತ್ರ ಕಲಾವಿದ ಗಂಜೀಫಾ ರಘುಪತಿ ಭಟ್ ಅವರಿಂದ ದಾಸವಾಣಿ ಚಿತ್ರಾ, ರಾತ್ರಿ 8ರಿಂದ 9.30ರವರೆಗೆ ಚಂಪಕ ಅಕಾಡೆಮಿ ವೃಂದದಿಂದ ಡಾ.ನಾಗಲಕ್ಷ್ಮಿ ನಾಗರಾಜನ್ ಹಾಗೂ 40 ಜನರ ತಂಡದಿಂದ ಶ್ರೀಕೃಷ್ಣ ಲೀಲಾ ಪದ್ಮಭೂಷಣ ಡಿ.ವಿ.ಜಿ ವಿರಚಿತ ಗೇಯ ನೃತ್ಯ ನಾಟಕ.

■ **ಡಿ.25:** ಸಂಜೆ 5.45ರಿಂದ 6.30ರವರೆಗೆ ನಾಹರ್ ಗುರುದತ್ತ ಮತ್ತು ತಂಡದಿಂದ ಶಾಸ್ತ್ರೀಯ ಸಂಗೀತ, ಸಂಜೆ 6.30ರಿಂದ 7.30ರವರೆಗೆ ವಿದ್ವಾನ್ ಡಾ.ಸಿ.ಎ.ಶ್ರೀಧರ್, ವಿದ್ವಾನ್ ಸಿ.ಎಸ್.ಕೇಶವಚಂದ್ರ ಮತ್ತು ವೃಂದದಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವ ವೇಣುವಾದನ, ಸಂಜೆ 7.30ರಿಂದ ರಾತ್ರಿ 9 ಗಂಟೆವರೆಗೆ ಜೀ ಕನ್ನಡ ವಾಹಿನಿ ರಿಯಾಲಿಟಿ ಶೋ ಗಾಯಕರಾದ ದರ್ಶನ್ ನಾರಾಯಣ್, ಐಶ್ವರ್ಯ ರಂಗರಾಜನ್, ಸುನೀಲ್ ಗುಜಗೊಂಡ್, ವಸುಶ್ರೀ ಹಳೆಮನೆ, ಜ್ಞಾನ ಗುರುರಾಜ್ ಮತ್ತು ತಂಡದಿಂದ ಸಂಗೀತ ಯಾನ.

■ **ಡಿ.31:** ರಾತ್ರಿ 11ರಿಂದ 12 ಗಂಟೆವರೆಗೆ ಪೊಲೀಸ್ ಬ್ಯಾಂಡ್ ತಂಡದಿಂದ ಕರ್ನಾಟಕ ಮತ್ತು ಆಂಗ್ಲ ಬ್ಯಾಂಡ್ ವಾದನ.

‘ಒಂದು ದೇಶ, ಒಂದು ಚುನಾವಣೆ’ ಮಸೂದೆ ಇಂದು ಲೋಕಸಭೆಯಲ್ಲಿ ಮಂಡನೆ ಸಾಧ್ಯತೆ

ನವದೆಹಲಿ: ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಸಂವಿಧಾನಾತ್ಮಕ ತಿದ್ದುಪಡಿ ಮಸೂದೆಯನ್ನು ಮಂಗಳವಾರ ಸಂಸತ್ತಿನಲ್ಲಿ ಮಂಡಿಸುವ ಸಾಧ್ಯತೆ ಇದ್ದು, ಇದನ್ನು ಉಭಯ ಸದನಗಳ ಜಂಟಿ ಸಮಿತಿಗೆ ಶಿಫಾರಸು ಮಾಡಬಹುದು.

‘ಒಂದು ದೇಶ, ಒಂದು ಚುನಾವಣೆ’ ಮಸೂದೆ ಎಂದು ಉಲ್ಲೇಖಿಸಲ್ಪಡುವ ಸಂವಿಧಾನ(ನೂರಾ ಇಪ್ಪತ್ತೊಂಬತ್ತನೇ ತಿದ್ದುಪಡಿ) ತಿದ್ದುಪಡಿ ಮಸೂದೆ, 2024 ಅನ್ನು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ನಾಳೆ ಲೋಕಸಭೆಯಲ್ಲಿ ಮಂಡಿಸುವ ನಿರೀಕ್ಷೆಯಿದೆ ಎಂದು ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಸೂದೆ ಮಂಡಿಸಿದ ನಂತರ, ವ್ಯಾಪಕ ಸಮಾಲೋಚನೆಗಾಗಿ ಸಂಸತ್ತಿನ ಜಂಟಿ ಸಮಿತಿಗೆ ಶಿಫಾರಸು ಮಾಡುವಂತೆ ಮೇಘವಾಲ್ ಅವರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಮಾಡುವ ಸಾಧ್ಯತೆ ಇದೆ. ವಿವಿಧ ಪಕ್ಷಗಳ ಸಂಸದರ ಸಂಖ್ಯಾಬಲದ ಆಧಾರದ ಮೇಲೆ ಜಂಟಿ ಸದನ ಸಮಿತಿಯನ್ನು ರಚಿಸಲಾಗುತ್ತದೆ.



ಲೋಕಸಭೆಯಲ್ಲಿ ಅತೀ ದೊಡ್ಡ ಪಕ್ಷವಾಗಿರುವ ಬಿಜೆಪಿಗೆ ಸಮಿತಿಯ ಅಧ್ಯಕ್ಷಸ್ಥಾನ ದೊರೆಯಲಿದ್ದು, ಹಲವು ಪಕ್ಷಗಳ ಸಂಸದರು ಸದಸ್ಯರಾಗಲಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಲೋಕಸಭೆ, ರಾಜ್ಯ ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಏಕಕಾಲಕ್ಕೆ ಹಂತ ಹಂತವಾಗಿ ನಡೆಸಲು ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಶಿಫಾರಸು ಮಾಡಿದ್ದ ವರದಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಕಳೆದ ವಾರ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಂದು ದೇಶ, ಒಂದು ಚುನಾವಣೆ ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಇದರ ಉದ್ದೇಶವಾಗಿದೆ.

ಜಾರ್ಜಿಯಾದ ರೆಸ್ಟೋರೆಂಟ್‌ನಲ್ಲಿ 12 ಭಾರತೀಯರ ಶವ ಪತ್ತೆ!

ಜಾರ್ಜಿಯಾ: ಜಾರ್ಜಿಯಾದ ಗುಡೌರಿ ಪರ್ವತದ ರೆಸಾರ್ಟ್‌ನಲ್ಲಿರುವ ರೆಸ್ಟೋರೆಂಟ್‌ನಲ್ಲಿ 12 ಭಾರತೀಯ ಪ್ರಜೆಗಳು ಶವವಾಗಿ ಪತ್ತೆಯಾಗಿದ್ದಾರೆ. ಕಾರ್ಬನ್ ಮಾನಾಕ್ಸೈಡ್ ವಿಷಾನಿಲದಿಂದ ಎಲ್ಲರೂ ಸಾವನ್ನಪ್ಪಿದ್ದಾರೆ ಎಂದು ದೇಶದ ಆಂತರಿಕ ವ್ಯವಹಾರಗಳ ಸಚಿವಾಲಯ ಹೇಳಿದೆ. ಪ್ರಾಥಮಿಕ ತನಿಖೆಯಲ್ಲಿ ಯಾವುದೇ ಗಾಯಗಳು ಅಥವಾ ಹಿಂಸಾಚಾರದ ಲಕ್ಷಣಗಳು ಕಂಡುಬಂದಿಲ್ಲ ಎಂದು ಜಾರ್ಜಿಯಾದ ಆಂತರಿಕ ವ್ಯವಹಾರಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಸ್ಥಳೀಯ ಮಾಧ್ಯಮಗಳು, ಪೊಲೀಸರನ್ನು ಉಲ್ಲೇಖಿಸಿ, ಮೃತ ಎಲ್ಲರೂ ಕಾರ್ಬನ್ ಮಾನಾಕ್ಸೈಡ್ ವಿಷದಿಂದ ಸಾವನ್ನಪ್ಪಿದ್ದಾರೆ ಎಂದು ವರದಿ ಮಾಡಿದೆ. ಮೃತ 12 ಮಂದಿ ಭಾರತೀಯ ನಾಗರಿಕರು ■ 2ನೇ ಪುಟಕ್ಕೆ

ಮೈಸೂರು ಮಿತ್ರ

ಕ್ರಿಸ್‌ಮಸ್ ಕೇಕ್ ವಿತರಣೆ



ಮೈಸೂರಿನ ಡಯಾಸಿಸ್ ಆಫ್ ಮೈಸೂರು ಮತ್ತು ವಿಕಲಚೇತನರ ಆಯೋಗ ಮತ್ತು ಕಾರಾಗೃಹ ಸಚಿವಾಲಯದ ವತಿಯಿಂದ ಬನ್ನಿಮಂಟಪದ ಕ್ಯಾಥೋಲಿಕ್ ಸೆಂಟರ್‌ನಲ್ಲಿ ನಡೆದ ದೇವರ ಮಕ್ಕಳ ಕ್ರಿಸ್‌ಮಸ್ ಆಚರಣೆ ಸಂದರ್ಭದಲ್ಲಿ ವಿಕಲ ಚೇತನ ಮಕ್ಕಳು ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್‌ಗೆ ಕೇಕ್ ನೀಡಿದರು. ಚಿತ್ರದಲ್ಲಿ ಅಭಿಲಾಷ್, ಜಯಪ್ರಕಾಶ್, ಫೆ. ಸೆಬಾಸ್ಟಿಯನ್, ಮೊನಿಸಿಗ್ನೂರ್, ಆಲ್ಬರೆಡ್ ಮೆಂಡೋನ್ಸಾ, ಡಾ.ಬರ್ನಾಡ್ ಮೊರಾಸ್, ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಟರ್ ಡಾ. ಮೈಕೆಲ್ ನೊರೋನ್ಹಾ, ಫೆ. ಥಾಮಸ್ ಬಾರೂಸ್ ಮತ್ತು ಎಸ್ತೆಲ್ಲೋ ಡಿಸೋಜಾ, ಕಾರಾಗೃಹ ಸಚಿವಾಲಯದ ಸದಸ್ಯರನ್ನು ಕಾಣಬಹುದು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಶ್ರೀರಾಂಪುರ ದಲ್ಲಿರುವ ಮರ್ಸಿ ಕಾನ್ವೆಂಟ್‌ನ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಹಣ್ಣು, ಹಂಪಲು ಹಾಗೂ ಲೇಖನಿ ಸಾಮಗ್ರಿಗಳನ್ನು ವಿತರಿಸಲಾಯಿತು. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ನಗರ ಜೆಡಿಎಸ್ ಮಾಜಿ ಮಹಾ ಪ್ರಧಾನ ಕಾರ್ಯದರ್ಶಿ ಪಿ.ಎಸ್.ರಾಜಶೇಖರ ಮೂರ್ತಿ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ವೀರಭದ್ರಸ್ವಾಮಿ, ಸುಬ್ರಮಣಿ, ಮಹದೇವ್, ಯಶ್ವಂತ್ ಕುಮಾರ್, ಸಿದ್ದಲಿಂಗಸ್ವಾಮಿ, ಶ್ರೀಧರ್, ಮಹೇಶ್, ಅಕ್ಷಯ ಪ್ರಿಯದರ್ಶನ, ಹರ್ಷಿತ್ ಎಸ್.ನಾಗೇಶ್ ಇತರರಿದ್ದರು.

ಒಂದನೇ ಪುಟದಿಂದ

ನೋಂದಣಿ ಪ್ರಮಾಣಪತ್ರ ಕಡ್ಡಾಯ

2007,ಸೆಕ್ಷನ್ 4ರನ್ವಯ ನೋಂದಣಿ ಮತ್ತು ಕುಂದುಕೊರತೆ ಪ್ರಾಧಿಕಾರವಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಸಮಿತಿ ರಚಿಸಲಾಗಿದೆ ಎಂದರು.

ಅನಗತ್ಯ ಸಿಸೆರಿಯನ್ ಹೆರಿಗೆ ತಡೆಗಟ್ಟಲು ಮುಂದಿನ ತಿಂಗಳು ವಿಶೇಷ ಕಾರ್ಯ ಕ್ರಮ ಘೋಷಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಜಗದೇವ ಗುತ್ತೇದಾರ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಅನಗತ್ಯ ಸಿಜೇರಿಯನ್ ಹೆರಿಗೆ ತಡೆಯಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ದಿನದ 24 ಗಂಟೆ ಪ್ರಸೂತಿ ಸೇವೆ ನೀಡಲು ಬಲಪಡಿಸಲಾಗುತ್ತಿದೆ.

ರಾತ್ರಿ ವೇಳೆಯಲ್ಲಿ ಸಹಜ ಹೆರಿಗೆಗಳನ್ನು, ಅವಶ್ಯವಿದ್ದಲ್ಲಿ, ಸಿಜೇರಿಯನ್ ಶಸ್ತ್ರಚಿಕಿತ್ಸೆ ನಡೆಸಲು ಅನುಕೂಲವಾಗುತ್ತಿದೆ. ಈ ಕ್ರಮದಿಂದ ತಾಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಶಿಫಾರಸ್ಸುಗೊಳ್ಳುವ ಸಂಖ್ಯೆಯು ಕಡಿಮೆ ಆಗಲಿದ್ದು ಅನಗತ್ಯ ಸಿಜೇರಿಯನ್ ಶಸ್ತ್ರಚಿಕಿತ್ಸೆಗೆ ಕಡಿವಾಣ ಹಾಕಲಾಗುತ್ತಿದೆ ಎಂದರು. ಸಹಜ ಹೆರಿಗೆಗಳನ್ನು ಹೆಚ್ಚಿಸಲು ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆ ಕಡಿಮೆ ಮಾಡಲು ಯೋಜನೆ ಪ್ರಾರಂಭಿಸಲಾಗಿದೆ, ಈ ಯೋಜನೆಯಲ್ಲಿ ಶುಶ್ರೂಷಾಧಿಕಾರಿಗಳಿಗೆ 18 ತಿಂಗಳ ತರಬೇತಿ ನೀಡಲಾಗುತ್ತದೆ, ಇದರಿಂದ ಹೆರಿಗೆ ಕೋಣೆಯಲ್ಲಿ ಸಹಜ ಹೆರಿಗೆ ನೆರವೇರಿಸಲು ತಜ್ಞತೆ ಹೊಂದಿರುತ್ತಾರೆ. ಪ್ರಸ್ತುತ ತರಬೇತುದಾರರ ತರಬೇತಿಯನ್ನು ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ ಮತ್ತು ಹೈದರಬಾದ್‌ನ ಫರ್ನಾಂಡಿಸ್ ಫೌಂಡೇಷನ್‌ನಲ್ಲಿ ಪೂರ್ಣಗೊಳಿಸಿ ಬೆಂಗಳೂರು, ಮೈಸೂರು ಮತ್ತು ಬೆಳಗಾವಿಯಲ್ಲಿ ಶುಶ್ರೂಷಾಧಿಕಾರಿಗಳಿಗೆ 18 ತಿಂಗಳ ತರಬೇತಿ ನೀಡುತ್ತಿದ್ದಾರೆ.

ಶುಶ್ರೂಷಾಧಿಕಾರಿಗಳಿಗೆ ತರಬೇತಿ: ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ನಡೆಸಲಾಗುತ್ತಿರುವ 1830 ಶುಶ್ರೂಷಾಧಿಕಾರಿಗಳ ತರಬೇತಿಯಲ್ಲಿ 12 ತಿಂಗಳು ಪೂರ್ಣಗೊಂಡಿದ್ದು, ಇನ್ನು 6 ತಿಂಗಳಲ್ಲಿ ತರಬೇತಿ ಮುಗಿಯಲಿದ್ದು ಜುಲೈ, 2025ರಿಂದ ಹಾಸನ, ಮಂಡ್ಯ ಮತ್ತು ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಎಂಎಲ್‌ಸಿಯು ಕಾರ್ಯಾರಂಭ ಮಾಡಲಿದೆ. ಬೆಂಗಳೂರಿನಲ್ಲಿ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ 25 ಶುಶ್ರೂಷಾಧಿಕಾರಿಗಳು ಎನ್‌ಪಿಎಂ ತರಬೇತಿಯನ್ನು ಜುಲೈ, 2024 ರಲ್ಲಿ ಪ್ರಾರಂಭಿಸಲಾಗಿದ್ದು, ಡಿಸೆಂಬರ್ 2025 ರವರೆಗೆ 18 ತಿಂಗಳ ತರಬೇತಿ ಮುಗಿಯಲಿದ್ದು, ನಂತರ ಕೋಲಾರ, ಬೆಂಗಳೂರು, ದಾವಣಗೆರೆ ಮತ್ತು ತುಮಕೂರು ಜಿಲ್ಲಾ ಆಸ್ಪತ್ರೆಗಳಲ್ಲಿ ಎಂಎಲ್‌ಸಿಯು ಪ್ರಾರಂಭಗೊಳ್ಳುತ್ತದೆ.

ಭ್ರೂಣ ಹತ್ಯೆ ತಡೆಗೆ ಕ್ರಮ: ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ 2023-24ರಿಂದ 8 ಪ್ರಕರಣ ದಾಖಲಿಸಿ 46 ಆರೋಪಿಗಳನ್ನು ಬಂಧಿಸಲಾಗಿದೆ. ಸ್ಕ್ಯಾನಿಂಗ್ ಸೆಂಟರ್ ಮತ್ತು ಆಸ್ಪತ್ರೆಗಳ ತಪಾಸಣೆ ಹೆಚ್ಚಿಸಿರುವುದರಿಂದ ಭ್ರೂಣ ಹತ್ಯೆ ಪ್ರಕರಣಗಳು ಪತ್ತೆಯಾ ಗುತ್ತಿವೆ ಎಂದರು. ಭ್ರೂಣ ಹತ್ಯೆ ತಡೆಯಲು ಸರ್ಕಾರ ಪಿ.ಸಿ. ಮತ್ತು ಪಿ.ಎನ್.ಡಿ.ಟಿ. ಕಾಯ್ದೆಯಡಿ ಎಲ್ಲಾ ಶಾಸನಬದ್ಧ ಸಮಿತಿಗಳನ್ನು ಜಿಲ್ಲೆಗಳಲ್ಲಿ ರಚನೆ ಮಾಡಲಾಗಿದೆ.

'ಬಾಲಿಕಾ' ಆನ್ಲೈನ್ ಸಾಫ್ಟ್‌ವೇರ್ ಮೂಲಕ ಎಲ್ಲಾ ಸ್ಕ್ಯಾನಿಂಗ್ ಕೇಂದ್ರಗಳನ್ನು 2018ರಿಂದ ಕಡ್ಡಾಯ ನೋಂದಣಿ ಮತ್ತು ನವೀಕರಣ ಮಾಡಲಾಗುತ್ತಿದೆ, ಗರ್ಭಿಣಿಯರ ನೊಂದಣಿ ಪ್ರಕ್ರಿಯೆ ಶೇ. 100ರಷ್ಟು ಚಾಲ್ತಿಯಲ್ಲಿದೆ, ಗ್ರಾಮಮಟ್ಟದಲ್ಲಿ ಜನನ ಸಮಯದ ಲಿಂಗಾನುಪಾತ ದತ್ತಾಂಶಗಳ ಮಾಹಿತಿ ತಂತ್ರಜ್ಞಾನದ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಕಾಯ್ದೆ ಉಲ್ಲಂಘಿಸಿ ರುವ ಸ್ಕ್ಯಾನಿಂಗ್ ಸೆಂಟರ್, ಮಾಲೀಕರು, ವೈದ್ಯರ ವಿರುದ್ಧ ಒಟ್ಟು 136 ಪ್ರಕರಣಗಳು ನ್ಯಾಯಾಲಯದಲ್ಲಿವೆ, 74 ಪ್ರಕರಣಗಳು ಇತ್ಯರ್ಥಗೊಂಡಿದ್ದು, 65 ಪ್ರಕರಣಗಳು ವಿವಿಧ ಹಂತದಲ್ಲಿ ಬಾಕಿ ಇವೆ ಎಂದರು.

ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಕುರಿತು ಮಾಹಿತಿ ನೀಡಿ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಸಹಕರಿಸುವ ಮಾಹಿತಿದಾರರಿಗೆ ಸರ್ಕಾರ ನೀಡುತ್ತಿದ್ದ ಬಹುಮಾನ ಮೊತ್ತವನ್ನು 50,000 ದಿಂದ ಒಂದು ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಮಂಡ್ಯ, ಕೋಲಾರ ಜಿಲ್ಲೆ ಗಳಲ್ಲಿ ರಹಸ್ಯ ಕಾರ್ಯಚರಣೆ ನಡೆಸ ಲಾಗಿದೆ ಹಾಗೂ ಹೆಣ್ಣು ಭ್ರೂಣಹತ್ಯೆ ತಡೆಗೆ ಜನ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಎಂಟು ವಿಧೇಯಕ ಅಂಗೀಕಾರ

ಮಸೂದೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ಮಸೂದೆ ಮತ್ತು ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಸ್ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಯಿತು. ಇನ್ನೂ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕ, ಕರ್ನಾಟಕ ರಾಜ್ಯ ವಿಶ್ವ ವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ ಮತ್ತು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ನಿಯಂತ್ರಣ (ತಿದ್ದುಪಡಿ) ವಿಧೇಯಕಗಳನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.

12 ಭಾರತೀಯರ ಶವ ಪತ್ತೆ!

ಎಂದು ಟಿಬಿಲಿಸಿಯಲ್ಲಿರುವ ಭಾರತೀಯ ಹೈಕಮಿಷನರ್ ಹೇಳಿದ್ದಾರೆ. ಆದಾಗ್ಯೂ, ಜಾರ್ಜಿಯಾದ ಆಂತರಿಕ ವ್ಯವಹಾರಗಳ ಸಚಿವಾಲಯದ ಹೇಳಿಕೆಯು 12 ವಿದೇಶಿಯರು ಮೃತಪಟ್ಟಿದ್ದಾರೆ ಎಂದು ಹೇಳಿದೆ. ಮೃತರ ಶವಗಳು ರೆಸ್ಟೋರೆಂಟ್‌ನ ಎರಡನೇ ಮಹಡಿಯಲ್ಲಿರುವ ಮಲಗುವ ಕೋಣೆಗಳಲ್ಲಿ ಪತ್ತೆಯಾಗಿವೆ ಎಂದು ಅದು ಹೇಳಿದೆ.

ಜಾರ್ಜಿಯಾದ ಗುಡೌರಿಯಲ್ಲಿ 12 ಭಾರತೀಯ ಪ್ರಜೆಗಳ ಸಾವಿನ ಬಗ್ಗೆ ಮಾಹಿತಿ ಸಿಕ್ಕಿದೆ ಎಂದು ಭಾರತೀಯ ಹೈಕಮಿಷನರ್ ಹೇಳಿಕೆಯಲ್ಲಿ ತಿಳಿಸಿದೆ. ಅಗಲಿದ ಕುಟುಂಬಗಳಿಗೆ ಆಳವಾದ ಸಂತಾಪ. ಪ್ರಾಣ ಕಳೆದುಕೊಂಡ ಭಾರತೀಯ ಪ್ರಜೆಗಳ ಬಗ್ಗೆ ಮಾಹಿತಿ ಪಡೆಯಲು ಹೈಕಮಿಷನರ್ ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದಾರೆ. ಸಾಧ್ಯವಿರುವ ಎಲ್ಲ ನೆರವು ನೀಡಲಾಗುವುದು ಎಂದು ಹೇಳಿದೆ.

ಪೊಲೀಸರು ಜಾರ್ಜಿಯಾದ ಕ್ರಿಮಿನಲ್ ಕೋಡ್‌ನ ಆರ್ಟಿಕಲ್ 116ರ ಅಡಿಯಲ್ಲಿ ತನಿಖೆಯನ್ನು ಪ್ರಾರಂಭಿಸಿದ್ದು ಇದು ನಿರ್ಲಕ್ಷ್ಯದಿಂದ ಕೊಲೆ ಎಂದು ಉಲ್ಲೇಖಿಸಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ, ಮಲಗುವ ಕೋಣೆ ಬಳಿ ಮುಚ್ಚಿದ ಜಾಗದಲ್ಲಿ ವಿದ್ಯುತ್ ಜನರೇಟರ್ ಅನ್ನು ಇರಿಸಲಾಗಿತ್ತು. ಶುಕ್ರವಾರ ರಾತ್ರಿ ವಿದ್ಯುತ್ ಸರಬರಾಜು ಸ್ಥಗಿತಗೊಂಡ ನಂತರ ಅದನ್ನು ಆನ್ ಮಾಡಲಾಗಿದೆ. ಸಾವಿಗೆ ನಿಖರವಾದ ಕಾರಣವನ್ನು ನಿರ್ಧರಿಸಲು ಫೋರೆನ್ಸಿಕ್ ವೈದ್ಯಕೀಯ ಪರೀಕ್ಷೆಯನ್ನು ಸಹ ನೇಮಿಸಲಾಗಿದೆ. ಫೋರೆನ್ಸಿಕ್-ಕ್ರಿಮಿನಾಲಜಿಸ್ಟ್‌ಗಳು ದೃಶ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಗಳ ಸಂದರ್ಶನಗಳೊಂದಿಗೆ ತನಿಖೆಯನ್ನು 'ಪೂರ್ವಭಾವಿಯಾಗಿ' ಅನುಸರಿಸಲಾಗುತ್ತಿದೆ ಎಂದು ಹೇಳಿದರು.

ವೈದ್ಯರು ಸಮರ್ಪಣಾ ಮನೋಭಾವದಿಂದ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಬೇಕು

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಿವಿಮಾತು

ಮೈಸೂರು,ಡಿ.16-ವೈದ್ಯರು ಸಮರ್ಪಣಾ ಮನೋಭಾವದಿಂದ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಬೇಕು ಎಂದು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಹೇಳಿದರು.

ಹೈದರಾಬಾದಿನ ಯಶೋದಾ ಆಸ್ಪತ್ರೆಯಲ್ಲಿ ದೀರ್ಘಕಾಲೀನ ಮೂತ್ರಪಿಂಡ ಕಾಯಿಲೆಗೆ ಸಂಬಂಧಿಸಿದ ಅತ್ಯಾಧುನಿಕ ಚಿಕಿತ್ಸಾ ಘಟಕವನ್ನು ಉದ್ಘಾಟಿಸಿ ಮಾತನಾಡುತ್ತಾ, ಸೇವೆ, ಸಹಾನುಭೂತಿ ಮತ್ತು ಆರೋಗ್ಯ ಸಂರಕ್ಷಣೆಯ ಜವಾಬ್ದಾರಿ ವೈದ್ಯಕೀಯ ಸೇವೆಯಲ್ಲಿ ಬಹಳ ಮುಖ್ಯ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಎಂಬ ಪುರಂದರದಾಸರ ನುಡಿಯಂತೆ ವೈದ್ಯರು ಉತ್ತಮ ಚಿಕಿತ್ಸೆಯ ಮೂಲಕ ಸಮಾಜಕ್ಕೆ ತಮ್ಮ ವಿದ್ವತ್‌ನ್ನು ಹಿಂದಿರುಗಿಸಬೇಕು. ಹಿರಿಯ ವಿದ್ಯಾರ್ಥಿಗಳು ಸಮರ್ಪಣಾ ಮನೋಭಾವದಿಂದ ಮಾನವ ಸೇವೆಯನ್ನು ಮುಂದುವರಿಸಬೇಕು. ನೂತನ ಚಿಕಿತ್ಸಾ ಘಟಕ ಸಮುದಾಯದ ತುರ್ತು ಆರೋಗ್ಯದ ಅಗತ್ಯತೆಗಳನ್ನು ಒದಗಿಸುವ ಗುರಿ ಹೊಂದಿದೆ. ಇದು ಸಹಾನುಭೂತಿ ಮತ್ತು ನಾವೀನ್ಯತೆಗೆ ಸಾಕ್ಷಿಯಾಗಿದೆ. ಜೆಎಸ್‌ಎಸ್ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಾಧನೆಗಳ ಬಗ್ಗೆ ಅಪಾರವಾದ ಹೆಮ್ಮೆ ಹೊಂದಿದೆ. ಅವರು ಹೀಗೆಯೇ ಯಶಸ್ಸು ಸಾಧಿಸುತ್ತಿರಲೆಂದು ಹಾರೈಸಿದರು.



ಹೈದರಾಬಾದಿನ ಯಶೋದಾ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಚಿಕಿತ್ಸಾ ಘಟಕವನ್ನು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ದೇವದಾಸ್ ಮಾತನಾಡಿ, ಆರೋಗ್ಯ ವ್ಯವಸ್ಥೆಯಲ್ಲಿ ಸಹಾನುಭೂತಿಯ ನಿರ್ಣಾಯಕ ಪಾತ್ರ ಮುಖ್ಯ. ಕೌಶಲ, ಸಹಾನುಭೂತಿ ಮೇಳೈಸಿರುವ ವೃತ್ತಿಪರರನ್ನು ಪೋಷಿಸುವಲ್ಲಿ ಜೆಎಸ್‌ಎಸ್ ಸಂಸ್ಥೆ ಮಾಡುತ್ತಿರುವ ಸೇವೆಯನ್ನು ಶ್ಲಾಘಿಸಿದರು.

ಸಂಸದರು, ಮಾಜಿ ಕೇಂದ್ರ ಸಚಿವೆ ಶ್ರೀಮತಿ ರೇಣುಕಾ ಚೌಧರಿ ಮಾತನಾಡಿ, ಸಾರ್ವಜನಿಕ ಕಲ್ಯಾಣ ಕ್ಷೇತ್ರದಲ್ಲಿ ಸ್ವಾಮೀಜಿಯವರ ದೂರದೃಷ್ಟಿಯ ಕಾರ್ಯಕ್ರಮಗಳು ಶ್ಲಾಘನೀಯ. ಜಾಗತಿಕವಾಗಿ ಆರೋಗ್ಯ ಸಂರಕ್ಷಣೆ ಗುಣಮಟ್ಟವನ್ನು ವೃದ್ಧಿಸುವಲ್ಲಿ ಜೆಎಸ್‌ಎಸ್ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಡಾ.ರಾಜಶೇಖರ್ ಚಕ್ರವರ್ತಿ ಕಿರಿಯ ವಯಸ್ಸಿನಿಂದಲೂ ತಾಳ್ಮೆ, ಪ್ರೀತಿ, ವಿಶ್ವಾಸಗಳಿಂದ ಸೇವೆ ಸಲ್ಲಿಸುತ್ತಾ, ಎಲ್ಲರ ಪ್ರೀತಿ ವಿಶ್ವಾಸ ಗಳಿಸಿರುವುದು ಅತ್ಯಂತ ಸಂತೋಷದ ಸಂಗತಿ ಎಂದು ತಿಳಿಸಿದರು.

ಯಶೋಧಾ ಆಸ್ಪತ್ರೆಗಳ ಅಧ್ಯಕ್ಷ ಜಿ.ರವೇಂದರ್‌ರಾವ್ ಗೊರುಕುಂಟಿ, ಡಾ.ರಾಜಶೇಖರ ಚಕ್ರವರ್ತಿ, ಜೆಎಸ್‌ಎಸ್ ಉನ್ನತ ಶಿಕ್ಷಣ-ಸಂಶೋಧನಾ ಅಕಾಡೆಮಿ ಸಮಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಎಚ್.ಬಸವನಗೌಡಪ್ಪ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.16- ಒಂಟಿಕೊಪ್ಪಲು ವಿದ್ಯುತ್ ಮಾರ್ಗದಲ್ಲಿನ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಡಿ.17 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕಾಂಟೂರು ರಸ್ತೆ, ದುರ್ಗಾಭವನ ಹೋಟೆಲ್ ಸುತ್ತಮುತ್ತ, ವಿವಿ ಮೊಹಲ್ಲಾ 2ನೇ ಹಂತದಿಂದ 6ನೇ ಹಂತದವರೆಗೆ, ಗೋಕುಲಂ ಮುಖ್ಯ ರಸ್ತೆ, ಆದಿಪಂಪ ರಸ್ತೆ, ಕಾಳಿದಾಸ ರಸ್ತೆ, ಬ್ರಿಗೇಡ್ ಪಾಯಿಂಟ್ ಹತ್ತಿರ, ಎಸ್‌ಪಿಆರ್ ಹೋಟೆಲ್ ಹಿಂಭಾಗದ ಪ್ರದೇಶ, ಗೋಕುಲಂ 2ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಎನ್.ಜಿ.ವೈ ನವೋದಯ ವಿದ್ಯುತ್ ಮಾರ್ಗದಲ್ಲಿನ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಡಿ.18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮರಿಯಯ್ಯನಹುಂಡಿ, ನವೋದಯ ವಿದ್ಯಾಲಯ, ಮಾದಳ್ಳಿ, ಶೆಟ್ಟಿನಾಯಕನಹಳ್ಳಿ, ನುಗ್ಗೆಹಳ್ಳಿ, ಬೀರಿಹುಂಡಿ, ಕುಮಾರಬೀಡು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿಶ್ವಪ್ರಸಿದ್ಧ ತಬಲ ಮಾಂತ್ರಿಕ ಜಾಕೀರ್ ಹುಸೇನ್‌ಗೆ ವಿಧಾನ ಮಂಡಲ ಸಂತಾಪ

ಬೆಳಗಾವಿ, ವಿಧಾನಮಂಡಲ, ಡಿ.16(ಕುಂಶಿ)- ವಿಶ್ವವಿಖ್ಯಾತ ತಬಲ ಮಾಂತ್ರಿಕ ಉಸ್ತಾದ್ ಜಾಕೀರ್ ಹುಸೇನ್ ನಿಧನಕ್ಕೆ ವಿಧಾನಮಂಡಲದ ಉಭಯ ಸದನಗಳಲ್ಲಿ ಸೋಮವಾರ ಸಂತಾಪ ಸೂಚಿಸಲಾಯಿತು.



ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್, ದೊಡ್ಡಬಳ್ಳಾಪುರದ ಮಾಜಿ ಶಾಸಕ ಜೆ.ನರಸಿಂಹ ಸ್ವಾಮಿ ಹಾಗೂ ಅಂತರರಾಷ್ಟ್ರೀಯ ಖ್ಯಾತಿ ತಬಲಾ ವಾದಕ ಉಸ್ತಾದ್ ಜಾಕೀರ್ ಹುಸೇನ್ ನಿಧನಕ್ಕೆ ಸಂತಾಪ ಸೂಚನಾ ನಿರ್ಣಯ ಮಂಡಿಸಿ, ನರಸಿಂಹ ಸ್ವಾಮಿ ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು ಎಂದು ಸ್ಮರಿಸಿದರು.

ಅಂತರರಾಷ್ಟ್ರೀಯ ಖ್ಯಾತಿಯ ತಬಲಾ ವಾದಕ ಉಸ್ತಾದ್ ಜಾಕೀರ್ ಹುಸೇನ್ ಮುಂಬೈ ನಲ್ಲಿ ಜನಿಸಿ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಜಾಯ್ ಫ್ಯೂಷನ್ ಅಭ್ಯಾಸ ಮಾಡಿದ್ದರು. ಅಲ್ಲದೆ, ಸಂಗೀತ ನಿರ್ದೇಶನ, ನಟನಾ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿ ಹಾಗೂ 5 ಗ್ರ್ಯಾಮಿ ಪ್ರಶಸ್ತಿಗಳನ್ನು ಪಡೆದಿದ್ದರು, ಅವರು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನೆಲೆಸಿದ್ದರು ಎಂದರು.


ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸಂತಾಪ ನಿರ್ಣಯದ ಮೇಲೆ ಮಾತನಾಡಿದರು.

ವಿಧಾನ ಪರಿಷತ್‌ನಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಉಸ್ತಾದ್ ಜಾಕೀರ್ ಹುಸೇನ್ ನಿಧನಕ್ಕೆ ಸಂತಾಪ ಸೂಚನಾ ನಿರ್ಣಯ ಮಂಡಿಸಿ, ಸಂಗೀತದ ಮೂಲಕ ಗಡಿಗಳನ್ನೂ ಮೀರಿ ಜನರ ಹೃದಯಗಳನ್ನು ಬೆಸೆದಿದ್ದ ಅವರು, ಭಾರತದ ಶಾಸ್ತ್ರೀಯ ಸಂಗೀತ ಹಾಗೂ ಜಾಗತಿಕ ಕಲೆಗೆ ನೀಡಿದ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಸಭಾನಾಯಕ ಎನ್.ಎಸ್. ಬೋಸರಾಜು ಹಾಗೂ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸಂತಾಪ ಸೂಚನಾ ನಿರ್ಣಯದ ಮೇಲೆ ಮಾತನಾಡಿದರು. ಉಭಯ ಸದನಗಳಲ್ಲಿ ಮೃತರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಲಾಯಿತು.

ಕೇಂದ್ರದ ವಿರುದ್ಧ ಸುಳ್ಳು ಮಾಹಿತಿ: ಸಿಎಂ ವಿರುದ್ಧ ವಿಶ್ವನಾಥ್ ಕಿಡಿ

ಬೆಳಗಾವಿ : ಸಿಎಂ ಸಿದ್ದರಾಮಯ್ಯ ಸದನಕ್ಕೆ ಸುಳ್ಳು ಹೇಳಿದ್ದಾರೆ. ಇಂತಹ ಸಿಎಂ ನಾನು ನೋಡಿಲ್ಲ ಎಂದು ಬಿಜೆಪಿ ಸದಸ್ಯ ಹೆಚ್. ವಿಶ್ವನಾಥ್ ವಿಧಾನ ಪರಿಷತ್ ಕಲಾಪದಲ್ಲಿ ವಾಗ್ದಾಳಿ ನಡೆಸಿದ ಘಟನೆ ನಡೆಯಿತು.



ಪ್ರಶ್ನೋತ್ತರ ಅವಧಿ ವೇಳೆ ಗ್ರಂಥಾಲಯಗಳ ಬಗ್ಗೆ ವಿಶ್ವನಾಥ್ ಪ್ರಶ್ನೆ ಕೇಳಿದ್ದರು. ಇದಕ್ಕೆ ಸಚಿವ ಮಧು ಬಂಗಾರಪ್ಪ ಉತ್ತರ ನೀಡಿದರು. ಈ ವೇಳೆ ಸಿಎಂ ವಿರುದ್ಧ ವಿಶ್ವನಾಥ್ ವಾಗ್ದಾಳಿ ನಡೆಸಿದರು.

ಪಂಚಮಸಾಲಿ ಮೀಸಲಾತಿ ಸಂಬಂಧ ಸಿಎಂ ಸಿದ್ದರಾಮಯ್ಯ ಸದನಕ್ಕೆ ಉತ್ತರ ಕೊಡುವ ವೇಳೆ SCSP-TSP ಗೆ ಇಡೀ ದೇಶದಲ್ಲಿ ಕೇಂದ್ರ ಸರ್ಕಾರ 60 ಸಾವಿರ ಕೋಟಿ ರೂ. ಮಾತ್ರ ಕೊಟ್ಟಿರುವುದು ಅಂತ ಹೇಳಿದರು. ಈ ಮಾತಿಗೆ ವಿಶ್ವನಾಥ್ ಕಿಡಿಕಾರಿದರು. SCSP-TSP ತಾನೇ ದೇಶದಲ್ಲಿ ತಂದಿದ್ದೇನೆ ಅಂತ ಸಿದ್ದರಾಮಯ್ಯ ಬೆನ್ನು ತಟ್ಟಿಕೊಳ್ಳುತ್ತಾರೆ. ಸಿಎಂ ಮೊನ್ನೆ ಉತ್ತರ ಕೊಟ್ಟಿದ್ದು ನೋಡಿದೆ. SCSP-TSP ಹಣ ಸ್ವತಂತ್ರ ಬಂದಾಗಿನಿಂದ ಇದೆ. ಸಿಎಂ ಸಿದ್ದರಾಮಯ್ಯ ಎಷ್ಟು ಸುಳ್ಳು ಹೇಳ್ತಾರೆ ಅಂತ ಕಿಡಿಕಾರಿದರು.

ಕೇಂದ್ರದ ಬಜೆಟ್ ಓದದೇ ಇದ್ದರೆ ಇವರು ಎಂತಹ ಮುಖ್ಯಮಂತ್ರಿ. ಸಿಎಂ ಸದನಕ್ಕೆ ಸುಳ್ಳು ಹೇಳಬಾರದು. ಸಿದ್ದರಾಮಯ್ಯ ಸದನದಲ್ಲಿ ಸುಳ್ಳು ಹೇಳಿದ್ದಾರೆ. ಕೇಂದ್ರ ಸರ್ಕಾರ SCSP-TSPಗೆ 2.60 ಲಕ್ಷ ಕೋಟಿ ರೂ. ರಿಲೀಸ್ ಮಾಡಿದೆ. ಇದು ಗೊತ್ತಿಲ್ಲದೆ ಸುಮ್ಮನೆ ಮಾತಾಡೋದು ಎಷ್ಟು ಸರಿ ಅಂತ ಸಿದ್ದರಾಮಯ್ಯ ವಿರುದ್ಧ ವಿಶ್ವನಾಥ್ ಕಿಡಿಕಾರಿದರು.

ಮೈಸೂರು ನಗರಪಾಲಿಕೆ ಕಚೇರಿ ಪಾರಂಪರಿಕ ಕಟ್ಟಡದ ತಾರಸಿ ದುರಸ್ತಿ ಕಾಮಗಾರಿ ಆರಂಭ

ಮೈಸೂರು,ಡಿ.16(ಆರ್‌ಕೆ)- ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ತಾರಸಿ ದುರಸ್ತಿ ಕಾಮಗಾರಿ ಆರಂಭವಾಗಿದೆ.

ಪಾರಂಪರಿಕ ಕಟ್ಟಡದ ತಾರಸಿಯಲ್ಲಿ ಮಳೆ ನೀರು ನಿಂತು ಶಿಥಿಲಗೊಂಡಿದ್ದ ಕಾರಣ ನೀರು ಸೋರುತ್ತಿತ್ತು. ಹಾಗಾಗಿ ಮೈಸೂರು ಮಹಾನಗರಪಾಲಿಕೆ ಕಚೇರಿ ಗೋಡೆಗಳು ನೆಂದು, ಮೊದಲ ಮಹಡಿಯ ಕಚೇರಿಗಳಲ್ಲಿ ಕೆಲಸಕ್ಕೆ ತೊಂದರೆ ಉಂಟಾಗಿತ್ತು.

ಪಾರಂಪರಿಕ ಇಲಾಖೆಯಿಂದ ಅನುಮತಿ ಪಡೆದು ಪಾಲಿಕೆ ಅಧಿಕಾರಿಗಳು ತಾರಸಿ ರಿಪೇರಿ ಮಾಡಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಪೈಪ್‌ಗಳನ್ನು ಅಳವಡಿಸಲು ಎಸ್ಟಿಮೇಟ್ ತಯಾರಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದರು.

ಯಶಸ್ವಿ ಬಿಡ್ಡುದಾರರಾದ ಅಶೋಕ ಕುಮಾರ್‌ಗೆ ಕಾರ್ಯಾದೇಶ ನೀಡಿರುವುದರಿಂದ ಇದೀಗ ತಾರಸಿ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ. 80 ಲಕ್ಷ ರೂ. ಟೆಂಡರ್ ಮೊತ್ತವಾಗಿದ್ದು, 6 ತಿಂಗಳೊಳಗಾಗಿ ಕೆಲಸ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ಪಾಲಿಕೆಯು ಒಡಂಬಡಿಕೆ ಮಾಡಿಕೊಂಡಿದೆ

ಈಗಾಗಲೇ ಜೋಧ್‌ಪುರದಿಂದ ಸುಣ್ಣ ತರಿಸಲಾಗಿದ್ದು, ಲೈಮ್‌ನೊಂದಿಗೆ ಯಂತ್ರದಲ್ಲಿ ಅರೆದು ಕಾಂಕ್ರೀಟ್ ತಯಾರಿಸುವ ಕೆಲಸ ಆರಂಭಿಸಲಾಗಿದೆ.



ನುರಿತ ಕಾರ್ಮಿಕರಿಂದ ಪಾರಂಪರಿಕ ಶೈಲಿಯಲ್ಲಿ ಕಟ್ಟಡದ ತಾರಸಿ ರಿಪೇರಿಗೆ ಸಕಲ ಸಿದ್ಧತೆ ಮಾಡಿ ಕೊಳ್ಳಲಾಗಿದೆ. ಪ್ರಸ್ತುತ ತಾರಸಿಯಲ್ಲಿರುವ ಮೇಲ್ಪದರವನ್ನು ಕಟ್ಟಡಕ್ಕೆ ತೊಂದರೆ ಯಾಗದಂತೆ ತೆಗೆದು ಹಾಕಿ ನಿಯಮಾನುಸಾರ ಸುಣ್ಣದಿಂದ ತಯಾರಿಸಿದ ಪಾರಂಪರಿಕ ಶೈಲಿಯ ಕಾಂಕ್ರೀಟ್ ಹಾಕಲಾಗುವುದು. ಮಳೆ ನೀರು ಸರಾಗವಾಗಿ ಹರಿದು ಹೋಗಲು ಅಲ್ಲಲ್ಲಿ ರಂಧ್ರ ಮಾಡಿ ಗೋಡೆಗಳಿಗೆ ಪೈಪ್‌ಗಳನ್ನು ಅಳವಡಿಸಬೇಕು ಎಂದು ಗುತ್ತಿಗೆದಾರ ಅಶೋಕ್‌ಕುಮಾರ್ ತಿಳಿಸಿದ್ದಾರೆ.

ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರು ತಾರಸಿ ರಿಪೇರಿ ಕೆಲಸವನ್ನು ಪರಿಶೀಲಿಸಿದರಲ್ಲದೆ, ಗುಣಾತ್ಮಕ ಕೆಲಸವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು. ಒಮ್ಮೆ ತಾರಸಿ ದುರಸ್ತಿ ಮಾಡಿದರೆ ಮುಂದಿನ 20-30 ವರ್ಷಗಳವರೆಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಇದರಿಂದ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಿದಂತಾಗುತ್ತದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.12.2024 ಮಂಗಳವಾರ, ಮಳೆ ನಕ್ಷತ್ರ: ಮೂಲ, 16.12.2024ರಿಂದ 28.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾಪೀಠ, ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಬಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ರಾಘವೇಂದ್ರನಗರ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಸಂಸ್ಥೆ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಸಮಾರೋಪ ನುಡಿ : ನಿವೃತ್ತ ಡಿವೈಎಸ್ಪಿ ಹೆಚ್.ಎಲ್. ಶಿವಬಸಪ್ಪ ಹೊರೆಯಾಲ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ. ಕೃಷ್ಣ ಅವರಿಗೆ ನುಡಿನಮನ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಶ್ರೀಮತಿ ರೇಖಾ, ಡಾ. ಬಿ.ಜೆ. ವಿಜಯಕುಮಾರ್, ಜಿ.ಎಸ್. ಗಜೇಂದ್ರಪ್ರಸಾದ್, ಶಾಂತಮಲ್ಲಪ್ಪ, ಡಾ. ಬಸವರಾಜು ಸಿ. ಜೆಟ್ಟಿಹುಂಡಿ, ಮಹದೇಶ್, ಡಾ. ಶಿಲ್ಪಾ, ಗೋಕುಲ್ ಗೋವರ್ಧನ್, ಸ್ಥಳ: ವಿವಿ ಸಂಜೆ ಕಾಲೇಜು ಆವರಣ, ಬೆಳಗ್ಗೆ 10.15ಕ್ಕೆ.

■ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ :** ಅಂತರರಾಷ್ಟ್ರೀಯ ವಿಶೇಷಚೇತನರ ದಿನಾಚರಣೆ, ಉದ್ಘಾಟನೆ: ವಿಕಲಚೇತನರ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ, ಡಾ. ಬಿ.ಎಂ.ಮಾಲಾ, ತಾಲೂಕು ದಂಡಾಧಿಕಾರಿ ಮಹೇಶ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಸಿ.ರಾಜು, ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಬ್ಬಯ್ಯ, ಅಧ್ಯಕ್ಷತೆ : ಶ್ರೀಮತಿ ದೀಪಶ್ರೀ ಎಸ್.ಆರ್., ಸ್ಥಳ: ಪುರಭವನ, ಬೆಳಗ್ಗೆ 11.30ಕ್ಕೆ.

■ **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ:** 64ನೇ ವಾರ್ಷಿಕ ಪೂಜಾ ಮಹೋತ್ಸವ, ಅನ್ನದಾನ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, 12.30ರಿಂದ.

■ **ಸೇಂಟ್ ಥಾಮಸ್ ಇನ್‌ಸ್ಟಿಟ್ಯೂಷನ್ಸ್ :** ವಸಂತೋತ್ಸವ-2024, ಅಧ್ಯಕ್ಷತೆ: ಸೇಂಟ್ ಥಾಮಸ್ ಇನ್‌ಸ್ಟಿಟ್ಯೂಷನ್ಸ್ ವ್ಯವಸ್ಥಾಪಕ ಶೈಜು ಪಿ. ಜಾನ್, ಮುಖ್ಯ ಅತಿಥಿಗಳು : ಡಾ. ಗ್ರೇಗೋರಿಯಸ್, ಮಾರ್ ಸ್ಟೆಫನೋಸ್ ಎಇಸ್ಕೋಪಾ, ಎಂಇಎಸ್ ಕಾರ್ಯದರ್ಶಿ ಸ್ಯಾಮ್ ಚೆರಿಯನ್ ಕುಂಬುಕಟ್ಟು, ಖಜಾಂಚಿ ಪ್ರೊ. ಶೋಭನಾ ಥಾಮಸ್, ಗ್ರೇಸಿ ಥಾಮಸ್, ಸ್ಥಳ: ಶಾಲೆ ಆವರಣ, ಸಂಜೆ 4ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಬೆಂಗಳೂರಿನ ಪ್ರವಚನ ಚಕ್ರವರ್ತಿ ಡಾ.ಪಾವಗಡ ಪ್ರಕಾಶ್ ರಾವ್ ಇವರಿಂದ 'ಉಪನಿಷತ್ ದರ್ಶನ' ವಿಷಯ ಕುರಿತು ಪ್ರವಚನ ಮಾಲಿಕೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪ, ಊಟಿ ರಸ್ತೆ, ಸಂಜೆ 5.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ ; ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಮಹಾರಾಣಿ ಕಾಲೇಜು (ಬೆಂಗಳೂರು) ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್, ಸ್ಥಳ: ಸನಾತನೀ ಸಭಾ, ಜಯನಗರ, ಸಂಜೆ 6.15ರಿಂದ

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ: ಕ್ರೋಧಿನಾಮ ಸಂವತ್ಸರದ ಭಗವಾನ್** ಶ್ರೀ ದತ್ತಾತ್ರೇಯ ಸ್ವಾಮಿಯವರ 48ನೇ ವರ್ಷದ ಸಪ್ತಾಹ, ಬೆಳಗ್ಗೆ ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ, ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಭಜನೆ, ದತ್ತಾತ್ರೇಯ ಉತ್ಸವ, ಔದಂಬರ ಪೂಜೆ, ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಸಂಜೆ 6.30ಕ್ಕೆ ಭಜನೆ, ರಾತ್ರಿ 8 ಗಂಟೆಗೆ ಪೂಜೆ, ಪ್ರಸಾದ ವಿನಿಯೋಗ, ಸ್ಥಳ : ದೇವಸ್ಥಾನದ ಆವರಣ, ಬೆಲವತ್ತ ಗ್ರಾಮ (ಮಂಟಿ).

■ **ವೇಣುಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ, ತ್ಯಾಗರಾಜ ರಸ್ತೆ, ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮೀಪ, ಸಂಜೆ 6.30ಕ್ಕೆ.


ಹಲಗಯ್ಯನಹುಂಡಿ, ಮೈಸೂರು ತಾಲೂಕು.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024-25, ನಾಗೇಂದ್ರ ಪ್ರಭು ಅವರಿಂದ ಯೋಗ ಮತ್ತು ಆರೋಗ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ : ಎಂ. ಮಹೇಶ್, ಮುಖ್ಯ ಅತಿಥಿಗಳು : ಎ.ಸಿ. ಮಂಚೇಗೌಡ, ಡಾ. ರಮೇಶ, ಎಂ. ಬಾಲರಾಜು, ಜಿ. ಕೃಷ್ಣಕುಮಾರ್, ಸ್ಥಳ: ಹಲಗಯ್ಯನಹುಂಡಿ, ಮೈಸೂರು ತಾಲೂಕು, ಸಂಜೆ 6ಕ್ಕೆ.

ಬರಡನಪುರ ಗ್ರಾಮ, ಮೈಸೂರು ತಾಲೂಕು.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024-25, ಉದ್ಘಾಟನೆ : ಪ್ರಾಂಶುಪಾಲ ವಿ.ಬಿ. ಲೋಕೇಶ, ಉದ್ಘಾಟನೆ : ಶ್ರೀ ಮಹಾಂತೇಶ್ವರ ಮಠದ ಪರಶಿವಮೂರ್ತಿ ಸ್ವಾಮೀಜಿ, ಮುಖ್ಯ ಅತಿಥಿಗಳು: ಪ್ರಾಂಶುಪಾಲ ಇಳಂಗೋವನ್, ಶ್ರೀಮತಿ ನಯನ, ಸತೀಶ್, ಸ್ಥಳ: ಬರಡನಪುರ ಗ್ರಾಮ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ-ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ.ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ-ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 8.40 ಕರೆಗೊಂದು ಗೀತೆ- ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಶ್ರೀನಿವಾಸಮೂರ್ತಿ. ಆರ್. ಕೆ-ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ-ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ. ಎಸ್

ಮಧ್ಯಾಹ್ನ: 12.05 ವನಿತಾ ವಿಹಾರ 'ನಾನು ನನ್ನ ಕಂಪನಿ' ಉತ್ತರ ಕರ್ನಾಟಕ ಶೈಲಿಯ ಆಹಾರ ಪದಾರ್ಥಗಳನ್ನು ಮನೆಯಲ್ಲಿಯೇ ತಯಾರಿಸುವ ಮಹೇಶ್ವರಿಯವರೊಂದಿಗೆ ಮಾತುಕತೆ. ಪ್ರಸ್ತುತಿ : ಎಂ.ಎಸ್. ಭಾರತೀ, 12.35 ದೇವರನಾಮ-ಬಳ್ಳಾರಿ. ಎಂ. ರಾಘವೇಂದ್ರ, 12.45 ಶಬ್ದ ಸಂಪತ್ತನ್ನು ಬೆಳೆಸುವ ಆಟಗಳು. ಮಾತನಾಡುತ್ತಾರೆ ಅನಂತ. ಎಂ. ತಮಃನ್ ಕರ್, 1.00 ಪ್ರಗತಿ ಪಥ - ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಬಾನುಲಿ ಇಂಗ್ಲೀಷ್ ಪಾಠ-ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಂಬೆ ಸಹೋದರಿಯರು-ಯುಗಳ ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ-ಭಕ್ತ ಮಾರ್ಕಂಡೇಯ, ಪ್ರಸ್ತುತಿ: ವಿದ್ವಾನ್. ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕಿಸಾನ್ ವಾಣಿ-ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ - ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ರೇಷ್ಮೆ ಕೃಷಿಯಲ್ಲಿ ಯಾಂತ್ರೀಕರಣ ಈ ಕುರಿತು ಸಂವಾದ. ಭಾಗವಹಿಸುತ್ತಾರೆ, ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ. ಆರ್. ಮಹೇಶ್ ಮತ್ತು ಡಾ. ಸಿ.ಎಂ. ಬಾಬು, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ರಂಜಾನ್ ಖಾನ್ ಮತ್ತು ಜಾಫರ್ ಮೊಹಮ್ಮದ್ ಖಾನ್-ಸಾರಂಗಿ ವಾದನ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಯು. ಶ್ರೀನಿವಾಸನ್-ಮ್ಯಾಂಡೋಲಿನ್ ವಾದನ, 10.00 ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ

ಕಾಂಗ್ರೆಸ್ ನಾಯಕರಿಂದಲೇ ಐದು ಲಕ್ಷ ಕೋಟಿ ಮೌಲ್ಯದ ವಕ್ಫ್ ಆಸ್ತಿ ಕಬಳಿಕೆ

ಏಷಿಯನ್ ಮಾಲ್‌ಗೆ ಮಲ್ಲಿಕಾರ್ಜುನ ಖರ್ಗೆ, ವಿಂಡ್ಸರ್ ಮ್ಯಾನರ್‌ಗೆ ರೆಹಮಾನ್ ಖಾನ್ ಮಾಲೀಕ; ಮಾಜಿ ಎಂಎಲ್ಸಿ ಗೋ.ಮಧುಸೂದನ್ ಗಂಭೀರ ಆರೋಪ

ಮೈಸೂರು, ಡಿ.16(ಬಿಎಲ್‌ಯು)– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರದ ಮಾಜಿ ಸಚಿವ ರೆಹಮಾನ್ ಖಾನ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಐದು ಲಕ್ಷ ಕೋಟಿ ರೂ. ಮೌಲ್ಯದ ವಕ್ಫ್ ಆಸ್ತಿಯನ್ನು ಕಬಳಿಸಿದ್ದಾರೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಆರೋಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 40 ಸಾವಿರ ಎಕರೆ ಭೂಮಿಯನ್ನು ಕಾಂಗ್ರೆಸ್ ನಾಯಕರು ಕಬಳಿಸಿದ್ದು, ಸರ್ಕಾರಕ್ಕೆ ಈ ಬಗ್ಗೆ ವರದಿ ಕೊಟ್ಟ ಸಂದರ್ಭದಲ್ಲಿ ಇದರ ಮೌಲ್ಯ 2.39 ಲಕ್ಷ ಕೋಟಿಯಾಗಿತ್ತು. ಆದರೆ ಇವತ್ತಿನ ಮೌಲ್ಯ ಐದು ಲಕ್ಷ ಕೋಟಿ ಎಂದು ತಿಳಿಸಿದರು. ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ನೀಡಿದ ವರದಿ ಬಗ್ಗೆ ತನಿಖೆ ನಡೆಸುವಂತೆ ಲೋಕಾಯುಕ್ತರಿಗೆ ಸರ್ಕಾರ ತಿಳಿಸಿತ್ತು. ಅದರಂತೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಆನಂದ್ ಅವರು ತನಿಖೆ ನಡೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ನೀಡಿದ್ದಾರೆ. ಆದರೆ ವಕ್ಫ್ ಆಸ್ತಿ ಕಬಳಿಕೆಯಲ್ಲಿ ಕಾಂಗ್ರೆಸ್ ನಾಯಕರು ಇರುವ ಕಾರಣ ಸಿದ್ದರಾಮಯ್ಯ ಈ ತನಕ ಯಾರ ವಿರುದ್ಧವೂ, ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮಧುಸೂದನ್ ಆಪಾದಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇದ್ದಾರೆ.

ವಕ್ಫ್ ಆಸ್ತಿ ಹರಾಜು ಹಾಕಿದರೆ ಗಂಡಸರಿಗೂ ಬಸ್ ಫ್ರೀ!

ಕಾಂಗ್ರೆಸ್ ನಾಯಕರು ಕಬಳಿಸಿರುವ ವಕ್ಫ್ ಆಸ್ತಿಯನ್ನು ಹರಾಜು ಹಾಕಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಗಂಡಸರಿಗೂ ಉಚಿತ ಪ್ರಯಾಣದ ಗ್ಯಾರಂಟಿ ನೀಡಬಹುದು ಎಂದು ಮಧುಸೂದನ್ ಅಭಿಪ್ರಾಯಪಟ್ಟರು.

ಈಗ ನೀಡುತ್ತಿರುವ ಗ್ಯಾರಂಟಿ ಯೋಜನೆಗೆ ಹಣವಿಲ್ಲದೆ ಸರ್ಕಾರ ಪರಿತಪಿಸುತ್ತಿದೆ. ಆರ್ಥಿಕ ಸಂಕಷ್ಟದಿಂದ ಹಣ ಸರಿದೂಗಿಸಲು ಪರದಾಡುತ್ತಿದೆ. ಕಬಳಿಸಿರುವ ವಕ್ಫ್ ಆಸ್ತಿ ವಶಕ್ಕೆ ಪಡೆದು ಹರಾಜು ಹಾಕಿದರೆ ಐದು ಲಕ್ಷ ಕೋಟಿ ರೂಪಾಯಿ ಬರುತ್ತದೆ. ಇದರಿಂದ ಸಿದ್ದರಾಮಯ್ಯ ಮತ್ತಷ್ಟು ಗ್ಯಾರಂಟಿ ನೀಡಬಹುದು ಎಂದರು.

ಇದರಿಂದ ಗಂಡಸರಿಗೂ ಬಸ್ ಫ್ರೀ ನೀಡಬಹುದು, ಎಂಎಸ್‌ಐಎಲ್‌ನಿಂದ ಎಲ್ಲಾ ಬ್ರ್ಯಾಂಡ್‌ಗಳನ್ನು ಉಚಿತವಾಗಿ ನೀಡಬಹುದು. ಅಲ್ಲದೆ ಮತ್ತಷ್ಟು ಭಾಗ್ಯ ನೀಡಬಹುದು. ಇದಕ್ಕಾಗಿ ಕೂಡಲೇ ಸಿದ್ದರಾಮಯ್ಯ ಕಬಳಿಸಿರುವ ವಕ್ಫ್ ಆಸ್ತಿ ವಶಪಡಿಸಿಕೊಳ್ಳಲಿ ಎಂದು ಮಧುಸೂದನ್ ಆಗ್ರಹಿಸಿದರು.

ಶಾಸಕ ತನ್ವೀರ್ ಸೇಠ್ ಕುಟುಂಬದಿಂದಲೂ ವಕ್ಫ್ ಆಸ್ತಿ ಕಬಳಿಕೆ

ವಕ್ಫ್‌ಗೆ ಸೇರಿದ್ದ ಮೈಸೂರಿನ ಕೆಲವೊಂದು ಆಸ್ತಿಯನ್ನು ಶಾಸಕ ತನ್ವೀರ್ ಸೇಠ್ ಕುಟುಂಬವೂ ಕಬಳಿಸಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಆರೋಪಿಸಿದರು. ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯ ಗೌಸಿಯ ಮಂಜಿಲ್, ಅಪ್‌ನಾ ಘರ್, ರಿಫಾ ವಾಣಿಜ್ಯ ಸಂಕೀರ್ಣ ಹಾಗೂ ಅಕ್ಬರ್ ರಸ್ತೆಯ ಮಜಿದ್–ಏ–ಬಗ್ಗಾನ್ ಎದುರಿನ ಖಾಲಿ ಜಾಗಗಳು, ಮಜಲೀಸ–ಎ–ರಿಫಾಬುಲ್ ಮುಸ್ಲೀಮಿನ್ ಆಸ್ತಿ ಕಬಳಿಸಿದ್ದಾರೆ ಎಂದು ದೂರಿದರು. ಮಾಜಿ ಸಚಿವ ದಿವಂಗತ ಅಜೀಜ್ ಸೇಠ್ ಹಾಗೂ ತಾಜ್ ಮೊಹಮ್ಮದ್ ಖಾನ್ ಇದಕ್ಕೆ ಕಾರಣಕರ್ತರಾಗಿದ್ದು, ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ತನ್ವೀರ್ ಸೇಠ್ ಇದರಲ್ಲಿ ಭಾಗಿಯಾಗಿದ್ದಾರೆ ಎಂದು ಮಧುಸೂದನ್ ಆಪಾದಿಸಿದರು.

ಡ್ರೋನ್ ಪ್ರತಾಪ್‌ನಂತೆ ಸಿದ್ದರಾಮಯ್ಯ ಬಾಂಬ್ ಹಾಕಿದ್ದಾರೆ!

ವಕ್ಫ್ ಆಸ್ತಿ ಕಬಳಿಸಿರುವ ಕಾಂಗ್ರೆಸ್ ನಾಯಕರನ್ನು ರಕ್ಷಿಸಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ 150 ಕೋಟಿ ಆಮಿಷ ಒಡ್ಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಕಿರುವ ಬಾಂಬ್ ಡ್ರೋನ್ ಪ್ರತಾಪ್ ಹಾಕಿರುವ ಬಾಂಬ್‌ನಂತಿದೆ ಎಂದು ಮಧುಸೂದನ್ ಲೇವಡಿ ಮಾಡಿದರು.

ಡ್ರೋನ್ ಪ್ರತಾಪ್ ಸೋಡಿಯಂ ಬಾಂಬ್ ಹಾಕಿದನು. ಆದರೆ ಬಾಂಬ್ ಸ್ಫೋಟವಾಯಿತೆ ಹೊರತು, ಅದರಲ್ಲಿ ಸತ್ವವಿರಲಿಲ್ಲ. ಅದರಂತೆ ಸಿದ್ದರಾಮಯ್ಯ ಕೂಡ ಡ್ರೋನ್ ಪ್ರತಾಪ್‌ನಂತೆ 150 ಕೋಟಿ ಬಾಂಬ್ ಸಿಡಿಸಿದ್ದು, ಇದರಲ್ಲಿ ಸತ್ವವಿಲ್ಲ ಎಂದು ಗೇಲಿ ಮಾಡಿದರು. ಕಾಂಗ್ರೆಸ್ ನಾಯಕರನ್ನು ರಕ್ಷಿಸಲು ಬಿಜೆಪಿ ನಾಯಕರು ಏಕೆ ಆಮಿಷವೊಡ್ಡುತ್ತಾರೆ ಎಂದು ಪ್ರಶ್ನಿಸಿದ ಮಧುಸೂದನ್, ಇದು ಈ ವರ್ಷದ ದೊಡ್ಡ ಜೋಕ್ ಎಂದು ಹೇಳಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಧ್ಯಮ ವಕ್ತಾರ ಮಹೇಶ್ ರಾಜ್ ಅರಸ್, ನಗರ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅನ್ವರ್ ಮಾಣಿಪ್ಪಾಡಿ ವರದಿ ಹಾಗೂ ಉಪ ಲೋಕಾಯುಕ್ತರಾದ ಆನಂದ್ ನೀಡಿರುವ ವರದಿಯಲ್ಲಿ ಕಾಂಗ್ರೆಸ್ ನಾಯಕರು ಯಾವ ರೀತಿ ವಕ್ಫ್ ಆಸ್ತಿ ಲೂಟಿ ಮಾಡಿದ್ದಾರೆಂಬ ಸಮಗ್ರ ವಿವರ ವಿದೆ. ಗುಲ್ಬರ್ಗಾದ ಬ್ರಹ್ಮಪುರ ಗ್ರಾಮದ ಹಜರತ್ ಖಾಜಾ ಬಂಡೆ ನವಾಬನ ಆಸ್ತಿ ಕಬಳಿಸಿದ್ದು, ಈ ಜಾಗದಲ್ಲಿ ಈಗ ಬೃಹತ್ ಏಷಿಯನ್ ಮಾಲ್ ಹಾಗೂ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಲಾಗಿದ್ದು, ಇದು ಮಲ್ಲಿಕಾರ್ಜುನ ಖರ್ಗೆ ಕುಟುಂಬದ ಒಡೆತನದ್ದು. ಕಾಂಗ್ರೆಸ್‌ನ ಮಾಜಿ ಸಂಸದ ಇಕ್ಬಾಲ್ ಅಹಮದ್ ಸರಡಗಿ ಸೇರಿದಂತೆ ಇತರರು ಇದಕ್ಕೆ ಕಾರಣಕರ್ತರಾಗಿದ್ದು, ಮಲ್ಲಿಕಾರ್ಜುನ ಖರ್ಗೆ, ಸಿ.ಎಂ.ಇಬ್ರಾಹಿಂ, ದಿವಂಗತ ಮಾಜಿ ಮುಖ್ಯಮಂತ್ರಿ ಧರಂ ಸಿಂಗ್, ಮಾಜಿ ವಕ್ಫ್ ಸಚಿವ ದಿವಂಗತ ಖಮರುಲ್ಲಾ ಇಸ್ಲಾಂ ಸೇರಿದಂತೆ ಹಲವರು ಇದರಲ್ಲಿ ಭಾಗಿಯಾಗಿದ್ದಾರೆ ಎಂದು ಮಧುಸೂದನ್ ಆರೋಪಿಸಿದರು.

ಬೆಂಗಳೂರಿನ ವಿಂಡ್ಸರ್ ಮ್ಯಾನರ್ 1,65,752 ಚದರಡಿ ಹೊಂದಿದ್ದು, ಸುಮಾರು ನಾಲ್ಕು ಎಕರೆ ವಿಸ್ತೀರ್ಣದಲ್ಲಿದೆ. ಮಾಜಿ ಕೇಂದ್ರ ಸಚಿವ ಆರ್.ರೆಹಮಾನ್ ಖಾನ್ ಸೇರಿದಂತೆ ಹಲವರು ಇದರಲ್ಲಿ ಒಳಗೊಂಡಿದ್ದಾರೆ ಎಂದು ದೂರಿದರು.

ಬೆಂಗಳೂರಿನ ಕಬ್ಬನ್‌ಪೇಟೆಯ ಹಜರತ್ ಮಾಣಿಕ್ ಷಾ ದರ್ಗಾದ 122.20 ಎಕರೆಯನ್ನು 50 ಜನರಿಗೆ ಮಂಜೂರು ಮಾಡಲಾಗಿದ್ದು, ದಿವಂಗತ ಕೇಂದ್ರದ ಮಾಜಿ ಸಚಿವ ಸಿ.ಕೆ.ಜಾಫರ್ ಷರೀಫ್ ಇದರಲ್ಲಿ ಭಾಗಿಯಾಗಿದ್ದಾರೆ ಎಂದು ಆಪಾದಿಸಿದರು. ಬೆಂಗಳೂರಿನ ಯಲಹಂಕದ ಬಡೇಪುರ ಗ್ರಾಮದ ಮುಜಾಫಿರ್ ಖಾನಾದ 3.01 ಎಕರೆ, 2.30 ಎಕರೆ ಹಾಗೂ 4.14 ಎಕರೆ ಮಾರಾಟವಾಗಿದ್ದು, ಶಾಂತಿ ನಗರದ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಇದರಲ್ಲಿ ಭಾಗಿಯಾಗಿದ್ದಾರೆ ಎಂದು ದೂರಿದರು.

ಈಗ ನಾನು ನೀಡಿರುವ ಎಲ್ಲಾ ವಿವರಗಳು ಸರ್ಕಾರದ ದಾಖಲಾತಿಗಳಾಗಿದೆ. ಅದನ್ನು ಉಲ್ಲೇಖಿಸಿ ಈ ವಿವರ ನೀಡುತ್ತಿದ್ದೇನೆಯೇ ಹೊರತು, ಸುಖಾಸುಮ್ಮನೆ ಆರೋಪ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ಅಂದಿನ ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಮತ್ತು ಹಜ್ ಇಲಾಖೆ ಕಾರ್ಯದರ್ಶಿ ಅತೀಕ್ ಅಹಮ್ಮದ್ ಅವರು ನಾನು ಅಧ್ಯಕ್ಷನಾಗಿದ್ದ 2013–15 ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿ ಮುಂದೆ ಹಾಜರಾಗಿ ಈ ವಿವರಗಳನ್ನು ನೀಡಿದ್ದಾರೆ. ಜೊತೆಗೆ ಪ್ರಮಾಣಬದ್ಧವಾದ ಎಲ್ಲಾ ಪೂರಕ ದಾಖಲೆಗಳೊಂದಿಗೆ ಸಮಿತಿಗೆ ಲಿಖಿತ ಹೇಳಿಕೆ ಕೂಡ ನೀಡಿದ್ದಾರೆ ಎಂದು ತಿಳಿಸಿದರು.

ವಕ್ಫ್ ಆಸ್ತಿಯನ್ನು ಕಾಂಗ್ರೆಸ್ ನಾಯಕರೇ ಲೂಟಿ ಮಾಡಿದ್ದಾರೆಯೇ ಹೊರತು, ಬೇರೆ ಯಾರೂ ಇದರಲ್ಲಿ ಭಾಗಿಯಾಗಿಲ್ಲ. ಈಗ ವಿವಾದ ತೀವ್ರ ಸ್ವರೂಪ ಪಡೆದ ತರುವಾಯ ಈ ಆಸ್ತಿ ತಮ್ಮ ಕೈಬಿಟ್ಟು ಹೋಗುತ್ತದೆ ಎಂದು ಜೂನಿಯರ್ ಖರ್ಗೆ ಅಲಿಯಾಸ್ ಪ್ರಿಯಾಂಕ್ ಖರ್ಗೆ ಆತಂಕಕ್ಕೀಡಾಗಿದ್ದಾರೆ. ಈ ಕಾರಣದಿಂದ ಮತ್ತೊಬ್ಬರ ಮೇಲೆ ನಿರಾಧಾರ ಆರೋಪ ಮಾಡುತ್ತಿದ್ದಾರೆ ಎಂದರು.

ಅನ್ವರ್ ಮಾಣಿಪ್ಪಾಡಿ ವರದಿ ಸರ್ಕಾರದಲ್ಲಿದೆ, ಉಪ ಲೋಕಾಯುಕ್ತರಾದ ಆನಂದ್ ನೀಡಿರುವ ವರದಿ ಸಿದ್ದರಾಮಯ್ಯನವರ ಬಳಿ ಇದೆ. ಇದನ್ನ ಆಧರಿಸಿ ಸರ್ಕಾರ ಕ್ರಮ ಕೈಗೊಳ್ಳಬಹುದು. ಆದರೆ ಸಿದ್ದರಾಮಯ್ಯ ತಮ್ಮ ಪಕ್ಷದ ನಾಯಕರನ್ನು ಕಾಪಾಡುತ್ತಿದ್ದಾರೆ ಎಂದು ಮಧುಸೂದನ್ ಆರೋಪಿಸಿದರು.

ಪುತ್ರಿಯೊಂದಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಮಹಿಳೆಯ ಸರ ಕದ್ದ ಖದೀಮರು

ತುಂಡರಿಸಿದ ಸರದಲ್ಲಿ ಮಹಿಳೆಗೆ ಉಳಿದಿದ್ದು ಸ್ವಲ್ಪ ಭಾಗ

ಮೈಸೂರು, ಡಿ.16(ಎಸ್‌ಬಿಡಿ)– ಪುತ್ರಿಯೊಂದಿಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಮಹಿಳೆಯ ಚಿನ್ನದ ಸರಗಳನ್ನು ಖದೀಮರು ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರಿನ ವಿದ್ಯಾಶಂಕರ ಬಡಾವಣೆ ನಿವಾಸಿ ರಾಜೇಶ್ವರಿ(58) ಅವರ ಸುಮಾರು 3 ಲಕ್ಷ ರೂ. ಮೌಲ್ಯದ ಎರಡು ಚಿನ್ನದ ಸರಗಳು ಖದೀಮರ ಪಾಲಾಗಿದ್ದು, ಗಟ್ಟಿಯಾಗಿ ಹಿಡಿದುಕೊಂಡಿದ್ದರಿಂದ 40 ಗ್ರಾಂನ ತುಂಡು ಉಳಿದಿವೆ.

ರಾಜೇಶ್ವರಿ ಅವರು ಪುತ್ರಿ ಡಾ.ಪೂಜಾ ಅವರ ಸ್ಕೂಟರ್‌ನಲ್ಲಿ ಶನಿವಾರ ರಾತ್ರಿ ರಿಸೆಪ್ಷನ್‌ಗೆಂದು ವಿದ್ಯಾರಣ್ಯಪುರಂಗೆ ಹೋಗುವಾಗ ಮಾಲ್ ಆಫ್ ಮೈಸೂರು ಹಿಂಭಾಗದ ರಸ್ತೆ ಗಾಲ್ಫ್ ಕ್ಲಬ್ ಮುಂಭಾಗ ಈ ಘಟನೆ ನಡೆದಿದೆ. ಬೈಕ್‌ನಲ್ಲಿ ಬಂದ ಇಬ್ಬರು ಖದೀಮರಲ್ಲಿ ಹಿಂಬದಿಯಲ್ಲಿ ಕುಳಿತಿದ್ದವನು ಏಕಾಏಕಿ ರಾಜೇಶ್ವರಿ ಕೊರಳಿನಲ್ಲಿದ್ದ ಚಿನ್ನದ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಇದರಿಂದ ಗಾಬರಿಗೊಂಡ ರಾಜೇಶ್ವರಿ ಅವರು ಸರಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರಿಂದ ಸರಗಳು ತುಂಡಾಗಿವೆ. ಮಾಂಗಲ್ಯ ಸರದ ಸುಮಾರು 35 ಗ್ರಾಂ ಹಾಗೂ ಮತ್ತೊಂದು ಸರದ 25 ಗ್ರಾಂ ಖದೀಮರ ಪಾಲಾಗಿದೆ.

ಈ ಸಂಬಂಧ ರಾಜೇಶ್ವರಿ ನೀಡಿದ ದೂರಿನನ್ವಯ ನಜರ್‌ಬಾದ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಖದೀಮರ ಸೆರೆಗೆ ಕ್ರಮ ವಹಿಸಿದ್ದಾರೆ.

ಕಾರ್ಖಾನೆಯಲ್ಲಿ ಮೋಟಾರ್ ಸೇರಿ ಇತರ ಪದಾರ್ಥ ಕದ್ದ ನಾಲ್ವರು ಬಂಧನ

ಮೂರು ಲಕ್ಷ ಮೌಲ್ಯದ ಪದಾರ್ಥ ವಶಕ್ಕೆ

ಮೈಸೂರು, ಡಿ.16(ಎಸ್‌ಬಿಡಿ)– ಕಾರ್ಖಾನೆಯೊಂದರಲ್ಲಿ ಮೋಟಾರ್ ಇನ್ನಿತರ ವಸ್ತುಗಳನ್ನು ಕಳವು ಮಾಡಿದ್ದ ನಾಲ್ವರನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಳೆದ ನವೆಂಬರ್ 30ರಂದು ಮೈಸೂರು–ಹುಣಸೂರು ರಸ್ತೆಯಲ್ಲಿರುವ ಡಿಚೆಮ್ ರೆಸಿನ್ಸ್ ಲಿಮಿಟೆಡ್ ಸ್ಟೋರ್‌ನ ರೋಲಿಂಗ್ ಘಟಕ ಮೀಟಿ ಬೆಳಬಾಳುವ ಮೋಟಾರ್‌ಗಳು ಹಾಗೂ ಕಬ್ಬಿಣದ ವಸ್ತುಗಳನ್ನು ಖದೀಮರು ಕದ್ದೊಯ್ದಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಕಳ್ಳರ ಸೆರೆಗೆ ಶೋಧ ನಡೆಸಿದ್ದರು.

ಘಟನೆ ನಡೆದು ಹಲವು ಕೆಲ ದಿನಗಳ ನಂತರ ಖದೀಮರು, ಕದ್ದ ವಸ್ತುಗಳನ್ನು ಎರಡು ಗೂಡ್ಸ್ ವಾಹನಗಳಲ್ಲಿ ತುಂಬಿಕೊಂಡು ಕೆಆರ್‌ಎಸ್ ರಸ್ತೆಯ ಕುಸುಮ ಚಂದ್ರಶೇಖರ್ ಕಲ್ಯಾಣ ಮಂಟಪದ ಬಳಿ ಸಾಗಿಸುತ್ತಿದ್ದಾಗ ಪೊಲೀಸರು ಬಂಧಿಸಿ, ಸುಮಾರು ಮೂರು ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಮೇಲಧಿಕಾರಿಗಳ ಮಾರ್ಗದರ್ಶನ, ವಿಜಯನಗರ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ವಿಜಯನಗರ ಎಸ್.ಡಿ.ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ನಾರಾಯಣ್, ಡಿ.ಕೃಷ್ಣ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದ್ದಾರೆ.

ಮೈಸೂರು ಜೈಲು ಗೋಡೆ ಹಾರಿದ ಮೊಬೈಲ್, ಗಾಂಜಾ!

ಮೈಸೂರು, ಡಿ.16(ಎಸ್‌ಬಿಡಿ)– ಮೈಸೂರು ಕೇಂದ್ರ ಕಾರಾಗೃಹದೊಳಗೆ ಮೊಬೈಲ್ ಹಾಗೂ ಗಾಂಜಾ ಸಾಗಿಸಲು ಯತ್ನಿಸಿರುವುದಾಗಿ ಪ್ರಕರಣ ದಾಖಲಾಗಿದೆ.

ಕಾರಾಗೃಹದ ಗೋಡೆಯ ಹೊರಭಾಗದಲ್ಲಿ ಭಾನುವಾರ ಮಧ್ಯಾಹ್ನ ಗಸ್ತಿನಲ್ಲಿದ್ದ ಕೆಎಸ್‌ಐಎಸ್‌ಎಫ್ ಸಿಬ್ಬಂದಿಗೆ ಕಪ್ಪು ಬಣ್ಣದ ಟೇಪ್‌ನಲ್ಲಿ ಸುತ್ತಿದ್ದ ವಸ್ತು ಕಾಣಿಸಿದೆ. ಅದನ್ನು ಲೋಹಪತ್ತೆ ಉಪಕರಣದಲ್ಲಿ ಪರೀಕ್ಷಿಸಿದಾಗ ಶಬ್ದ ಬಂದಿದೆ. ಬಳಿಕ ಆ ಕವರ್ ತೆಗೆದಾಗ ಅದರಲ್ಲಿ ನೋಕಿಯಾ ಮೊಬೈಲ್, ಹೆಚ್ಚುವರಿ ಬ್ಯಾಟರಿ, 25 ಗ್ರಾಂ ಗಾಂಜಾ ಪತ್ತೆಯಾಗಿದೆ. ಈ ಸಂಬಂಧ ಕಾರಾಗೃಹ ಅಧಿಕಾರಿಗಳು ನೀಡಿದ ದೂರಿನನ್ವಯ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಚನೆ ದೂರು ದಾಖಲು ಮಾಡುವ ರೈತರಿಗೆ ಒಂದು ಲಕ್ಷ ರೂ. ಬಹುಮಾನ

ಬೆಳಗಾವಿ: ಯಾವುದೇ ಸಕ್ಕರೆ ಕಾರ್ಖಾನೆ ತೂಕದಲ್ಲಿ ವಂಚನೆ ಮಾಡಿದಲ್ಲಿ ರೈತರು ದೂರು ದಾಖಲಿಸಿದರೆ 24ಗಂಟೆಯೊಳಗೆ ಕ್ರಮ ಕೈಗೊಳ್ಳಲಾಗುತ್ತದೆ. ಸರ್ಕಾರ ರೈತರ ಪರವಾಗಿ ನಿಲ್ಲಲಿದ್ದು, ವಂಚನೆ ದೂರು ದಾಖಲು ಮಾಡುವ ರೈತರಿಗೆ ಒಂದು ಲಕ್ಷ ಬಹುಮಾನ ನೀಡಲಾಗುವುದು ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಪ್ರತಿಭಟನಾನಿರತ ರೈತರನ್ನು ಭೇಟಿಯಾದ ಸಚಿವರು, ರೈತರ ವಿವಿಧ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದ್ದಾರೆ. ಸಕ್ಕರೆ ಕಾರ್ಖಾನೆಗಳಲ್ಲಿ ತೂಕದಲ್ಲಿ ವಂಚನೆಯ ಬಗ್ಗೆ ರೈತರು ದೂರು ದಾಖಲಿಸಲು ಭಯಪಡುವ ಅಗತ್ಯವಿಲ್ಲ. ದೂರು ದಾಖಲಿಸಿದಲ್ಲಿ ಸರ್ಕಾರ ರೈತರ ಪರವಾಗಿ ನಿಲ್ಲಲಿದೆ. ಅವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ನೀಡಲಾಗುವುದು. ಅವರ ಕಬ್ಬನ್ನು ನುರಿಸುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಲಿದೆ ಎಂದು ಹೇಳಿದ್ದಾರೆ.

ತೂಕದಲ್ಲಿ ವಂಚನೆ ತಡೆಗೆ ತೂಕ ಮತ್ತು ಮಾಪನ ಇಲಾಖೆ ಅಧಿಕಾರಿಗಳು ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಡಿಜಿಟಲ್ ತೂಕದ ಯಂತ್ರ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗಿದೆ. ರೈತರ ಕಬ್ಬಿನ ಬಿಲ್ ಬಾಕಿಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಶಿವರಾಂಪೇಟೆಯ ಕೆಲ ಅಂಗಡಿಗಳಲ್ಲಿ 139 ಕೆಜಿ ನಿಷೇಧಿತ ಪ್ಲಾಸ್ಟಿಕ್ ಜಪ್ತಿ



ಮೈಸೂರಿನ ಶಿವರಾಂಪೇಟೆಯ ಕೆಲ ಮಳಿಗೆಗಳ ಮೇಲೆ ದಾಳಿ ನಡೆಸಿದ ಪಾಲಿಕೆ ಅಧಿಕಾರಿಗಳು, ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ವಶಕ್ಕೆ ಪಡೆದರು.

ಮೈಸೂರು, ಡಿ.16– ನಗರದ ಶಿವರಾಂಪೇಟೆಯ ಕೆಲ ಮಳಿಗೆಗಳ ಮೇಲೆ ದಾಳಿ ನಡೆಸಿದ ಪಾಲಿಕೆ ಅಧಿಕಾರಿಗಳು 139 ಕೆ.ಜಿ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ವಲಯ ಕಚೇರಿ–6ರ ಸಹಾಯಕ ಆಯುಕ್ತೆ ಪ್ರತಿಭಾ ನೇತೃತ್ವದಲ್ಲಿ ಸೋಮವಾರ ದಾಳಿ ನಡೆಸಿ, ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿಕೊಂಡಿರುವುದಲ್ಲದೆ ಸ್ಥಳದಲ್ಲಿಯೇ 20 ಸಾವಿರ ರೂ. ದಂಡ ವಿಧಿಸಲಾಯಿತು. ನಂತರ ವಶಕ್ಕೆ ಪಡೆದ ಪ್ಲಾಸ್ಟಿಕ್ ವಸ್ತುಗಳನ್ನು ಚೂರು ಮಾಡಲು ಜಾಗೃತ್ ತಂತ್ರಜ್ಞಾನಕ್ಕೆ ಕಳಿಸಲಾಯಿತು. ಪರಿಸರ ಇಂಜಿನಿಯರ್ ಮೈತ್ರಿ, ಆರೋಗ್ಯ ನಿರೀಕ್ಷಕ ಕೃಷ್ಣ, ಮಂಜು ಕುಮಾರ್ ಮತ್ತು ಅಭಯ ತಂಡದ ಸಿಬ್ಬಂದಿ ಉಪಸ್ಥಿತರಿದ್ದರು.

ಪಂಚಮಸಾಲಿಗರ ಮೇಲೆ ಲಾಠಿ ಪ್ರಹಾರ ವಿರೋಧಿಸಿ ಬಿಜೆಪಿ–ಜೆಡಿಎಸ್ ಸಭಾತ್ಯಾಗ

ಸುವರ್ಣ ವಿಧಾನಸೌಧ (ಬೆಳಗಾವಿ): ಮೀಸಲಾತಿಗೆ ಆಗ್ರಹಿಸಿ ಹೋರಾಟ ಮಾಡುತ್ತಿದ್ದ ಪಂಚಮಸಾಲಿ ಸಮುದಾಯದವರ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರ ಪ್ರಕರಣ ವಿಧಾನಪರಿಷತ್‌ನಲ್ಲಿ ಸೋಮವಾರವೂ ಗದ್ದಲ ಸೃಷ್ಟಿಸಿತು. ಪೊಲೀಸರು ಹಾಗೂ ಸರ್ಕಾರದ ನಡೆಯನ್ನು ಖಂಡಿಸಿದ ಬಿಜೆಪಿ–ಜೆಡಿಎಸ್ ಸದಸ್ಯರು ನ್ಯಾಯಾಂಗ ತನಿಖೆಗೆ ಆಗ್ರಹಿಸಿ, ಸಭಾತ್ಯಾಗ ಮಾಡಿದರು. ಜನರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಬೀಸಿದ್ದಾರೆ. ಹಾಗಾಗಿ, ಯಾವುದೇ ತನಿಖೆ ಅಗತ್ಯವಿಲ್ಲ ಎಂದು ಸಮರ್ಥಿಸಿಕೊಂಡ ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿಕೆ ವಿರೋಧಿಸಿದ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಪಂಚಮಸಾಲಿಗಳ ಮೀಸಲಾತಿ ಬೇಡಿಕೆ ಮತ್ತು ಪೊಲೀಸರ ದೌರ್ಜನ್ಯವನ್ನು ಸದನದಲ್ಲಿ ಪ್ರಶ್ನಿಸಿದ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪಂಚಮಸಾಲಿಗಳಿಗೆ ಬಿಜೆಪಿ ಸರ್ಕಾರ



2ಡಿ ಮೀಸಲಾತಿ ಕೊಟ್ಟಿತ್ತು. ಈ ಕುರಿತು ಆಗಸ್ಟ್ 2023ರಲ್ಲಿ ಕೋರ್ಟ್‌ಗೆ ಮೀಸಲಾತಿ ಹಿಂಪಡೆಯುವ ಪ್ರಮಾಣಪತ್ರ ಸಲ್ಲಿಸಿದಾಗ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಆದರೆ, ಬಿಜೆಪಿ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತ್ತು ಎಂದು ಮುಖ್ಯಮಂತ್ರಿ, ಗೃಹ ಸಚಿವರು ಸುಳ್ಳು ಹೇಳಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿಯ ಸಿ.ಟಿ. ರವಿ ಮಾತನಾಡಿ, ಲಾಠಿ ಬೀಸುವ ಮೊದಲು ಹೋರಾಟಗಾರರನ್ನು ತಡೆಯಲು ಪೊಲೀಸರು ಬದಲಿ ಕ್ರಮಗಳನ್ನು ಬಳಕೆ ಮಾಡಿಲ್ಲ. ಶಾಂತಿಯುತ ಹೋರಾಟ ನಡೆಸುತ್ತಿದ್ದವರ ಮೇಲೆ ದೌರ್ಜನ್ಯ ಎಸಗಲಾಗಿದೆ. ಪೊಲೀಸರ ಕ್ರಮವನ್ನೇ ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಇದು ಸರ್ವಾಧಿಕಾರಿ ಸರ್ಕಾರ ಎಂದು ದೂರಿದರು.

ಆರು ತಿಂಗಳಲ್ಲಿ ನದಿ ಪಾತ್ರ ತ್ಯಾಜ್ಯ ಮುಕ್ತ

ಬೆಳಗಾವಿ, ಡಿ.16– ಕಾವೇರಿ ನದಿ ಪಾತ್ರವನ್ನು ಇನ್ನಾರು ತಿಂಗಳ ಒಳಗಾಗಿ ತ್ಯಾಜ್ಯಗಳಿಂದ ಮುಕ್ತಗೊಳಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿ ಎಂ.ಪಿ.ಕುಶಾಲಪ್ಪ ಪ್ರಶ್ನೆಗೆ ಉತ್ತರಿಸಿರುವ ಅವರು, ಕಾವೇರಿ ನದಿಗೆ ಕಲುಷಿತ ತ್ಯಾಜ್ಯ ಸೇರುತ್ತಿರುವ ಬಗ್ಗೆ ಪರಿಶೀಲಿಸಿ ಅಧ್ಯಯನ ಸಮಿತಿ ವರದಿ ನೀಡಿದೆ. ಮೈಸೂರು ನಗರಪಾಲಿಕೆ, ಐದು ನಗರಸಭೆಗಳು, ಎಂಟು ಪುರಸಭೆಗಳು, ನಾಲ್ಕು ಪಟ್ಟಣ ಪಂಚಾಯಿತಿಗಳು, 110 ಗ್ರಾಮಗಳಿಂದ ಕಲ್ಮಶ ನೀರು ಸೇರುತ್ತಿತ್ತು. ಹೀಗಾಗಿ ಕೊಳಚೆ ನೀರು ಸಂಸ್ಕರಣೆಗೆ ಕ್ರಮ ಕೈಗೊಳ್ಳಲಾಗಿದೆ. ಕಾಲಕಾಲಕ್ಕೆ ಈ ಬಗ್ಗೆ ತೀವ್ರ ನಿಗಾವಹಿಸಲಾಗುವುದು ಎಂದರು.

ಜಾಮೀನು ಮಂಜೂರು; ಸೆಷನ್ಸ್ ಕೋರ್ಟ್‌ನಲ್ಲಿ ಜಾಮೀನು ಬಾಂಡ್‌ಗೆ ದರ್ಶನ್ ಸಹಿ

ಬೆಂಗಳೂರು: ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದ ಬಳಿಕ ಶ್ಯೂರಿಟಿ ಬಾಂಡ್‌ಗೆ ಸಹಿ ಹಾಕಲು ಇಂದು (ಸೋಮವಾರ) ಆಸ್ಪತ್ರೆಯಿಂದ ಹೊರಬಂದು ಸೆಷನ್ಸ್ ಕೋರ್ಟ್‌ಗೆ ಹಾಜರಾಗಿದ್ದಾರೆ.

ಹೈಕೋರ್ಟ್‌ನಿಂದ ಮಧ್ಯಂತರ ಜಾಮೀನು ಮಂಜೂರು ಆದ ನಂತರ ಕಳೆದ ಒಂದೂವರೆ ತಿಂಗಳ ಹಿಂದೆ ತೀವ್ರ ಬೆನ್ನು ನೋವು ಎಂದು ಬೆಂಗಳೂರಿನ ಕೆಂಗೇರಿಯಲ್ಲಿರುವ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯಲ್ಲಿಯೇ ಇಷ್ಟು ದಿನ ವಿಶ್ರಾಂತಿ ಪಡೆಯುತ್ತಿದ್ದ ದರ್ಶನ್‌ಗೆ ವೈದ್ಯರು ಸರ್ಜರಿ ಮಾಡಿಲ್ಲ.

ಕಳೆದ ವಾರ ಹೈಕೋರ್ಟ್ ಪ್ರಕರಣದ ಎ1 ಆರೋಪಿ ಪವಿತ್ರಾ ಗೌಡ, ಎ2 ಆರೋಪಿ ದರ್ಶನ್ ಸೇರಿದಂತೆ ಎಲ್ಲರಿಗೂ ಜಾಮೀನು ಮಂಜೂರು ಮಾಡಿದ ಹಿನ್ನೆಲೆಯಲ್ಲಿ ಇಂದು ಶ್ಯೂರಿಟಿ ಬಾಂಡ್‌ಗೆ ಸಹಿ ಹಾಕಲು ಕೋರ್ಟ್‌ಗೆ ವೈದ್ಯರ ಸಲಹೆ ಮೇರೆಗೆ ಬಂದರು. ಈ ವೇಳೆ ಅವರ ಪತ್ನಿ ವಿಜಯಲಕ್ಷ್ಮಿ ಮತ್ತು ನಟ ಧನ್ವೀರ್ ಇದ್ದರು.

ಇನ್ನೂ ನಿರ್ಧಾರವಾಗದ ಆಪರೇಷನ್: ತೀವ್ರ ಬೆನ್ನು ನೋವು ಎಂದು ಆಸ್ಪತ್ರೆಗೆ ದಾಖಲಾಗಿರುವ ದರ್ಶನ್‌ಗೆ ಆಪರೇಷನ್ ಮಾಡುವ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ ಆಪರೇಷನ್ ಮಾಡಬೇಕೆ ಅಥವಾ ಬೇಡವೆ ಎಂಬ ಬಗ್ಗೆ ಇನ್ನೊಮ್ಮೆ ವೈದ್ಯರ ಬಳಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ಒಳ ಮೀಸಲಾತಿ ವಿಚಾರದಲ್ಲಿ ಮುಖ್ಯಮಂತ್ರಿ ದೃಢ ಭರವಸೆ ನೀಡದೇ ಇದ್ದಲ್ಲಿ ಉಗ್ರ ಹೋರಾಟ ಅನಿವಾರ್ಯ

•ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಎಚ್ಚರಿಕೆ •ಚಿತ್ರದುರ್ಗದಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಒಳಮೀಸಲಾತಿಗಾಗಿ ಭಾರಿ ಸಮಾವೇಶ; ಮೈಸೂರು ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಅಧ್ಯಕ್ಷತೆ

ಚಿತ್ರದುರ್ಗ, ಡಿ.16– ಒಳ ಮೀಸಲಾತಿ ಜಾರಿಗೊಳಿಸಲು ನಾವು ಬದ್ಧರಾಗಿದ್ದೇವೆ ಎಂಬುದನ್ನು ಅಧಿವೇಶನದಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರು ಸ್ಪಷ್ಟಪಡಿಸದಿದ್ದಲ್ಲಿ ಹೋರಾಟ ನಡೆಸುವ ಅನಿವಾರ್ಯತೆ ಸೃಷ್ಟಿಯಾಗಲಿದೆ ಎಂದು ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಎಚ್ಚರಿಸಿದರು.

ನಗರದ ತರಾಸು ರಂಗಮಂದಿರದಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಸುಪ್ರೀಂ ಕೋರ್ಟ್ ಆದೇಶದನ್ವಯ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗಾಗಿ ಆಗ್ರಹಿಸಿ ಶನಿವಾರ ಮೈಸೂರು ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ಪ್ರಥಮ ರಾಜ್ಯ ಮಟ್ಟದ ಮಾದಿಗ ವಕೀಲರ ಬೃಹತ್ ಸಮಾವೇಶದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಒಳ ಮೀಸಲಾತಿ ಬಗ್ಗೆ ನಮ್ಮ ಸಮುದಾಯದ ಮುಖಂಡರು ಸುದ್ದಿಗೋಷ್ಠಿಗಳಲ್ಲಿ ಹೇಳಿಕೆ ನೀಡಿದರೆ ಸಮುದಾಯಕ್ಕೆ ನಂಬಿಕೆ ಬರಲಾರದು. ಆದರೆ ಸದನದಲ್ಲಿ ಸಚಿವರು, ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರೆ ನಮಗೆ ವಿಶ್ವಾಸ ಮೂಡಲಿದೆ. ಈವರೆಗೆ ನಡೆದ ಒಳ ಮೀಸಲಾತಿ ಹೋರಾಟದಲ್ಲಿ ನಮ್ಮವರು ಏಳು ಮಂದಿ ಮೃತಪಟ್ಟಿದ್ದು, ಆ ಸಂಖ್ಯೆ ಮತ್ತೆ ಹೆಚ್ಚಬಾರದು. ಅದಕ್ಕಾಗಿ ಇಷ್ಟು ದಿನದೊಳಗೆ ಜಾರಿಗೊಳಿಸುವ ಕುರಿತು ದೃಢ ಭರವಸೆ ನೀಡಬೇಕು ಎಂದು ಆಗ್ರಹಿಸಿದರು.



ಚಿತ್ರದುರ್ಗದಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ವತಿಯಿಂದ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗಾಗಿ ಆಗ್ರಹಿಸಿ ಆಯೋಜಿಸಿದ್ದ ಪ್ರಥಮ ರಾಜ್ಯಮಟ್ಟದ ಮಾದಿಗ ವಕೀಲರ ಬೃಹತ್ ಸಮಾವೇಶವನ್ನು ಗಣ್ಯರು ಉದ್ಘಾಟಿಸಿದರು.

> ಒಳಮೀಸಲಾತಿ ಜಾರಿಗೆ ಕೆಲವರ ವಿರೋಧವಿರುವುದರಿಂದ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. ಸಚಿವ ಸಂಪುಟದಲ್ಲಿ ಆಯೋಗ ರಚನೆಗೆ ಒಪ್ಪಿಗೆ ನೀಡಿ, 14 ದಿನಗಳ ನಂತರ ಆದೇಶ ನೀಡಲಾಯಿತು. ನ್ಯಾ.ನಾಗಮೋಹನ್ ದಾಸ್ ಅಧಿಕಾರ ಸ್ವೀಕರಿಸಿದ 60 ದಿನಗಳಲ್ಲಿ ವರದಿ ನೀಡಬೇಕೆಂದು ಆದೇಶದಲ್ಲಿ ಹೇಳಲಾಗಿತ್ತು. ಆದರೆ ಅಧಿಕಾರ ಸ್ವೀಕಾರವೇ ಆಗದಿರುವುದು ಮತ್ತೊಂದು ಷಡ್ಯಂತ್ರ. ಒಳಮೀಸಲಾತಿ ಸಂಬಂಧ ಒಪ್ಪಿಗೆ ಇದೆ ಎಂದು ಪ್ರಾಮಾಣಿಕ ಹೇಳಿದರೂ ಕಾಂಗ್ರೆಸ್ ಮತ್ತು ಬಿಜೆಪಿ ಒಳಮೀಸಲಾತಿ ಪರ ಇವೆಯೇ ಎಂಬ ಅನುಮಾನ ಕಾಡಲಾರಂಭಿಸಿದೆ. -ಎಸ್.ಅರುಣ್‌ಕುಮಾರ್,
> ಅಧ್ಯಕ್ಷ, ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ

ಸದನದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮೀಸಲಾತಿ ಕುರಿತು ದನಿ ಎತ್ತಿದರೆ, ಅದಕ್ಕೆ ಸಮಾಜದ ಚುನಾಯಿತ ಜನಪ್ರತಿನಿಧಿಗಳು ದನಿಗೂಡಿಸುವ ಬದಲು ಮೌನ ವಹಿಸಿದ್ದರಿಂದ ನಮ್ಮ ಹೋರಾಟ ಮುಂದುವರೆಸಬೇಕಾಗಿದೆ. ಈ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದೆ. ಜೀವನಕ್ಕಾಗಿ ವೃತ್ತಿಯಲ್ಲ. ದೇಶಕ್ಕಾಗಿ ದುಡಿದರೆ ಮಾತ್ರ ಸಮಾಜ ಬದಲಾಗಲಿದೆ. ಸಮಾಜದಲ್ಲಿ ಎಷ್ಟು ಸಂಖ್ಯೆಯಲ್ಲಿ ನೌಕರರಾಗಬೇಕು ಅಂದುಕೊಂಡಿದ್ದೀರೊ ಅಷ್ಟೇ ಪ್ರಮಾಣದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲೂ ಬೆಳೆಯಬೇಕು ಎಂದು ಕಿವಿಮಾತು ಹೇಳಿದರು.

ಕೇಂದ್ರದ ಮಾಜಿ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಮಾತನಾಡಿ, ಒಳ ಮೀಸಲಾತಿ ಇನ್ನು ಎರಡು ತಿಂಗಳೊಳಗೆ ಜಾರಿಯಾಗದಿದ್ದರೆ ಮಹಾರಾಷ್ಟ್ರ, ಒಡಿಸ್ಸಾ ಮಾದರಿಯಲ್ಲಿ ಹೋರಾಟ ಮಾಡಲಾಗುತ್ತದೆ. ಒಂಬತ್ತು ವರ್ಷ ಹರಿಯಾಣದಲ್ಲಿ ಒಳ ಮೀಸಲಾತಿ ಜಾರಿಯಲ್ಲಿತ್ತು. ಆದರೆ ದೇಶದ ರಾಷ್ಟ್ರೀಯ, ರಾಜ್ಯ ಪಕ್ಷಗಳಿಂದ ನ್ಯಾಯ ಕೊಡಲು ಸಾಧ್ಯವಾಗಿಲ್ಲ. ಮೀಸಲಾತಿ ಸೌಲಭ್ಯ ಪಡೆದು ಅಧಿಕಾರಕ್ಕೆ ಬಂದವರು ಲಾಠಿ ಏಟು ತಿಂದವರ ದನಿಯಾಗಿ ನಿಲ್ಲಲಿಲ್ಲ. ನ್ಯಾ.ಸಂತೋಷ್ ಹೆಗ್ಡೆ ಅವರು 500ಕ್ಕೂ ಹೆಚ್ಚು ಜಾತಿಗಳು ಹೋಮೋಜಿನಿಯಸ್ ಎಂದು ಉಲ್ಲೇಖಿಸಿದ್ದನ್ನು ಪ್ರಶ್ನಿಸಲಿಲ್ಲ. ಮೆಹ್ತಾ ವರದಿ ತಿರಸ್ಕರಿಸಿದ್ದನ್ನು, 2008ರಲ್ಲಿ ಯಾರೂ ಕೇಳಲಿಲ್ಲ. ಆರ್ಟಿಕಲ್ 341 ರದ್ದು ಮಾಡಿದ ಕಾಂಗ್ರೆಸ್ಸಿಗರಿಂದಲೇ ಕಾಂಗ್ರೆಸ್ಸಿಗರಿಗೆ ಸನ್ಮಾನಿಸಲಾಯಿತು. ಇಂಪೀರಿಯಲ್ ಡೇಟಾ ಬಗ್ಗೆ ಮಾಹಿತಿ ಇಲ್ಲದೆ ನರೇಂದ್ರ ಸ್ವಾಮಿ ಮೂರ್ಖರಂತೆ ಮಾತನಾಡಿದ್ದಾರೆ. ಮಾದಿಗರ ವಿರುದ್ಧ ಏನು ಮಾತನಾಡಿದರೂ ನಡೆಯುತ್ತದೆ ಎಂಬ ಭಾವನೆ ಇದೆ. ವೇದಿಕೆಗೆ ಸೀಮಿತವಾಗಿ ಹುಲಿ, ಸಿಂಹದಂತೆ ಘರ್ಜಿಸುವವರು ಹೋರಾಟಗಾರರಲ್ಲ ಎಂದು ಹೇಳಿದರು.

ಬಹುಜನ ಚಳವಳಿಗಾರ ಮಾರಸಂದ್ರ ಮುನಿಯಪ್ಪ, ಮಾಜಿ ಶಾಸಕ ವೀರಭದ್ರಪ್ಪ ಹಾಲರವಿ, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಚ್.ಸಿ.ಶ್ಯಾಮ್‌ಪ್ರಸಾದ್, ಹಿರಿಯ ವಕೀಲ ಎಸ್.ಮಾರಪ್ಪ, ವೇದಿಕೆ ಪ್ರಧಾನ ಕಾರ್ಯದರ್ಶಿ ಬೂದಿತಿಟ್ಟು ರಾಜೇಂದ್ರ ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ವಿಜಯ್‌ಕುಮಾರ್, ಹಿರಿಯ ವಕೀಲರಾದ ಬೀಸ್ನಹಳ್ಳಿ ಜಯಪ್ಪ, ಎಂ.ದಾಸಯ್ಯ, ಶಿವಕುಮಾರ್ ಎಂ.ಬೆಳ್ಳೂರು, ಮಾಳಪ್ಪ ಕುರ್ಕಿ, ಎಂ.ಆರ್.ಸುರೇಂದ್ರಕುಮಾರ್, ಟಿ.ಹನುಮಂತಪ್ಪ, ಜಿ.ಕೆ.ಮಲ್ಲಿಕಾರ್ಜುನ್, ಕುಮಾರಪ್ಪ, ಎನ್.ಚಂದ್ರಪ್ಪ, ಚಂದ್ರಸೇನಾ ಸಾಗರ್, ನರಹರಿ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ವಕೀಲರು ತಮಟೆ ಕಲಾತಂಡದೊಂದಿಗೆ ಒಳಮೀಸಲಾತಿ ಘೋಷಣೆ ಮೊಳಗಿಸುತ್ತಾ ರಂಗಮಂದಿರದಿಂದ ಅಂಬೇಡ್ಕರ್ ವೃತ್ತ ಪ್ರವಾಸಿ ಮಂದಿರ, ಡೀಸಿ ವೃತ್ತ, ಮದಕರಿ ಸರ್ಕಲ್ ಮಾರ್ಗವಾಗಿ ಕಾಲ್ನಡಿಗೆ ಜಾಥಾ ನಡೆಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಪ್ರಸಾದ್, ಸೀನಿಯರ್‌ಗೂ ಜೂನಿಯರ್‌ಗೂ ಇರೋ ವ್ಯತ್ಯಾಸವೇನು?

ಪ್ರಸಾದ್ : ಟೀಚರ್, ಸಮುದ್ರದ ಹತ್ತಿರ ವಾಸ ಮಾಡುವವರನ್ನು ಸೀ-ನಿಯರ್ ಎಂದೂ, ಮೃಗಾಲಯದ ಹತ್ತಿರ ವಾಸ ಮಾಡುವವರನ್ನು ಜೂ- ನಿಯರ್ ಎಂದು ಕರೆಯುತ್ತಾರೆ.

ಮೈಸೂರು ಮಿತ್ರ
ಮಂಗಳವಾರ, 17 ಡಿಸೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರೀತಿಸುವವರನ್ನು ಪಡೆಯುವುದು ಕಠಿಣ, ಅದಕ್ಕೂ ಕಠಿಣ ಕೆಡದಂತೆ ಪ್ರೀತಿಯ ಕಾಯ್ದುಕೊಂಡು ಹೋಗುವುದು. –ಸಿದ್ದಯ್ಯ ಪುರಾಣಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಣಸೆ ಹುಳಿಯೆಂದು ಅಂಬಡೆ ತಿಂದ ಹಾಗೆ.

ನಿಮ್ಮ ಪತ್ರಗಳು

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಉಚಿತ ಬಸ್ ಸೌಲಭ್ಯ ಜೊತೆಗೆ ಭದ್ರತೆ ಕಲ್ಪಿಸಿ

ಮಾನ್ಯರೆ,

ಸಕ್ಕರೆ ನಾಡು ಎಂಬ ಬಿರುದನ್ನು ಪಡೆದಿರುವ ಮಂಡ್ಯ ಜಿಲ್ಲೆಯಲ್ಲಿ ಈ ಬಾರಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಈಗಾಗಲೇ ಸಿದ್ಧತೆಗಳು ಅಂತಿಮ ಹಂತ ತಲುಪಿರುವುದು ಸಂತಸದ ವಿಷಯವಾಗಿದೆ. ಈ ಸಮ್ಮೇಳನದಲ್ಲಿ ನಮ್ಮ ಕನ್ನಡ ನಾಡಿನ, ನಾಡು, ನುಡಿ, ಸಂಸ್ಕೃತಿ, ರೈತರ ವ್ಯವಸಾಯಗಳು ಆಚಾರ – ವಿಚಾರ ಕರ್ನಾಟಕದಲ್ಲಿರುವ ಎಲ್ಲಾ ವಿಷಯದ ವಿಶಿಷ್ಟ-ವೈಶಿಷ್ಟ್ಯಗಳ ವಿಷಯಗಳು ಪ್ರಸ್ತಾಪ ಹೆಚ್ಚಾಗಿ ಇಂದಿನ ಯುವ ಪೀಳಿಗೆಗೆ ತಿಳಿಸಬೇಕಾಗಿದೆ. ಏಕೆಂದರೆ ಇಂದು ರಾಜ್ಯ ರಾಜಧಾನಿ ಬೆಂಗಳೂರಿನಂತಹ ದೊಡ್ಡನಗರದಲ್ಲಿ ನಮ್ಮ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿದ್ದು, ಅನ್ಯ ಭಾಷೆಯ ಬಳಕೆ ಹೆಚ್ಚಾಗುತ್ತಿದೆ. ಇದೇ ರೀತಿಯಾದರೆ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬೆಳೆಯುತ್ತಿರುವ ಅನೇಕ ನಗರಗಳಿಗೂ ತೊಂದರೆ ಆಗಬಹುದು. ಈಗಾಗಲೇ ರಾಜ್ಯ ಸರ್ಕಾರವು ಸಹ ರಾಜ್ಯದ ಆಡಳಿತ ಭಾಷೆ ಕನ್ನಡ ಭಾಷೆ ಎಂದು ಘೋಷಿಸಿದರೂ ಕೆಲವು ಸ್ಥಳಗಳಲ್ಲಿ ವ್ಯಾಪಾರ ವಹಿವಾಟು ನಡೆಸುವವರು ಅನ್ಯ ಭಾಷೆಯ ಅಕ್ಷರಗಳಿಂದ ಬರೆದು ನಾಮಫಲಕ ಅಳವಡಿಸಿದ್ದಾರೆ. ಜೊತೆಗೆ ಸಮ್ಮೇಳನದಲ್ಲಿ ಯಾವುದೇ ರೀತಿಯ ಗಲಭೆಗಳು ನಡೆಯಬಾರದು. ಮಹಿಳೆಯರು ಹಾಗೂ ಮಕ್ಕಳಿಗೆ ಸೇರಿದಂತೆ ಕಾರ್ಯಕ್ರಮಕ್ಕೆ ಬರುವ ಎಲ್ಲರಿಗೂ ಯಾವುದೇ ರೀತಿಯ ತೊಂದರೆಯಾಗದಂತೆ ಹೆಚ್ಚುವರಿ ಪೊಲೀಸ್ ಬಿಗಿ ಭದ್ರತೆ ಒದಗಿಸಬೇಕು. ಸಮ್ಮೇಳನಕ್ಕೆ ಆಗಮಿಸುವ ಪುರುಷರಿಗೂ ಉಚಿತ ಸಾರಿಗೆ ಬಸ್ಸುಗಳ ವ್ಯವಸ್ಥೆ ಮಾಡಲು ಸಂಬಂಧಪಟ್ಟ ಸಮ್ಮೇಳನದ ಅಧ್ಯಕ್ಷರು, ಸಾರಿಗೆ ಸಚಿವರು ಮತ್ತು ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ನಿರ್ಧಾರ ಕೈಗೊಳ್ಳಲಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ದೇವಸ್ಥಾನದಲ್ಲಿ ಗೂಂಡಾಗಿರಿ ತಪ್ಪಲಿ

ಮಾನ್ಯರೆ,

ನಿನ್ನೆ ನಿಮಿಷಾಂಬ ದೇವಸ್ಥಾನ, ರಂಗನಾಥ ದೇವಸ್ಥಾನಕ್ಕೆ ಬಂಧುಗಳ ಜತೆ ಹೋಗಿದ್ದೆ. ನಿಮಿಷಾಂಬ ದೇವಸ್ಥಾನದಲ್ಲಿ ಚಪ್ಪಲಿ ಬಿಡಲು ಹಣ ಇಲ್ಲ ಎಂದು ಬರೆದಿದ್ದಾರೆ. ತೊಂದರೆ ಇಲ್ಲ. ಅಲ್ಲಿಂದ 10 ಕಿ.ಮೀ. ದೂರದಲ್ಲಿರುವ ಶ್ರೀರಂಗಪಟ್ಟಣ ದೇವಸ್ಥಾನದಲ್ಲಿ ಚಪ್ಪಲಿ (ನಮಗೆ ಬೇಡದಿದ್ದರೂ) ಸ್ಟಾಂಡ್‌ನಲ್ಲೇ ಬಿಡಬೇಕು. ಕೆಲವರು ತಾವೊಬ್ಬರೇ ಹೊರಗೆ ಇದ್ದು ಉಳಿದವರನ್ನು ನೀವು ದೇವರು ನೋಡಿ ಬನ್ನಿ. ನಾನು ಚಪ್ಪಲಿ ನೋಡಿಕೊಳ್ಳುತ್ತೇನೆ ಎಂದು ಉಳಿದವರು ಬರುವವರೆಗೂ ಆಚೆ ನಿಂತಿದ್ದರು. ಚಪ್ಪಲಿ ಸ್ಟಾಂಡ್‌ನ ಗುತ್ತಿಗೆದಾರನ ಕಡೆಯವನು ಒಂದು ಸಿಮೆಂಟ್ ಚೀಲ ಹಿಡಿದುಕೊಂಡು ಬಂದು, ಸ್ಟಾಂಡ್‌ನಲ್ಲಿ ಬಿಡಿ. ಇಲ್ಲಾಂದ್ರೆ ಇಲ್ಲಿ ಬಿಟ್ರೆ ದುಡ್ಡು ಕೊಡಿ ಅಂತ ಕೇಳ್ತಿದ್ರು. ಯಾರೂ ಇಲ್ಲದೆ ಚಪ್ಪಲಿ ಬಿಟ್ ಹೋದ್ರೆ ಅವುಗಳನ್ನು ಚೀಲಕ್ಕೆ ಹಾಕಿಕೊಂಡು ಸ್ಟ್ಯಾಂಡಿಗೆ ಒಯ್ಯುತ್ತಿದ್ದರು. ಇದೊಂದು ರೀತಿ ದಾದಾಗಿರಿ ಅಲ್ಲವೇ. ಕೋಟ್ಯಾಂತರ ರೂಪಾಯಿ ವರಮಾನ ಇರುವ ರಂಗನಾಥನಿಗೆ ಕೆಲವು ಸಾವಿರ ರೂಪಾಯಿಗೆ ಬರವೇ? ಚಪ್ಲಿ ಸ್ಟಾಂಡ್‌ನಲ್ಲಿ ಇಷ್ಟು ಅಂತ ರೇಟ್ ಬರೆದಿಲ್ಲ. ಡಿಸಿ ಇಲ್ಲವೇ ಶಾಸಕರ ಕಣ್ಣಿಗೆ ಇವೆಲ್ಲ ಕಾಣುವುದಿಲ್ಲವೇ. ತಕ್ಷಣ ಹಣ ಕೀಳುವ ವ್ಯವಸ್ಥೆ ನಿಲ್ಲಿಸಿ. ಇಂತಹ ಕನಿಷ್ಠ ಅನುಕೂಲತೆಗಳು ಉಚಿತವಾಗಿರಲಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಹಿಂದೂ ಧರ್ಮದ ಮೇಲೆ ಆಕ್ರಮಣ

ಮಾನ್ಯರೆ,

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕ್ಯಾರಲ್ ಸಿಂಗಿಂಗ್ ಸ್ಪರ್ಧೆ ನಡೆಯಿತೆಂದು ವರದಿಯಾಗಿದೆ (ಮೈ.ಮಿ. 9.12.2024). ಗೂಗಲ್ ವಿವರಣೆ ಪ್ರಕಾರ ಕ್ಯಾರಲ್ ಸಿಂಗಿಂಗ್ ಅಂದರೆ ಕ್ರಿಸ್‌ಮಸ್ ಸಮಯದಲ್ಲಿ ಗುಂಪುಗಳಲ್ಲಿ ಮನೆ ಮನೆಗೆ ತೆರಳಿ ಹಣ ಬೇಡುವುದು.

ಈ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳ 45 ಶಾಲೆಗಳ 6,000 ಮಕ್ಕಳು ಭಾಗವಹಿಸಿದ್ದರೆಂದು ವರದಿಯಾಗಿದೆ. ಇಲ್ಲಿ ಎಲ್ಲಾ ಧರ್ಮದ ಎಳೆಯ ವಯಸ್ಸಿನ ಮಕ್ಕಳೂ ಇರುತ್ತಾರೆ. ಇದು ಆ ಮಕ್ಕಳ ಎಳೆಯ ಮನಸ್ಸುಗಳ ಮೇಲೆ ಪ್ರಭಾವ ಬೀರುವುದಿಲ್ಲವೇ? ಜಾತ್ಯತೀತ ಅಂದ ಮಾತ್ರಕ್ಕೆ ಇತರ ಧರ್ಮದ ಮಕ್ಕಳು ಇದರಲ್ಲಿ ಯಾಕೆ ಭಾಗವಹಿಸಬೇಕು?

ಇವರು ನಿಜವಾಗಿಯೂ ಜಾತ್ಯತೀತರೇ ಆಗಿದ್ದಲ್ಲಿ ಶಿವತಾಂಡವ ಸ್ತೋತ್ರ, ವಿಷ್ಣು ಸಹಸ್ರನಾಮ, ದಾಸರ ಪದಗಳು, ಕರ್ನಾಟಕ ಸಂಗೀತ ಸ್ಪರ್ಧೆಗಳನ್ನು ಯಾಕೆ ಏರ್ಪಡಿಸುವುದಿಲ್ಲ? ಇದು ಇತರ ಧರ್ಮಗಳ ಮೇಲೆ ಮಾಡುತ್ತಿರುವ ಅಪರೋಕ್ಷ ಆಕ್ರಮಣ ಅಲ್ಲವೇ? ಇದೆಲ್ಲಾ ಕ್ರಿಶ್ಚಿಯಾನಿಟಿ ಪ್ರಚಾರದ ಸೀಕ್ರೆಟ್ ಮಿಷನ್. ಈ ಮಕ್ಕಳ ಹಿಂದೂ ಪೋಷಕರು ಪೆದ್ದರಂತೆ ವರ್ತಿಸಿ ಅವರ ಗುಳ್ಳೆನರಿ ಬುದ್ಧಿಗೆ ಕುರಿಗಳಂತೆ ಮರುಳಾಗುತ್ತಿರುವುದು ದುರ್ದೈವದ ಸಂಗತಿ. ಹಿಂದೂಗಳೇ ಜಾಗೃತರಾಗಿ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ.

ಪೊಲೀಸರಿಗೆ ಹೊರೆಯಾದ ಪಾಲಿಕೆ!



ಮಾನ್ಯರೆ,

ಜನರಿಗೆ ದಾರಿತೋರಬೇಕಾಗಿದ್ದ ಪಾಲಿಕೆಯ ಫಲಕವು ಸೊಂಟ ಮುರಿದುಕೊಂಡು ಪಕ್ಕದಲ್ಲಿರುವ ನೋ ಪಾರ್ಕಿಂಗ್ ಫಲಕಕ್ಕೆ ಒರಗಿಕೊಂಡಿದೆ. ಇದರಿಂದಾಗಿ ಪೊಲೀಸರು ಅಳವಡಿಸಿದ ನೋ ಪಾರ್ಕಿಂಗ್ ಫಲಕಕ್ಕೆ ಪಾಲಿಕೆಯು ಅಳವಡಿಸಿದ ಫಲಕವೇ ಹೊರೆಯಾದಂತಾಗಿದೆ. ಈ ಫಲಕದಲ್ಲಿ ಜನಪ್ರತಿನಿಧಿಯ ಹೆಸರೂ ಇದೆ. ಪೊಲೀಸರಿಗೆ ಜನಪ್ರತಿನಿಧಿಗಳೇ ದೊಡ್ಡ ಹೊರೆ ಎಂಬುದಕ್ಕೆ ಈ ಚಿತ್ರವೇ ಸಾಕ್ಷಿ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ದೇವನೂರು ಮಹದೇವ ಅವರಿಗೆ ವೈಕಂ ಪ್ರಶಸ್ತಿ



ಮಾನ್ಯರೆ,

ವೈಕಂ ಚಳುವಳಿಯು ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟ. ಇದರ ನೆನಪಿನ ಹೆಸರಿನಲ್ಲಿ ತಮಿಳುನಾಡು ಸರ್ಕಾರ ಸ್ಥಾಪಿಸಿ, ಕೊಡ ಮಾಡುವ 2024ನೇ ಸಾಲಿನ ಪ್ರಶಸ್ತಿಗೆ ನಮ್ಮ ಮೈಸೂರಿನಲ್ಲಿರುವ ದೇವನೂರು ಮಹಾದೇವ ಅವರು ಭಾಜನರಾಗಿರುವುದು ತುಂಬಾ ಸಂತಸದ ಸಂಗತಿ. ವೈಕಂ ಹೋರಾಟ ನಡೆದು ಇಂದಿಗೆ ನೂರು ವರ್ಷಗಳು ಆಗಿರುವ ಈ ಸುಸಂದರ್ಭದಲ್ಲಿ ದೇವನೂರು ಮಹಾದೇವ ಅವರಿಗೆ ಮೊದಲ ಪ್ರಶಸ್ತಿ ದೊರಕುತ್ತಿರುವುದು ಅತ್ಯಂತ ಗೌರವದ ವಿಷಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ದೂರುಗಳಿಂದ ಸಂಬಂಧ ದೂರ... ದೂರ...

ದೂರುವುದು ಬಹಳ ಸುಲಭ–ದೂರವಾಗುವುದು ಸಹ ಬಹಳ ಸುಲಭ ದೂರವಾದಂತೆ ಮುಂದಿನ ಹೆಜ್ಜೆಯಲ್ಲಿ ಘಟಿಸುವ ಘಟನೆಗಳು, ಹಿಂದಣ ನೆನಪುಗಳು, ಭಾವನೆಗಳನ್ನು ಬಸಿದು ಮನದ ಗೋಡೆಯನ್ನು ಹಸಿಯಾಗಿಸುವ ಉನ್ಮಾದದಿಂದ ಪಾರಾಗಲು ಸಾಧ್ಯವಾಗದು. ಒಮ್ಮೆ ದೂರವಾದರೇ ಎಂದೋ ಎದುರಾದರೆ ಮುಖದ ಮೇಲೆ ಕುಳಿತ ಕೌತುಕ ರೂಪ ಬಯಲಾಗಿ ಬೆತ್ತಲಾಗುವ ಅಂತರಂಗದ ತಳಮಳ, ಆಂತರಿಕ ಶಕ್ತಿಯನ್ನು ಕುಗ್ಗಿಸುತ್ತದೆ. ಅಳಸಿದ ಸಂಬಂಧವನ್ನು ಮತ್ತಷ್ಟು ಹದಗೆಡಿಸುತ್ತದೆ. ದೂರುಗಳಿಗೆ ದೊರೆಯಾದರೆ ಸಂಬಂಧಗಳು ದೂರವೇ ಆಗುತ್ತವೆ. ದೂರುವುದಕ್ಕಿಂತ ನಮ್ಮತನದಿಂದ ಮೌನವಾಗುಳಿದು ಕಾವಿಗೆ ಕುಳಿತ ಭಾವವನ್ನು ಹಕ್ಕಿಯಾಗಿಸಲು ಇದ್ದಂತೆ ಇದ್ದು ಬಿಡುವುದು ಒಳಿತು. ಇಷ್ಟೆಲ್ಲಾ ಉದ್ದುದ್ದ ಭಾಷಣದ ಭೀಷಣ ಬಿಗಿಯುತ್ತಿರುವ ನನ್ನನ್ನು ಬದಲಾಗಿರುವೆ ಎಂದು ಕೇಳುವೆಯಾ? ನನ್ನ ಈ ಪರಿಸ್ಥಿತಿಗೆ ಸುತ್ತ ಮುತ್ತಲಿನ ವಾತಾವರಣವೇ ಕಾರಣ! ನಾನೇನು ಮಾಡಲಿ ಎಲ್ಲರೂ ಇರುವಂತೆ ನಾನಿರುವೆ. ಅವರು ಮಾಡಿದಂತೆ ನಾನು ಮಾಡುತ್ತಲಿರುವೆ. ಇದರಲ್ಲಿ ನನ್ನ ತಪ್ಪೇನು ಇಲ್ಲ. ಎಲ್ಲರೊಳ ಗೊಂದಾಗು ಮಂಕುತಿಮ್ಮ ಎಂದು ಡಿವಿಜಿ ಅವರೇ ಹೇಳಿಲ್ಲವೇ?!

ಗೆಳೆಯನ ವರ್ತನೆಯಲ್ಲಿ ಸಂಪೂರ್ಣ ಬದಲಾವಣೆಯನ್ನು ಗಮನಿಸಿ ಅದನ್ನು ಅರಗಿಸಿಕೊಳ್ಳಲಾಗದೇ ಅವನನ್ನು ಪ್ರಶ್ನಿಸಿದಾಗ ಬಂದ ಉತ್ತರಗಳಿವು. ವಾಸ್ತವದಲ್ಲಿ ಅವನ ಉತ್ತರದಲ್ಲಿ ಸತ್ಯತೆ ಇರುವುದಾದರೂ ಅವನತನವನ್ನೇ, ನಿಜವಾದ ವ್ಯಕ್ತಿತ್ವವನ್ನೇ ಕಳೆದುಕೊಂಡು ಬದುಕುತ್ತಿರುವುದನ್ನು ನೋಡಿ ಬೇಸರವಾಯಿತು.

ಇದು ಒಬ್ಬಿಬ್ಬರ ಕಥೆ ಅಲ್ಲ, ಬಹುತೇಕ ಇಂದಿನ ಜನರಲ್ಲಿ ಸಾಮಾನ್ಯವಾಗಿ ಬದಲಾಗುತ್ತಲಿರುವ ಮನೋಭಾವವಿದು ಎಂದು ಹೇಳಲು ಸಾಧ್ಯವಿದೆ.ನನ್ನ ತೇಜೋವಧೆ ಮಾಡಿದರು, ನಿಂದಿಸಿದರು, ಹೀಯ್ಯಾಳಿಸಿದರು. ಹಾಗಾಗಿ ನಾನು ಕೂಡ ಅವರಿಗೆ ಅದನ್ನೇ ಮಾಡುವೆ... ಕಾರಣವಿಲ್ಲದೆ ದ್ವೇಷವನ್ನು ಮಾಡುತ್ತಾರೆ, ಹಾಗಾಗಿ ನಾನು ಕೂಡ ಅವರ ಮೇಲೆ ದ್ವೇಷವನ್ನು ಮಾಡುತ್ತೇನೆ... ಈ ಬಗ್ಗೆ ಮಾತುಗಳನ್ನು ಕೇಳಿದಾಗ ನಗುವುದೋ? ಅಳುವುದೋ! ಎಂದು ತಿಳಿಯಲಾರದೆ ಪರಿತಪಿಸಿರುವೆ.

ಸಮಾಜ ಕನ್ನಡಿ ಇದ್ದ ಹಾಗೆ. ನಾವು ಏನನ್ನು ನೀಡುತ್ತೇವೋ ಅದೇ ನಮಗೆ ಮರಳಿ ಬರುತ್ತದೆ ಎಂಬುದು ನಿಜ. ಆದರೆ ಕೆಲವೊಮ್ಮೆ ಈ ರೀತಿ ನಡೆಯದೆ ವ್ಯತಿರಿಕ್ತವಾದ ಸನ್ನಿವೇಶಗಳು ಜರುಗುವುದುಂಟು. ಗೆಳೆಯನೊಬ್ಬ ಹೇಳಿದ ಅವನ ಬದುಕಿನಲ್ಲಿ ನಡೆದ ಘಟನೆ, ಅವನ ಮನೋಧರ್ಮ ಇಷ್ಟವಾಯಿತು.

ಘಟನೆ: ನೋಡು ಗೆಳೆಯ ಇತ್ತೀಚಿಗೆ ಸಂಸ್ಥೆಯೊಂದರಿಂದ ಪ್ರಶಸ್ತಿಗೆ ಆಯ್ಕೆಯಾಗಿದ್ದೆ. ಪ್ರಶಸ್ತಿಯ ಸಮಾರಂಭ ಹತ್ತಿರವಿದ್ದಾಗ ತಿಳಿಸಿದರಾಯಿತೆಂದು ಗೌಪ್ಯತೆಯನ್ನು ಕಾಪಾಡಿಕೊಂಡಿದ್ದೆ. ಪ್ರಶಸ್ತಿಗೆ ಆಯ್ಕೆಯಾಗಿರುವೆ ಎಂಬುದನ್ನು ತಿಳಿದ ಆತ್ಮೀಯರೊಬ್ಬರು ಕರೆ ಮಾಡಿ ಆಹ್ವಾನ ಪತ್ರಿಕೆಯಲ್ಲಿರುವ ಹೆಸರು ನನ್ನದೇ ಎಂಬುದನ್ನು ನನ್ನಿಂದಲೇ ಖಾತ್ರಿ ಪಡಿಸಿಕೊಂಡರು. ನನ್ನ ನಿರೀಕ್ಷೆ ಅವರು ನನಗೆ ಶುಭಾಶಯ ತಿಳಿಸಲೆಂದು ಕರೆ ಮಾಡಿದ್ದಾರೆ ಎಂದು ಭಾವಿಸಿದ್ದೆ. ಆದರೆ ಪತ್ರಿಕೆಯಲ್ಲಿರುವ ಹೆಸರು ನನ್ನದೇ ಎಂದು ತಿಳಿದ ನಂತರ ಆ ಆತ್ಮೀಯರ ಮಾತಿನ ವರಸೆ ಬದಲಾಯಿತು. ಕೆಲಸ ಮಾಡುವವರು ಮಾಡುತ್ತಲೇ ಇರುತ್ತಾರೆ, ಅವರನ್ನು ಯಾರು ಗುರುತಿಸುವುದಿಲ್ಲ. ಕವಿಗಳೇ ಹೇಳಿಲ್ಲವೇ ಹಾಡುವ ಹಕ್ಕಿಗೆ ಬೇಕೆ ಬಿರುದು ಸನ್ಮಾನ ಎಂದು?! ಕೆಲವರಿಗೆ ಜಾತಿ-ಧರ್ಮಗಳ ಹಿನ್ನೆಲೆಯಲ್ಲಿ ಪ್ರಶಸ್ತಿಗಳು ಹುಡುಕಿಕೊಂಡು ಬರುತ್ತದೆ. ಇರಲಿ ಬಿಡಿ... ಎಂದು ಹೇಳಿ ಕರೆಯನ್ನು ಸ್ಥಗಿತಗೊಳಿಸಿದರು.

ನನಗೆ ತಕ್ಷಣವೇ ಅವರ ಮಾತನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂಬುದೇ ತಿಳಿಯದೇ ಗೊಂದಲಕ್ಕೆ ಒಳಗಾದೆ. ವಯಸ್ಸಿನ ಕಾರಣವೋ! ಅನುಭವದ ಕೊರತೆಯೋ ತಕ್ಷಣವೇ ಅವರ ಸಂಚಾರಿ ದೂರವಾಣಿಗೆ ನನ್ನ ಬರಹಗಳು, ಪ್ರಶಸ್ತಿಗಳು, ಪಡೆದ ಪ್ರಮಾಣಪತ್ರಗಳ ವಿವರಗಳ ದಾಖಲೆಗಳನ್ನೆಲ್ಲ ಒಂದನ್ನೂ ಬಿಡದೆ ಕಳಿಸಿದೆ. ಕ್ಷಣಿಕ ಕೋಪದ ಹಿಡಿತಕ್ಕೆ ಶರಣಾಗಿ ಮೂರ್ಖನಂತೆ ವರ್ತಿಸಿದ್ದ ನನಗೆ ನಿಧಾನವಾಗಿ ಆಲೋಚಿಸುವ ಬುದ್ಧಿ ಬಂದಿತು. ಆತ್ಮೀಯರು, ಹಿರಿಯರು, ಅನುಭವ ಉಳ್ಳವರು ಯಾವುದೋ ಉದ್ವೇಗದಲ್ಲಿಯೋ ಅಥವಾ ಅವರ ಪ್ರತಿಭೆಗೆ ತಕ್ಕ ಮನ್ನಣೆ ಸಿಗಲಿಲ್ಲವೋ ಎಂಬ ಕಾರಣದಿಂದ ನನ್ನ ಬಗ್ಗೆ ಮಾತಾಡಿದರು ಎಂದು ನಾನು ಅವರಂತೆಯೇ ಆಗುವುದು ಸರಿಯೇ? ತಕ್ಷಣವೇ ಅವರಿಗೆ ಕಳಿಸಿದ್ದ ಎಲ್ಲ ಮಾಹಿತಿಗಳನ್ನು ಅಳಿಸಿ ಹಾಕಿದೆ (ಏನು ಕಳಿಸಿದ್ರಿ? ಯಾಕೆ ಅಳಿಸಿ ಹಾಕಿದಿರಿ ಎಂದೇನು ಅವರು ಕೇಳಲಿಲ್ಲ! ಆ ಮಾತು ಬೇರೆ). ಆದರೆ ಒಂದು ಕ್ಷಣ ನನ್ನತನವ ಕಳೆದುಕೊಂಡು ಅವರಂತೆ ನಾನಾಗಬೇಕೆಂದು ಬಯಸಿದ್ದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಕಾಡಿದ್ದು ಸುಳ್ಳಲ್ಲ.



ಗೆಳೆಯನ ಈ ಅನುಭವದ ಮಾತುಗಳು ನನ್ನನ್ನು ಆಲೋಚನಾಪರನಾಗಿಸಿದವು. ಎಷ್ಟು ಸತ್ಯವಲ್ಲವೇ? ನಾವು ನಮ್ಮತನವ ಕಳೆದುಕೊಂಡು ಉಳಿದವರು ಮಾಡಿದಂತೆ ನಾವು ಮಾಡ ಹೊರಟರೆ ನಮಗೂ ಉಳಿದವರಿಗೂ ಏನು ವ್ಯತ್ಯಾಸ ಉಳಿಯಬಲ್ಲದು?!

ಕೆಲವೊಮ್ಮೆ ಜೀವನದಲ್ಲಿ ಇಂತಹ ಪ್ರಸಂಗಗಳು ಬೇರೆ, ಬೇರೆ ರೂಪ, ಸ್ವರೂಪವನ್ನು ಹೊತ್ತುಕೊಂಡು ಬರುವುದು ಸಹಜ. ತಾಳ್ಮೆ, ಸಹನೆ ನಮದಾಗಲಿಲ್ಲವಾದರೆ ಅವು ನಮ್ಮನ್ನು ತಮ್ಮ ಕೂಪದಲ್ಲಿ ಬೀಳುವಂತೆ ಮಾಡುತ್ತವೆ.

ಕಳೆದು ಹೋಗದಿರಲಿ ನಮ್ಮತನ: ಅವರು ನಮಗೆ ಕೋಪ ಬರುವಂತೆ ಮಾಡಿದರು ಅಥವಾ ಇನ್ಯಾವುದೋ ಬಗೆಯಲ್ಲಿ ತೊಂದರೆ ಕೊಟ್ಟರೆಂದು ನಾವು ಅವರಂತೆ ಮಾಡಲು ಹೊರಟರೆ ನಮಗೂ ಅವರಿಗೂ ವ್ಯತ್ಯಾಸ ಉಳಿಯುವುದೇನು? ವಿಷವನ್ನು ಕಾರಿದರೆಂದು ನಾವೂ ವಿಷವನ್ನೇ ಕಾರಿದರೇನು ಬಂತು ಪ್ರಯೋಜನ! ಅವರಂತೆ ನಾವು ಆಗದಿರೋಣ, ನಮ್ಮತನವ ಕಳೆದುಕೊಳ್ಳದಿರೋಣ. ಅದಕ್ಕೆ ಬಸವಣ್ಣನವರ ಈ ವಚನ ಸಾಕ್ಷಿ.

ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು ಅವರಿಗಾದ ಚೇಗೇನು
ತನುವಿನ ಕೋಪ ತನ್ನ ಹಿರಿಯತನದ ಕೇಡು.
ಮನದ ಕೋಪ ತನ್ನ ಅರಿವಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮದೇವಾ

ಯಾರಾದರೂ ನಮ್ಮ ಮೇಲೆ ವಿನಾಕಾರಣ ಕೋಪ ಮಾಡಿಕೊಂಡಾಗ ನಾವು ಅವರಿಗಿಂತ ಹೆಚ್ಚಾಗಿ ಕೋಪವನ್ನು ಮಾಡಿಕೊಂಡರೆ ಅದರ ಪರಿಣಾಮ ಮೊದಲಿಗೆ ಆಗುವುದು ನಮ್ಮ ಮೇಲೆಯೇ ಹೊರತು ಅವರ ಮೇಲಲ್ಲ ಎಂಬಂತಹ ಸೂಕ್ಷ್ಮ ವಿಷಯವನ್ನು ಈ ವಚನ ತಿಳಿಸುತ್ತದೆ.

ಕೋಪವನ್ನು ಮಾಡಿಕೊಳ್ಳುವುದರಿಂದ ತಮಗಾಗುವ ನಷ್ಟ ಏನು ಎಂಬ ಪ್ರಶ್ನೆ ಮೊದಲಿಗೆ ಬರುತ್ತದೆ. ನಮ್ಮ ಹಿರಿತನಕ್ಕೆ ಕೇಡು. ತಾನು ವಿಷವನ್ನು ಕುಡಿದು ಮತ್ತೊಬ್ಬರು ಸಾಯಲಿ ಎಂದು ಅಪೇಕ್ಷಿಸುವ ಹಾಗೆ ಕೋಪ ಎಂಬುದು ಮನುಷ್ಯನ ಸಹಜವಾದ ಶಕ್ತಿಯನ್ನು ಕುಗ್ಗಿಸುವ ಕೆಲಸವನ್ನು ಮಾಡುತ್ತದೆ. ಬಸವಣ್ಣ ಇದನ್ನು 'ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು ಕೂಡಲ ಸಂಗಮದೇವಾ...' ಎನ್ನುವ ಮೂಲಕ ಕೋಪ ಎಂಬ ಆಯುಧಕ್ಕೆ ಮೊದಲು ಬಲಿಯಾಗುವುದು ನಾವೇ ಹೊರತು ಉಳಿದವರಲ್ಲ ಎಂಬಂತಹ ವಿಚಾರವನ್ನು ತಿಳಿಸಿದ್ದಾರೆ.

ಮೌನ ಅನೇಕ ಸಮಸ್ಯೆಗಳಿಗೆ ಪರಿಹಾರ : ನಮ್ಮನ್ನು ಅರ್ಥಮಾಡಿಕೊಂಡವರಿಗೆ ನಾವು ಏನು ಎಂದು ತಿಳಿಸುವ ಅಗತ್ಯವಿಲ್ಲ, ಅರ್ಥಮಾಡಿ ಕೊಳ್ಳದವರಿಗೆ ನಾವು ಏನು ಎಂದು ತಿಳಿಸಿದರೂ ಪ್ರಯೋಜನವಿಲ್ಲ. ಪರಿಸ್ಥಿತಿ ಹೀಗಿರುವಾಗ ಸುಮ್ಮನೆ ವಿತಂಡವಾದದಿಂದಾಗಲೀ, ಅನವಶ್ಯಕ ಚರ್ಚೆಗಳಿಂದಾಗಲೀ ಉಪಯೋಗವಾಗಲಾರದು. ಹಾಗಾಗಿ ಯಾರೋ ಏನೋ ನಮ್ಮ ಬಗ್ಗೆ ಇಲ್ಲ ಸಲ್ಲದ್ದನ್ನು ಅಥವಾ ನಾವಲ್ಲದ್ದನ್ನು ಹೇಳಿದರೆಂದು ಅದಕ್ಕೆ ಪ್ರತಿಕ್ರಿಯಿಸುವ ಬದಲು ಅದನ್ನು ಮೌನದಿಂದ ನಿರ್ಲಕ್ಷ್ಯ ಮಾಡಿ ಮುಂದೆ ಸಾಗೋಣ. ನಮಗೆ ಕೊಡಬೇಕಾದ ಎಲ್ಲ ಪ್ರಮಾಣಪತ್ರಗಳನ್ನು ಶಾಲೆ, ಕಾಲೇಜು, ವಿಶ್ವ ವಿದ್ಯಾನಿಲಯಗಳು ಕೊಟ್ಟಿರುವಾಗ ಯಾರೋ ಮೂರನೇ ವ್ಯಕ್ತಿ, ಕೆಲಸಕ್ಕೆ ಬಾರದ ಮಾತನ್ನಾಡಿದರೆ ಅದಕ್ಕೆ ತಲೆಕೆಡಿಸಿಕೊಂಡು ಮನಸ್ಥಿತಿ ಹಾಳು ಮಾಡಿಕೊಂಡು ನಮ್ಮತನವ ಕಳೆದುಕೊಳ್ಳುವ ಅಗತ್ಯವಿಲ್ಲ. ಮಾತಿಗಿಂತ ಮೌನ ಹೆಚ್ಚು ಪ್ರಭಾವಶಾಲಿಯಾದುದು, ಪರಿಣಾಮಕಾರಿಯಾದುದು. ಮೌನವಾಗಿದ್ದಷ್ಟು ಸಮರ್ಥರಾಗಿ ಬದುಕಬಹುದು. ಎಲ್ಲ ಕ್ರಿಯೆಗಳಿಗೂ ಪ್ರತಿಕ್ರಿಯಿಸುವ ಅಗತ್ಯವಿಲ್ಲ.

> “ ಮನುಷ್ಯ ಸಂಘಜೀವಿ. ಪರಸ್ಪರ ಸಹಾಯವನ್ನು ಮಾಡುವ ಮೂಲಕ ಒಬ್ಬರಿಗೊಬ್ಬರು ನೆರವಾಗುತ್ತಾ ಸಂಬಂಧಗಳನ್ನು ಬೆಳೆಸಿಕೊಳ್ಳುವ ಪರಿಪಾಠ ಮಾನವನಿಗಿದೆ. ಇಂತಹ ಸಂಬಂಧಗಳು ಗಟ್ಟಿಯಾಗಿ ನೆಲೆ ನಿಲ್ಲಬೇಕಾದರೆ ಹೊಂದಾಣಿಕೆ ಅಗತ್ಯವಾದುದು. ಒಮ್ಮೆ ದುಡುಕಿ ಮಾತನಾಡಿದರೆ ಸಂಬಂಧಗಳ ಮೌಲ್ಯ ಕುಸಿದು ಬಿರುಕು ಉಂಟಾಗಬಹುದು. ಆದ್ದರಿಂದ ಸಂಬಂಧಗಳನ್ನು ಉಳಿಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಉಳಿಯಲಾಗದು ಎಂದರೆ ಅಂತಹ ಸಂಬಂಧಗಳಿಂದ ಅಂತರ ಕಳೆದುಕೊಳ್ಳುವುದು ಉತ್ತಮ.

ಮನಸ್ಥಿತಿ ಹದಗೆಡುತ್ತದೆ: ಬೇಡದ ವಿಚಾರಗಳಿಗೆ ತಲೆಕೆಡಿಸಿಕೊಂಡಷ್ಟು ಮನಸ್ಥಿತಿ ಹದಗೆಟ್ಟು ಇಲ್ಲ ಸಲ್ಲದ ಆಲೋಚನೆಗಳು ಉಂಟಾಗುತ್ತವೆ. ಒಂದು ಕ್ಷಣದ ಕೋಪ ಆ ದಿನದ ಸುಮಧುರ ಗಳಿಗೆಯನ್ನು ನಾಶ ಮಾಡುತ್ತದೆ. 'ಚಿತೆ ಹೆಣವನ್ನು ಸುಟ್ಟರೆ ಚಿಂತೆ ಮನುಷ್ಯನನ್ನು ಸುಡುತ್ತದೆ' ಎಂಬ ಮಾತಿನಂತೆ ಮನಸ್ಥಿತಿಗಳು ಹದಗೆಟ್ಟು ಮನೆಯ, ಮನದ ಪರಿಸ್ಥಿತಿಯು ಹಾಳಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಇಲ್ಲಸಲ್ಲದ ನುಡಿಗಳನ್ನಾಡುವ ಜನರಿಂದ ದೂರವಿರಬೇಕಾಗುತ್ತದೆ.

ಆಲೋಚನಾ ಶಕ್ತಿಯನ್ನು ಕುಗ್ಗಿಸುತ್ತದೆ: ಇತರರಂತೆ ನಾವಾಗುತ್ತೇವೆ ಎಂದು ಹೊರಟರೆ ನಾವು ಏನನ್ನು ಮಾತನಾಡುತ್ತೇವೆ ಎಂಬಂತಹ ಅರಿವು ನಮಗಿರುವುದಿಲ್ಲ. ಮನಸ್ಥಿತಿ ಹಾಳಾಗಿ, ಕೋಪ ಅತಿಯಾಗಿ ಸ್ವಂತ ವಾಗಿ ಆಲೋಚಿಸುವ, ಪರಿಸ್ಥಿತಿಯನ್ನು ನಿಯಂತ್ರಿಸುವ ಆಲೋಚನಾ ಶಕ್ತಿ ಕುಗ್ಗುತ್ತದೆ. ಏನು ಮಾಡಬೇಕು ಮಾಡಬಾರದು ಎಂಬಂತಹ ತಿಳುವಳಿಕೆಯು ಇಲ್ಲದಂತೆ ಸಂಪೂರ್ಣವಾಗಿ ಕೋಪದ ಕೆನ್ನಾಲಿಗೆಗೆ ನಾವು ಬೀಳಬೇಕಾಗುತ್ತದೆ. ಆದ್ದರಿಂದ ಆ ಕ್ಷಣದ ಕೋಪವನ್ನು ನಿಯಂತ್ರಿಸಿಕೊಳ್ಳುವುದು ಒಳಿತಾಗಿರುತ್ತದೆ.

ಕೆ.ಸಿ.ಶಿವಪ್ಪ ಅವರು ತಮ್ಮ ಮುದ್ದುರಾಮನ ಕೃತಿಯ ಒಂದು ಮುಕ್ತಕದಲ್ಲಿ ಕೋಪವನ್ನು ನಿಯಂತ್ರಿಸುವ ಬಗೆ, ತಾಳ್ಮೆಯನ್ನು ತಂದುಕೊಳ್ಳುವ ಅಗತ್ಯವನ್ನು ತಿಳಿಸಿದ್ದಾರೆ.

ಒಳಮನದ ಹರವಿಂದ ಎಸೆ ಕೋಪ ಬೀಜವನು,
ರುದ್ರಭಾವನೆ ಇನಿತು ಇರದು ಮೊಗದಲ್ಲಿ.
ಯಾರ ಕುರಿತೇನೊಂದ ಬಿರುನುಡಿಯನಾಡದಿರು,
ತಾಳ್ಮೆ ಬಲು ಸಹಕಾರಿ–ಮುದ್ದುರಾಮ

ಕೋಪದ ಬೀಜವನ್ನು ಎಸೆದರೆ ಮೊಗದಲ್ಲಿ ಕೋಪದ ಭಾವನೆ ಇರಲಾರದು, ಯಾರ ಬಗ್ಗೆಯೂ ಬಿರುಸಾದ ನುಡಿಯನ್ನು ಆಡದಿರು, ತಾಳ್ಮೆ ಬಲು ಸಹಕಾರಿಯಾಗಿರುತ್ತದೆ ಎನ್ನುವ ಮೂಲಕ ಅನಗತ್ಯ ವಿಚಾರಗಳಿಗೆ ಕೋಪ ಮಾಡಿಕೊಳ್ಳುವ ಅಗತ್ಯವಿಲ್ಲವೆಂದು ತಿಳಿಸುವಂತಿದೆ ಈ ಮುಕ್ತಕ.

ಸಂಬಂಧಗಳಲ್ಲಿ ಬಿರುಕು: ಮನುಷ್ಯ ಸಂಘ ಜೀವಿ. ಪರಸ್ಪರ ಸಹಾಯವನ್ನು ಮಾಡುವ ಮೂಲಕ ಒಬ್ಬರಿಗೊಬ್ಬರು ನೆರವಾಗುತ್ತಾ ಸಂಬಂಧಗಳನ್ನು ಬೆಳೆಸಿಕೊಳ್ಳುವ ಪರಿಪಾಠ ಮಾನವನಿಗಿದೆ. ಇಂತಹ ಸಂಬಂಧಗಳು ಗಟ್ಟಿಯಾಗಿ ನೆಲೆ ನಿಲ್ಲಬೇಕಾದರೆ ಹೊಂದಾಣಿಕೆ ಅಗತ್ಯವಾದುದು. ಒಮ್ಮೆ ದುಡುಕಿ ಮಾತನಾಡಿದರೆ ಸಂಬಂಧಗಳ ಮೌಲ್ಯ ಕುಸಿದು ಬಿರುಕು ಉಂಟಾಗಬಹುದು. ಆದ್ದರಿಂದ ಸಂಬಂಧಗಳನ್ನು ಉಳಿಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಉಳಿಯಲಾಗದು ಎಂದರೆ ಅಂತಹ ಸಂಬಂಧಗಳಿಂದ ಅಂತರ ಕಳೆದು ಕೊಳ್ಳುವುದು ಉತ್ತಮ.

ಆತ್ಮವಿಶ್ವಾಸದ ಕೊರತೆ ಉಂಟಾಗಬಹುದು: ನಮ್ಮತನವ ಕಳೆದುಕೊಂಡು ಕೋಪಿಸಿಕೊಳ್ಳುವುದರಿಂದ ನಮ್ಮ ಮೇಲೆ ನಮಗೆ ಆತ್ಮವಿಶ್ವಾಸದ ಕೊರತೆ ಉಂಟಾಗಬಹುದು. ಏಕೆಂದರೆ ಕಾರಣ ಇದ್ದು ಅಥವಾ ಕೆಲವೊಮ್ಮೆ ಕಾರಣವಿಲ್ಲದೆ ಕೋಪವನ್ನು ಮಾಡಿಕೊಳ್ಳುವುದರಿಂದ ಮನಶಾಂತಿ ಇಲ್ಲದೆ ಸ್ವತಂತ್ರವಾಗಿ ಆಲೋಚಿಸುವ ಶಕ್ತಿಗಳು ಮಾಯವಾಗಿ ನಮ್ಮ ಮೇಲೆ ನಮಗೆ ಕೀಳರಿಮೆ ಉಂಟಾಗಬಹುದು. ಆತ್ಮವಿಶ್ವಾಸ ಕುಗ್ಗಬಹುದು. ಆದ್ದರಿಂದ ಕೋಪವನ್ನು ಸಾಧ್ಯವಾದಷ್ಟು ನಿಯಂತ್ರಿಸಿಕೊಳ್ಳುವ ಅಗತ್ಯವಿದೆ.

ಮನುಷ್ಯನ ಮನಸ್ಸು ಕೋತಿ ಇದ್ದ ಹಾಗೆ, ಅದು ಹೇಳಿದಂತೆ ನಾವು ನಡೆಯುತ್ತಾ ಹೋದರೆ ಅದು ತನ್ನಿಷ್ಟದಂತೆ ನಮ್ಮನ್ನು ಕುಣಿಸುತ್ತದೆ. ಯಾರೋ ಏನೋ ಹೇಳಿದರೆಂದು ನಾವು ಅದರಂತೆ, ಅವರಂತೆ ಆಗಲಾರೆವು.ನಮ್ಮತನವ ಕಳೆದುಕೊಂಡು ಇತರರಂತೆ ಆಗುವುದರ ಅಗತ್ಯವು ಬರಲಾರದು. ನಾವು ನಮ್ಮಂತೆ, ನಮಗಾಗಿ ನಾವು ಇರುವುದನ್ನು ರೂಢಿಸಿಕೊಳ್ಳೋಣ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಎಸ್.ಎಂ.ಕೃಷ್ಣರಿಗೆ ನುಡಿನಮನ

ಪತ್ರಕರ್ತರಿಗೆ ನೆಲೆ ಕಲ್ಪಿಸಿದ ಶ್ರೀಯುತರ ಸ್ಮರಣೆ

ಮೈಸೂರು,ಡಿ.16(ಎಂಟಿವೈ)- ಇತ್ತೀಚೆಗೆ ನಿಧನರಾದ ಮಾಜಿ ಮುಖ್ಯಮಂತ್ರಿ, ರಾಜಕೀಯ ಮುತ್ಸದ್ದಿ ಎಸ್.ಎಂ. ಕೃಷ್ಣ ಅವರಿಗೆ ಇಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನುಡಿ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಪತ್ರಕರ್ತರು ಹಾಗೂ ಎಸ್.ಎಂ.ಕೃಷ್ಣ ಅವರ ಒಡನಾಡಿಗಳು ಪುಷ್ಪನಮನ ಸಲ್ಲಿಸಿ, ಗೌರವ ಸಮರ್ಪಿಸಿದರು. ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಮಾಜಿ ಸಿಎಂ ಎಸ್.ಎಂ.ಕೃಷ್ಣ ದೂರದೃಷ್ಟಿ ಹೊಂದಿದ್ದ ರಾಜಕಾರಣಿಯಾಗಿದ್ದರು. ಅದರ ಫಲವಾಗಿ ಇಂದು ಬೆಂಗಳೂರು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ರಾಜ್ಯ ರಾಜಧಾನಿ ಅಭಿವೃದ್ಧಿಗಾಗಿ ಅವರು 30 ವರ್ಷದ ವಿಷನ್ ಇಟ್ಟುಕೊಂಡಿದ್ದರು. ಬೆಂಗಳೂರು ಅಭಿವೃದ್ಧಿಗಾಗಿ 'ಬೆಂಗಳೂರು ಅಜೆಂಡಾ ಟಾಸ್ಕ್‌ಫೋರ್ಸ್(ಬಿಎಟಿಎಫ್)' ಸ್ಥಾಪಿಸಿದ್ದರು. ಮೈಸೂರಿನ ಬಗ್ಗೆ ಬಹಳ ಪ್ರೀತಿ ಹೊಂದಿದ್ದ ಎಸ್.ಎಂ.ಕೃಷ್ಣ ಅವರು ಬೆಂಗಳೂರಿನ ಅಭಿವೃದ್ಧಿಗಾಗಿ ಸ್ಥಾಪಿಸಿದ ಬಿಎಟಿಎಫ್ ಮಾದರಿಯಲ್ಲಿ ಎಂಎಟಿಎಫ್ (ಮೈಸೂರು ಅಜೆಂಡಾ ಟಾಸ್ಕ್ ಫೋರ್ಸ್) ಸ್ಥಾಪಿಸಿದ್ದರು. ಆದರೆ ಧರಂಸಿಂಗ್ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಎಂಎಟಿಎಫ್ ರದ್ದಾಯಿತು ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಕಾಂಗ್ರೆಸ್ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ನಾನು ಇಂದು ಸಾರ್ವಜನಿಕ ಜೀವನದಲ್ಲಿ ಇರಲು ಕೃಷ್ಣ ಅವರೇ ಕಾರಣ. ಅವರ ಅಂದಿನ ಎಲ್ಲಾ ಚುನಾವಣೆಗಳಲ್ಲಿ ಪ್ರಚಾರ ಮಾಡಲು ಹೋಗುತ್ತಿದ್ದರಿಂದ ನಾನೂ ರಾಜಕೀಯವಾಗಿ ಗುರುತಿಸಿಕೊಳ್ಳಲು ಸಹಕಾರಿಯಾಯಿತು. ಅವರು ಸಜ್ಜನಿಕೆ ರಾಜಕಾರಣಿ. ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಬಹಳ ಹಿಡಿತ ಹೊಂದಿದ್ದ ಅವರು, ಮಾತನಾಡುವಾಗಲೂ ಪ್ರಬುದ್ಧತೆ ಪ್ರದರ್ಶಿಸುತ್ತಿದ್ದರು. ಸಚಿವರಿಗೂ ಅದೇ ಮಾರ್ಗದರ್ಶನವಿತ್ತು ಎಂದರು.

ಮೈಸೂರಿನ ಬಗ್ಗೆ ವಿಶೇಷ ಗೌರವ ಹೊಂದಿದ್ದ ಅವರು, ನನ್ನ ಮದುವೆಯ ಕಾರಣದಿಂದ ವಿದೇಶಕ್ಕೆ ಹೋಗುವ ಕಾರ್ಯಕ್ರಮವನ್ನೇ ರದ್ದು ಮಾಡಿ ಆಗಮಿಸಿ ಆಶೀರ್ವಾದ ಮಾಡಿದ್ದರು ಎಂದು ಸ್ಮರಿಸಿಕೊಂಡರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಪತ್ರಕರ್ತರ ಭವನದಲ್ಲಿ ಯಾವುದೇ ರಾಜಕೀಯ ವ್ಯಕ್ತಿಗಳ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸುವುದಿಲ್ಲ. ಎಸ್.ಎಂ.ಕೃಷ್ಣ ಅವರು ಸಾರ್ವಜನಿಕರಿಗೆ ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ರಾಜ್ಯಪಾಲರಾಗಿ, ವಿದೇಶಾಂಗ ಸಚಿವರಾಗಿ ಪರಿಚಯವಾಗಿದ್ದಾರೆ. ಆದರೆ, ಅವರು ರಾಜಕೀಯಕ್ಕೆ ಬರುವ ಮುನ್ನ ಪತ್ರಕರ್ತರೂ ಆಗಿದ್ದರು ಎಂದರು.

ಮೈಸೂರಿನಲ್ಲಿ ವಿಜಯ ಪತ್ರಿಕೆಗೆ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದರು. ಕೃಷ್ಣ ಅವರು ಪತ್ರಕರ್ತರೊಡನೆ ಉತ್ತಮ ಬಾಂಧವ್ಯ ಹೊಂದಿದ್ದರು. ಅವರಿಗೆ ಪತ್ರಕರ್ತರ ಕಷ್ಟಗಳ ಬಗ್ಗೆ ಅರಿವಿತ್ತು. ಹೀಗಾಗಿ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಪತ್ರಕರ್ತರಿಗೆ ಕಡಿಮೆ ದರದಲ್ಲಿ ನಿವೇಶನ ನೀಡಿ ಒಂದು ನೆಲೆ ಕಂಡುಕೊಳ್ಳಲು ನೆರವಾದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಕೀಲ ಅರವಿಂದ್, ಎಸ್.ಎಂ.ಕೃಷ್ಣ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಇತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಕ್ರೈಂ ಬಾಕ್ಸ್

ಮೂವರು ಮಹಿಳೆಯರು ಸೇರಿ 7 ಮಂದಿ ಖದೀಮರ ಸೆರೆ

11 ಲಕ್ಷ ರೂ. ಮೌಲ್ಯದ ತಾಮ್ರದ ವೈರ್ ಜಪ್ತಿ



ಕಳವು ಮಾಡಿದ್ದ ತಾಮ್ರದ ವೈರ್‌ಗಳು ಸೇರಿದಂತೆ ಕಾರನ್ನು ವಶಕ್ಕೆ ಪಡೆದಿರುವ ಮೈಸೂರಿನ ವಿಜಯನಗರ ಠಾಣೆ ಪೊಲೀಸರು.

ಮೈಸೂರು,ಡಿ.16(ಆರ್‌ಕೆ)– ಫ್ಯಾಕ್ಟರಿಯಲ್ಲಿ ತಾಮ್ರದ ವೈರ್‌ಗಳನ್ನು ಕಳವು ಮಾಡಿದ್ದ ಮೂವರು ಮಹಿಳೆಯರು ಸೇರಿ 7 ಮಂದಿ ಖದೀಮರನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಮನಗರದ ಮಧು, ಶ್ರೀನಿವಾಸ, ಅಬಿಉಲ್ಲಾ, ಮಂಡ್ಯದ ಪಾರ್ವತಿ, ಮೈಸೂರಿನ ಆದಿಲಕ್ಷ್ಮಿ, ರಾಮನಗರ ಆದಿಶಕ್ತಿಪುರದ ಎ.ಶೇಖರ ಬಂಧಿತ ಆರೋಪಿಗಳಾಗಿದ್ದು, ಅವರಿಂದ ಒಟ್ಟು 11 ಲಕ್ಷ ರೂ. ಮೌಲ್ಯದ ತಾಮ್ರದ ವೈರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

2024ರ ಅಕ್ಟೋಬರ್ 14ರಂದು ಹೂಟಗಳ್ಳಿಯ ಇಂಡಸ್ಟ್ರಿಯಲ್ ಏರಿಯಾದ ಮ್ಯಾಗ್ನಟಿಕ್ ಕಾರ್ಖಾನೆ ಕಿಟಕಿ ಗ್ರಿಲ್ ಕತ್ತರಿಸಿ, ನುಸುಳಿ ತಾಮ್ರದ ವೈರ್, ಲ್ಯಾಪ್‌ಟಾಪ್‌ಗಳನ್ನು ಕಳವು ಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ವಿಜಯನಗರ ಠಾಣೆ ಪೊಲೀಸರು, ಅಕ್ಟೋಬರ್ 26ರಂದು ಮಧು, ಶ್ರೀನಿವಾಸ ಮತ್ತು ಅಬಿಉಲ್ಲಾರನ್ನು ಮೈಸೂರಿನ ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾದಲ್ಲಿ ಬಂಧಿಸಿ, ಅವರಿಂದ 4 ಲಕ್ಷ ರೂ. ಮೌಲ್ಯದ ಟಾಟಾ ಸುಮೋ (ಕೆಎ 04, ಡಿ 3132)ವನ್ನು ವಶಕ್ಕೆ ಪಡೆದರು.

ಈ ಆರೋಪಿಗಳು ನೀಡಿದ ಸುಳಿವಿನ ಜಾಡು ಹಿಡಿದ ಪೊಲೀಸರು, ತಲೆಮರೆಸಿಕೊಂಡಿದ್ದ ಪಾರ್ವತಿ, ಕೆಂಪಮ್ಮ, ಆದಿಲಕ್ಷ್ಮಿ ಅವರನ್ನು ಅಕ್ಟೋಬರ್ 29ರಂದು ಕೆಸರೆ ಬಳಿ ಸೆರೆ ಹಿಡಿದಿದ್ದರು. ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಎ.ಶೇಖರ್‌ನನ್ನು ಡಿಸೆಂಬರ್ 14ರಂದು ಬಂಧಿಸಿ, 7 ಲಕ್ಷ ರೂ. ಬೆಲೆಬಾಳುವ 606 ಕೆಜಿ ತಾಮ್ರದ ವೈರ್ ಅನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಈ ಪ್ರಕರಣದಲ್ಲಿ ಒಟ್ಟು 11 ಲಕ್ಷ ರೂ. ಬೆಲೆಯ ಕಳವು ಮಾಲನ್ನು ತನಿಖಾ ತಂಡವು ವಶಪಡಿಸಿಕೊಂಡಂತಾಗಿದೆ.

ಡಿಸಿಪಿ ಎನ್.ಜಾಹ್ನವಿ ಮಾರ್ಗದರ್ಶನದಲ್ಲಿ ವಿಜಯನಗರ ಉಪವಿಭಾಗದ ಎಸಿಪಿ ಜಿ.ಎಸ್.ಗಜೇಂದ್ರ ಪ್ರಸಾದ್ ನಿರ್ದೇಶನದಂತೆ ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ಎಸ್.ಡಿ. ಸುರೇಶ್‌ಕುಮಾರ್ ನೇತೃತ್ವದಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಾದ ವಿಶ್ವನಾಥ್, ನಾರಾಯಣ, ಡಿ.ಕೃಷ್ಣ, ಸಿಬ್ಬಂದಿಗಳಾದ ಶಂಕರ್, ಹೆಚ್.ಕೆ.ಪ್ರದೀಪ್, ಬಿ.ಪರಮೇಶ್, ಕೆ.ಎನ್.ಲೋಕೇಶ್, ಹೆಚ್.ಎಸ್. ಲೋಕೇಶ್, ಕೆ.ಎನ್.ಮಂಜುನಾಥ, ಎನ್.ವೆಂಕಟೇಶ, ಎ.ಎಂ.ಪರಮೇಶ್, ಶಿವಕುಮಾರ್, ಪಪ್ಪು, ಪಿ.ಸಿ.ರಂಜಿತಾ, ಚಂದ್ರಶೇಖರ್, ಎಂ.ಪ್ರದೀಪ್, ಕುಮಾರ, ಮಂಜು, ಶ್ಯಾಂಸುಂದರ ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಸ್ಕೂಟರ್‌ಗೆ ಕಾರು ಡಿಕ್ಕಿ: ವ್ಯಕ್ತಿ ಸಾವು



ಗಣೇಶ್

ಮೈಸೂರು,ಡಿ.16(ಆರ್‌ಕೆ)–ರಿವರ್ಸ್ ತೆಗೆಯುತ್ತಿದ್ದ ಕಾರು ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸ್ಥಳದಲ್ಲೇ ಮೃತಪಟ್ಟ ಘಟನೆ ಇಂದು ಮುಂಜಾನೆ ಮೈಸೂರಿನ ಹೆಬ್ಬಾಳು, ಅಭಿಷೇಕ್ ಸರ್ಕಲ್‌ನಲ್ಲಿ ಸಂಭವಿಸಿದೆ. ಮೈಸೂರಿನ ಮಂಚೇಗೌಡನ ಕೊಪ್ಪಲು ನಿವಾಸಿ ಶ್ರೀಧರ ಅವರ ಮಗ ಗಣೇಶ್ (49) ಸಾವನ್ನಪ್ಪಿದವರು. ಎಂ.ಜಿ. ಕೊಪ್ಪಲಿನಲ್ಲಿ ಪ್ರಾವಿಷನ್ ಸ್ಟೋರ್ ನಡೆಸುತ್ತಿದ್ದ ಅವರು, ಹಾಲು ಮಾರಾಟವನ್ನೂ ಮಾಡುತ್ತಿದ್ದರು. ಮನೆ ಮನೆಗೆ ಹಾಲು ಹಾಕುತ್ತಿದ್ದ ಗಣೇಶ, ಸೂರ್ಯ ಬೇಕರಿ ಸರ್ಕಲ್‌ನಿಂದ ಅಭಿಷೇಕ್ ಸರ್ಕಲ್ ಕಡೆಗೆ ಜುಪಿಟರ್ ಸ್ಕೂಟರ್‌ನಲ್ಲಿ ಬರುತ್ತಿದ್ದಾಗ ಅಭಿಷೇಕ್ ಸರ್ಕಲ್‌ನಲ್ಲಿ ವೇಗವಾಗಿ ರಿವರ್ಸ್ ತೆಗೆಯುತ್ತಿದ್ದ ಕಾರು ಇವರ ಸ್ಕೂಟರ್‌ಗೆ ಮುಂಜಾನೆ 5.45ರಲ್ಲಿ ಡಿಕ್ಕಿ ಹೊಡೆದ ಪರಿಣಾಮ ಗಣೇಶ್ ಕೆಳಗೆ ಬಿದ್ದಿದ್ದಾರೆ. ಆಗ ಅವರ ತಲೆಗೆ ತೀವ್ರ ಗಾಯವಾಗಿ ಸ್ಥಳದಲ್ಲೇ ಸಾವನ್ನಪ್ಪಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿವಿಪುರಂ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಲವ, ಸಬ್‌ಇನ್‌ಸ್ಪೆಕ್ಟರ್ ಗೌತಮ್‌ಗೌಡ ಹಾಗೂ ಸಿಬ್ಬಂದಿ ಮಹಜರು ನಡೆಸಿದ ಬಳಿಕ ಗಣೇಶರ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ವಾಹನಗಳನ್ನು ವಶಕ್ಕೆ ಪಡೆದಿದ್ದು, ತನಿಖೆ ಕೈಗೊಂಡಿದ್ದಾರೆ.

ಮಕ್ಕಳನ್ನು ಬಯಸುತ್ತಿರುವ ದಂಪತಿಗೆ ಉಚಿತ ಸಂತಾನ ಶಿಬಿರ



ಸಂತಸ ಫರ್ಟಿಲಿಟಿ ಸಂಸ್ಥೆಯ 16ನೇ ವಾರ್ಷಿಕೋತ್ಸವ ಸಮಾರಂಭವನ್ನು ಮೈಸೂರು ಸ್ತ್ರೀ ಹಾಗೂ ಪ್ರಸೂತಿ ಸಂಘದ ಅಧ್ಯಕ್ಷರಾದ ಡಾ.ಸುನಂದಾ ಎನ್, ಡಾ.ಉಷಾ ಹೆಗ್ಡೆ ಮತ್ತು ಹಿರಿಯ ವೈದ್ಯರಾದ ಡಾ.ರಾಜಶೇಖರ್ ಎಚ್.ಬಿ. ಉದ್ಘಾಟಿಸಿದರು.

ಮೈಸೂರು, ಡಿ.16– ಸಂತಸ ಫರ್ಟಿಲಿಟಿ ಸಂಸ್ಥೆಯು ತನ್ನ 16ನೇ ವಾರ್ಷಿಕೋತ್ಸವದ ಅಂಗವಾಗಿ ಮಕ್ಕಳನ್ನು ಬಯಸುತ್ತಿರುವ ದಂಪತಿಗೆ ಏರ್ಪಡಿಸಿದ್ದ ಉಚಿತ ಸಂತಾನ ಶಿಬಿರವನ್ನು ಲಕ್ಷ್ಮೀಪುರಂನ ವೇದಾಂತ ಹೆಮ್ಮಿಗೆ ವೃತ್ತದ ಬಳಿ ಇರುವ ಸಂತಸ ಫರ್ಟಿಲಿಟಿ ಕೇಂದ್ರದಲ್ಲಿ ಮೈಸೂರು ಸ್ತ್ರೀ ಹಾಗೂ ಪ್ರಸೂತಿ ಸಂಘದ ಅಧ್ಯಕ್ಷೆ ಡಾ.ಸುನಂದಾ ಎನ್, ಡಾ.ಉಷಾ ಹೆಗ್ಡೆ ಮತ್ತು ಹಿರಿಯ ವೈದ್ಯರಾದ ಡಾ. ರಾಜಶೇಖರ್ ಎಚ್.ಬಿ. ಉದ್ಘಾಟಿಸಿದರು.

ಖ್ಯಾತ ಸಾಹಿತಿ ಡಾ.ಲತಾ ರಾಜಶೇಖರ್ ಅವರು ಸಂತಸ ಫರ್ಟಿಲಿಟಿ ಸಂಸ್ಥೆಯ ನೂತನ ಲಾಂಛನವನ್ನು ಬಿಡುಗಡೆ ಮಾಡಿದರು. ಇತ್ತೀಚಿನ ದಿನಗಳಲ್ಲಿ ಸಂತಾನ ಸಮಸ್ಯೆಗಳು ಏರುಗತಿಯಲ್ಲಿವೆ. ಬದಲಾಗುತ್ತಿರುವ ಜೀವನಶೈಲಿ, ನಾನಾ ರೀತಿಯ ಮಾಲಿನ್ಯ, ಹೆಚ್ಚಾಗುತ್ತಿರುವ ಆರೋಗ್ಯದ ತೊಂದರೆಗಳು ಮಕ್ಕಳಾಗುವ ಸಂಭವವನ್ನು ಕಡಿಮೆಯಾಗಿಸುತ್ತಿವೆ. ಈ ಕಾರಣಗಳನ್ನು ಕುರಿತು ಜನರಲ್ಲಿ ಅರಿವು ಮೂಡಿಸಬೇಕಿದೆ. ಸಮಾಜದಲ್ಲಿ ಸಂತಾನ ಬಯಸುತ್ತಿರುವ ದಂಪತಿಗಳಿಗೆ ಹೆಚ್ಚಿನ ಸಹಕಾರ, ಸಹಾನುಭೂತಿ ನೀಡಬೇಕಿದೆ. ಕಳೆದ 16 ವರ್ಷಗಳಿಂದಲೂ ಸಂತಸ ಸಂಸ್ಥೆಯು ನಿರಂತರವಾಗಿ ಉಚಿತ ಸಂತಾನ ಶಿಬಿರವನ್ನು ನಡೆಸಿಕೊಂಡು ಬರುತ್ತಿದ್ದು, ಇಲ್ಲಿಯವರೆಗೂ ಸುಮಾರು ಆರು ಸಾವಿರಕ್ಕೂ ಹೆಚ್ಚು ದಂಪತಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡಿದ್ದಾರೆ. ಸಂತಸ ಸಂಸ್ಥೆಯು ಕ್ಲಿಷ್ಟಕರ ಆರೋಗ್ಯ ಸಮಸ್ಯೆಯಿರುವ ದಂಪತಿಗೂ ಅವರ ತಾಯ್ತನದ ಕನಸನ್ನು ನನಸು ಮಾಡಲು ಸಹಕಾರಿಯಾಗಿದೆ ಎಂದು ಸಂಸ್ಥೆಯ ನಿರ್ದೇಶಕಿ ಡಾ. ಸೌಮ್ಯ ದಿನೇಶ್ ತಿಳಿಸಿದರು.

ಸಂತಸ ಸಂಸ್ಥೆಯಲ್ಲಿ ಅತ್ಯುನ್ನತ ಐ.ವಿ.ಎಫ್ ತಂತ್ರಜ್ಞಾನಗಳು ಹಾಗೂ ಎಂಡೊಸ್ಕೊಪಿಕ್ ಶಸ್ತ್ರಚಿಕಿತ್ಸೆ ಸೌಲಭ್ಯಗಳು ಲಭ್ಯವಿದೆ. ಸಂತಾನ ಸಮಸ್ಯೆಗಳಿಗೆ ಅತ್ಯಾಧುನಿಕ ಚಿಕಿತ್ಸೆಗಳಾದ ಸ್ಟೆಮ್ ಸೆಲ್ ಥೆರಪಿ, ಭ್ರೂಣಗಳ ಬಯಾಪ್ಸಿ, ಎಐ ಆಧಾರಿತ ವೀರ್ಯ ಪರೀಕ್ಷೆಯನ್ನು ಮೈಸೂರಿನಲ್ಲಿ ಪ್ರಥಮ ಬಾರಿಗೆ ಪರಿಚಯಿಸಿದ ಹೆಗ್ಗಳಿಕೆ ಸಂತಸ ಫರ್ಟಿಲಿಟಿ ಸಂಸ್ಥೆಯದ್ದು ಎಂದು ಸಂಸ್ಥೆಯ ನಿರ್ದೇಶಕಿ ಡಾ. ಯೋಗಿತಾ ರಾವ್ ತಿಳಿಸಿದರು. ಸಮಾರಂಭದಲ್ಲಿ ವಿಶೇಷ ಅತಿಥಿಗಳಾಗಿ ಡಾ. ಸಂಜಯ್ ಎಚ್.ಆರ್., ಡಾ.ವಿಭು ಧವನ್, ಡಾ.ಸೋನಿಯ ಎ.ಮಂದಪ್ಪ, ಡಾ.ಚಿಂತನ್ ಪಾಟ್ಕರ್, ಡಾ.ವನಿತ ಎಲ್.ವಿ., ಡಾ.ಸೀಮಾ ಹಾಗೂ ಇತರೆ ವೈದ್ಯರು ಉಪಸ್ಥಿತರಿದ್ದರು. ನೂರಕ್ಕೂ ಹೆಚ್ಚು ದಂಪತಿ ಈ ಶಿಬಿರದ ಉಪಯೋಗವನ್ನು ಪಡೆದರು.

ಕುವೆಂಪು ಕೃತಿಗಳು ಮನೋವಿಜ್ಞಾನ ವೈಶಿಷ್ಟ್ಯತೆವುಳ್ಳವು : ಪ್ರೊ. ಲೋಕನಾಥ್



ಕುವೆಂಪು ಜನ್ಮೋತ್ಸವ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿದರು.

ಮೈಸೂರು, ಡಿ.16(ಬಿಎಲ್‌ಯು)– ಮನೋವಿಜ್ಞಾನದ ವೈಶಿಷ್ಟ್ಯತೆ ಹಾಗೂ ಅಗತ್ಯತೆ ಬಗ್ಗೆ ರಾಷ್ಟ್ರಕವಿ ಕುವೆಂಪು ಬರೆದಿರುವ ಕೃತಿಗಳು ಇಂದಿಗೂ ಪ್ರಸ್ತುತ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ನಗರದ ಮಾನಸಗಂಗೋತ್ರಿಯ ಮನೋವಿಜ್ಞಾನ ಅಧ್ಯಯನ ವಿಭಾಗದಲ್ಲಿ ಕುವೆಂಪು ಜನ್ಮೋತ್ಸವ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತತ್ವಶಾಸ್ತ್ರ ಹಾಗೂ ಮನೋವಿಜ್ಞಾನದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದ ಕುವೆಂಪು, ಈ ಸಂಬಂಧ ಹಲವು ಕೃತಿ ರಚಿಸಿದ್ದಾರೆ. ಇದರಿಂದ ಕುವೆಂಪು ಅವರ ಸಾಹಿತ್ಯ ಘಟನೆಗಳಲ್ಲಿ ಆತ್ಮಸಾಕ್ಷಾತ್ಕಾರ ಮತ್ತು ಮನೋವಿಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳು ಕಂಡು ಬರುತ್ತವೆ ಎಂದರು.

ಇತ್ತೀಚಿನ ಒತ್ತಡದ ಜೀವನದ ನಡುವೆ ಹಲವರಲ್ಲಿ ಮನೋವಿಜ್ಞಾನ ಕಲಿಯುವ ಆಸಕ್ತಿ ಹೆಚ್ಚಾಗುತ್ತಿದೆ. ಇದರ ಮಹತ್ವವನ್ನು ಕುವೆಂಪು ಅವರು ಅಂದೆ ಮನದಟ್ಟು ಮಾಡಿದ್ದರು. ಇದು ಕುವೆಂಪು ಅವರಿಗಿದ್ದ ದೂರದೃಷ್ಟಿ ಚಿಂತನೆಗೆ ಸ್ಪಷ್ಟ ನಿದರ್ಶನ ಎಂದು ಪ್ರೊ.ಲೋಕನಾಥ್ ಅಭಿಪ್ರಾಯಪಟ್ಟರು.

ಮಾನವನ ಮನಸು ಹಾಗೂ ಪರಿಸರ ಎರಡೂ ಒಂದಾಗಬೇಕು ಎಂದು ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಪ್ರತಿಪಾದಿಸಿದ್ದಾರೆ. ಇದರಿಂದ ಜೀವನ ಸಂಘರ್ಷ ಕಡಿಮೆಯಾಗುತ್ತದೆ ಎಂಬುದು ಅವರ ಪ್ರತಿಪಾದನೆಯಾಗಿತ್ತು ಎಂದರು.

ಆದರೆ ಈಗ ಕುವೆಂಪು ಅವರ ಸಾಹಿತ್ಯದ ವಿಚಾರಗಳು ಪ್ರಸ್ತುತವಾಗುತ್ತಿವೆ. ನಗರ ಅಭಿವೃದ್ಧಿ ಕಾರಣಕ್ಕೆ ಜನರು ಪ್ರಾಣಿಗಳಿಗೆ ತೊಂದರೆ ನೀಡುತ್ತಿದ್ದಾರೆ. ಇದರಿಂದ ಸಹಜವಾಗಿಯೇ ಅಸಮತೋಲನ ಉಂಟಾಗಿದ್ದು, ಮಾನವ ಮತ್ತು ಪ್ರಾಣಿಗಳ ಸಂಘರ್ಷ ಎಲ್ಲೆ ಮೀರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೊಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ದೇಶದ ಮೊದಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2ನೇ ಮನೋವಿಜ್ಞಾನ ವಿಭಾಗ ಸ್ಥಾಪನೆಗೊಂಡಿತು. ಇದು ಹೆಮ್ಮೆಪಡುವ ವಿಚಾರವಾಗಿದ್ದು, ಈ ಪರಂಪರೆ ಉಳಿಸಿ, ಬೆಳೆಸುವ ಜವಾಬ್ದಾರಿ ಯುವ ಸಮುದಾಯದ ಮೇಲಿದೆ ಎಂದು ಸಲಹೆ ನೀಡಿದರು.

ವಿಶ್ವವಿದ್ಯಾನಿಲಯದಲ್ಲಿ ಈಗ ನಡೆಯುತ್ತಿರುವ ಪ್ರತಿಭಟನೆಗಳಂತೆ ಕುವೆಂಪು ಅವರು ಕುಲಪತಿಗಳಾಗಿದ್ದ ಸಂದರ್ಭದಲ್ಲೂ ನಡೆಯುತ್ತಿದ್ದವು. ಆದರೆ ಕುವೆಂಪು ಅವರ ಗಟ್ಟಿಯಾದ ತೀರ್ಮಾನಗಳ ಮುಂದೆ ಟೀಕೆಗಳು ಮರೆಯಾಯಿತು. ಇದರಿಂದ ಕುವೆಂಪು ಮಾಡಿದ ಕೆಲಸಗಳು ಸ್ಮರಣೀಯವಾಗಿವೆ ಎಂದರು. ಆದರೆ ಇತ್ತೀಚಿನ ಪರಿಸ್ಥಿತಿಯೇ ಬೇರೆಯಾಗಿದೆ. ಈಗ ಭಾಷಣದಲ್ಲಿ ಹೇಳುವುದೊಂದಾದರೆ, ನಡೆದುಕೊಳ್ಳುವುದು ಮತ್ತೊಂದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಶೇಷ ಉಪನ್ಯಾಸ ನೀಡಿದ ಬೆಂಗಳೂರಿನ ಎನ್‌ಎಂಕೆಆರ್‌ವಿ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಎಂ.ಶ್ರೀಧರ ಮೂರ್ತಿ, ಇತ್ತೀಚಿಗೆ ಮೊಬೈಲ್ ಬಳಕೆಯಿಂದ ಏನೆಲ್ಲಾ ಅವ್ಯವಸ್ಥೆಗಳಾಗುತ್ತಿದೆ. ಇದು ಮನುಷ್ಯನ ಜೀವನದ ಮೇಲೆ ಯಾವ ರೀತಿ ದುಷ್ಪರಿಣಾಮ ಬೀರುತ್ತಿದೆ ಎಂಬುದನ್ನು ವಿವರಿಸಿದರು. ಮನೋವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಸಂಪತ್‌ಕುಮಾರ್, ಹಿರಿಯ ವಿದ್ಯಾರ್ಥಿಗಳ ಸಂಘದ ಸಂಘಟನಾ ಕಾರ್ಯದರ್ಶಿ ಪಿ.ಮಂಜುನಾಥ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಾಪಕಿ ಡಾ.ಜ್ಯೋತಿಶಂಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಹಿಳೆಯರಿಗಾಗಿ ಆಟೋಟ ಸ್ಪರ್ಧೆ

ಮೈಸೂರು,ಡಿ.16– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ 2024ರ ದಸರಾ ವಸ್ತುಪ್ರದರ್ಶನದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಉಪ ಸಮಿತಿ ವತಿಯಿಂದ ಡಿ.18ರಂದು ಮಧ್ಯಾಹ್ನ 2 ಗಂಟೆಗೆ ಪ್ರಾಧಿಕಾರದ ಆವರಣದಲ್ಲಿನ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ 18 ವರ್ಷ ಮೇಲ್ಪಟ್ಟ ಮಹಿಳೆಯರಿಗಾಗಿ ವಿವಿಧ ರೀತಿಯ ಆಟೋಟ ಸ್ಪರ್ಧೆಗಳನ್ನು ಹಾಗೂ ದೇಸಿ ಆಟಗಳನ್ನು ಏರ್ಪಡಿಸಲಾಗಿದೆ.

ಮಹಿಳೆಯರಿಗಾಗಿ ಕಣ್ಣಿಗೆ ಬಟ್ಟೆ ಕಟ್ಟಿ ಬಕೆಟ್‌ಗೆ ಹೊಡೆಯುವುದು, ಸೂಜಿಗೆ ದಾರ ಪೋಣಿಸುವುದು, ಚಮಚದಲ್ಲಿ ನಿಂಬೆಹಣ್ಣನ್ನು ಇಟ್ಟುಕೊಂಡು ಓಡುವುದು, ಗ್ಲಾಸ್‌ನಲ್ಲಿ ಪಿರಮಿಡ್ ಜೋಡಿಸುವುದು, ಗುಂಡು ಎಸೆತ, ಕೆರೆ ದಡ ಆಟ ಮತ್ತು ಬಾಂಬ್ ಇನ್ ದಿ ಸಿಟಿ ಹಾಗೂ ದೇಸಿ ಆಟಗಳಾದ ಅಳಿಗುಳಿ ಮನೆ ಆಟ, ಚೌಕಬಾರ, ಘಟ್ಟೆಮನೆ ಮತ್ತು ಆಣೆಕಲ್ಲು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ದೂ.ಸಂ:9611600103 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 6,425 ಪ್ರಕರಣಗಳು ಇತ್ಯರ್ಥ

ವೈಮನಸ್ಸು ಮರೆತು ಒಂದಾದ 41 ದಂಪತಿ



ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ರಾಷ್ಟ್ರೀಯ ಲೋಕ ಅದಾಲತ್ ನಡೆಯಿತು.

ಮೈಸೂರು,ಡಿ.16(ಆರ್‌ಕೆ)– ಡಿಸೆಂಬರ್ 14ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಪ್ರಕರಣಗಳ ಪೈಕಿ 6,425 ವ್ಯಾಜ್ಯಗಳು ಇತ್ಯರ್ಥವಾಗಿವೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಏರ್ಪಡಿಸಿದ್ದ ಅದಾಲತ್‌ನಲ್ಲಿ ಮೈಸೂರು ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜಿಯಾಗಬಹುದಾದ ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ. 1,19,788 ಪ್ರಕರಣಗಳು ಬಾಕಿ ಇದ್ದು, ಆ ಪೈಕಿ 59,490 ಸಿವಿಲ್ ಮತ್ತು 60,298 ಕ್ರಿಮಿನಲ್ ಪ್ರಕರಣಗಳಾಗಿವೆ. ಆ ಪೈಕಿ 39,980 ರಾಜಿಯಾಗಬಹುದಾದ ಪ್ರಕರಣಗಳಾಗಿದ್ದು, 26,866 ರಾಜೀ ಸಂಧಾನಕ್ಕಾಗಿ ಅದಾಲತ್‌ನಲ್ಲಿ ತೆಗೆದುಕೊಳ್ಳಲಾಗಿತ್ತು. ಆ ಪೈಕಿ ಈಗ 6,425 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್ ತಿಳಿಸಿದ್ದಾರೆ.

ಈ ಬಾರಿಯ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಮೈಸೂರು ನಗರ ಮತ್ತು ತಾಲೂಕು ನ್ಯಾಯಾಲಯಗಳಲ್ಲಿ 41 ದಂಪತಿ ತಮ್ಮ ಕೌಟುಂಬಿಕ ಭಿನ್ನಾಭಿಪ್ರಾಯ ಮರೆತು ಒಂದಾಗಿ ಜೀವನ ನಡೆಸಲು ಸಮ್ಮತಿಸಿದ್ದಾರೆ ಎಂದು ಅವರು ತಿಳಿಸಿದರು. ಈವರೆಗೆ ನಡೆದ ಲೋಕ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ಒಟ್ಟು 56,24,12,963 ಪ್ರಕರಣಗಳು ಇತ್ಯರ್ಥವಾದಂತಾಗಿವೆ ಎಂದು ದಿನೇಶ್ ತಿಳಿಸಿದ್ದಾರೆ.

ಚಾರುಮಂಜೂಷಾ–1 ಕೃತಿ ಬಿಡುಗಡೆ



ಲೇಖಕಿ ಡಾ.ಶಾಂತಾ ನಾಗರಾಜು ಅವರು 'ಏಕಾಂಗಿ ಕವಯಿತ್ರಿಯ ಪ್ರವಾಸದ ಡೈರಿ' ಕೃತಿಯನ್ನು ಲೋಕಾರ್ಪಣೆ ಮಾಡಿದರು.

ಮೈಸೂರು, ಡಿ.16– ಮೈಸೂರಿನ ವರ್ತುಲ ರಸ್ತೆಯಲ್ಲಿರುವ ಎಸ್.ಬಿ.ಎಂ. ಮತ್ತು ಇತರ ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆಯಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನವು ತನ್ನ ಚಾರು ಮಂಜೂಷಾ–1 ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಲೇಖಕರೂ ಆಪ್ತಸಮಾಲೋಚಕರೂ ಆದ ಡಾ.ಶಾಂತಾ ನಾಗರಾಜು ಅಭ್ಯಾಗತರಾಗಿ ಆಗಮಿಸಿದ್ದರು.

ಅವರ 'ಏಕಾಂಗಿ ಕವಯಿತ್ರಿಯ ಪ್ರವಾಸದ ಡೈರಿ' ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. ಅವರು 20ನೆಯ ಶತಮಾನಕ್ಕೆ ಸೇರಿದ ಅಂಬಾಬಾಯಿಯವರ ಸಾಧನೆಗಳನ್ನು ಕುರಿತ ಈ ಕೃತಿಯ ಹಿರಿಮೆಯನ್ನು ಸಾದರಪಡಿಸಿದರು.

ಬೆಳಕಿಗೆ ಬಾರದಿದ್ದ ಅವರ ನೂರಾರು ಸರಳವಾದ ಹರಿದಾಸಗೀತೆಗಳು ಈಗ ಲಭ್ಯವಾಗಿದ್ದು, ಅವುಗಳನ್ನು ಜನಪ್ರಿಯಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಅಧ್ಯಕ್ಷರಾದ ಡಿ.ಶೀಲಾಕುಮಾರಿ ಸ್ವಾಗತ ಕೋರಿ, ಪ್ರತಿಷ್ಠಾನದ ಕಾರ್ಯಕಲಾಪಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ಉದ್ಯಮಿ ಶ್ರೀವಿದ್ಯಾ ಕಾಮತ್ 'ದೀಪಧಾರಿಣಿ' ಕನ್ನಡ ಏಕವ್ಯಕ್ತಿ ಪ್ರದರ್ಶನವನ್ನು ನೀಡಿದರು. ನಾಟಕದ ರಚನೆ ಸುಧಾ ಅಡುಕುಳ. ಪರಿಕಲ್ಪನೆ, ವಿನ್ಯಾಸ ಮತ್ತು ನಿರ್ದೇಶನ ಡಾ. ಶ್ರೀಪಾದ ಭಟ್. ಸಹಾಯ ಶಾಲೋಮ್ ಸನ್ನುತ. ವೃದ್ಧಿ ಪ್ರಾರ್ಥನೆ ಮಾಡಿದರೆ, ವಿನುತಾ ನಿರೂಪಣೆ ಮಾಡಿದರು.

ವೇತನ ಪರಿಷ್ಕರಣೆ ಸೇರಿದಂತೆ ಇತರೆ ಬೇಡಿಕೆಗಾಗಿ ಡಿ.31ರ ಸಾರಿಗೆ ನೌಕರರ ಮುಷ್ಕರಕ್ಕೆ ವಿರೋಧ



ಸಾರಿಗೆ ನೌಕರರು ಮೈಸೂರು ಜಲದರ್ಶಿನಿ ಸರ್ಕಾರಿ ಅತಿಥಿಗೃಹದಲ್ಲಿ ಸಭೆ ನಡೆಸಿದರು.

ಮೈಸೂರು, ಡಿ.16(ಎಸ್‌ಪಿಎನ್)– ನಾಲ್ಕು ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ ಸೇರಿದಂತೆ ಇತರೆ ಬೇಡಿಕೆಗಳ ಈಡೇರಿಕೆಗಾಗಿ ಡಿ.31ರಂದು ರಾಜ್ಯಾದ್ಯಂತ ಕರೆ ನೀಡಿರುವ ವಿವಿಧ ಸಾರಿಗೆ ನೌಕರರ ಸಂಘಟನೆಗಳ 'ಜಂಟಿ ಕ್ರಿಯಾ ಸಮಿತಿ' ಹೋರಾಟವನ್ನು ಕೆಎಸ್‌ಆರ್‌ಟಿಸಿ ನೌಕರರ ಸಮಾನಮನಸ್ಕರ ಒಕ್ಕೂಟ ವಿರೋಧಿಸಿದೆ.

ಮೈಸೂರು ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಸಭೆ ನಡೆಸಿದ ನಂತರ ಕೂಟದ ಮೈಸೂರು ಜಿಲ್ಲಾಧ್ಯಕ್ಷ ವಿಶ್ವನಾಥ್ ಮಾಧ್ಯಮಗಳಿಗೆ ಮಾಹಿತಿ ನೀಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಅಧಿಕಾರ ವಹಿಸಿಕೊಂಡ ದಿನದಿಂದ 4 ಕೆಎಸ್‌ಆರ್‌ಟಿಸಿ ನಿಗಮಗಳ ಸಿಬ್ಬಂದಿಗೆ ಸಹಕಾರ ನೀಡುತ್ತಿದ್ದಾರೆ ಎಂದರು.

ಅಲ್ಲದೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ತನ್ನ ಪ್ರಣಾಳಿಕೆಯಲ್ಲಿ ಸಾರಿಗೆ ನೌಕರರ ಪ್ರಮುಖ ಬೇಡಿಕೆಯಾದ ಸರ್ಕಾರಿ ನೌಕರರಿಗೆ ನೀಡುವ ಸಮಾನ ವೇತನ ಹಾಗೂ ಕಳೆದ 35 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ನಾಲ್ಕು ನಿಗಮಗಳ ಸಾರಿಗೆ ಸಂಘಟನೆಗಳಿಗೆ ಚುನಾವಣೆ ನಡೆಸುವುದು ಸೇರಿದಂತೆ ಇತರೆ ಬೇಡಿಕೆಗಳನ್ನು ಆದ್ಯತೆ ಮೇರೆಗೆ ಈಡೇರಿಸುವುದಾಗಿ ಭರವಸೆ ನೀಡಿದ್ದರು.

ಆದರೆ, ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಸದಸ್ಯರು 4 ವರ್ಷಕ್ಕೊಮ್ಮೆ ವೇತನ ಪರಿಷ್ಕರಿಸಿ ಎಂದು ಒತ್ತಾಯಿಸಿ ಸರ್ಕಾರ ಮತ್ತು ಕೆಎಸ್‌ಆರ್‌ಟಿಸಿ ಅಧಿಕಾರಿಗಳ ವಿರುದ್ಧ ಸಾರಿಗೆ ನೌಕರರನ್ನು ಇಲ್ಲಿವರೆಗೂ ಎತ್ತಿಕಟ್ಟಿ ಅವರ ಬದುಕನ್ನು ಸರ್ವನಾಶ ಮಾಡಿದ್ದರು. ಅಧಿಕಾರಿಗಳು ಮತ್ತು ಸರ್ಕಾರದ ವಿರುದ್ಧ ಸಂಘರ್ಷ ಮಾಡುವ ಬದಲು. ಸರ್ಕಾರದ ಮನವೊಲಿಸಿ, ಸರ್ಕಾರಿ ನೌಕರರಿಗೆ ನೀಡುವ ಸರಿ ಸಮಾನ ವೇತನವನ್ನು ಸಾರಿಗೆ ನೌಕರರಿಗೂ ಅನುಷ್ಠಾನಗೊಳಿಸುವುದು ಹಾಗೂ ಸಾರಿಗೆ ಸಂಘಟನೆಗಳಿಗೆ ಚುನಾವಣೆ ಮೂಲಕ ಆಯ್ಕೆ ಮಾಡುವ ಪದ್ಧತಿಗೆ ಚಾಲನೆ ನೀಡುವ ಬೇಡಿಕೆಗಳಿಗೆ ಒಪ್ಪಿದರೆ, ಡಿ.31ರ ಜಂಟಿ ಕ್ರಿಯಾ ಸಮಿತಿ ಹೋರಾಟಕ್ಕೆ ನಮ್ಮ ಬೆಂಬಲ ನೀಡುತ್ತೇವೆ. ಇಲ್ಲವಾದರೆ, ನಮ್ಮ ಸಂಘಟನೆಯ ಬೆಂಬಲ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅಲ್ಲದೆ, ಸರ್ಕಾರ ಅಂಗಸಂಸ್ಥೆಯಾಗಿರುವ 4 ಕೆಎಸ್‌ಆರ್‌ಟಿಸಿ ನಿಗಮದ ನೌಕರರು, ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವುದರಿಂದ ಸಾರಿಗೆಯನ್ನು ನಂಬಿರುವ ಲಕ್ಷಾಂತರ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಹಾಗಾಗಿ ಡಿ.31ರಂದು ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಕರೆ ನೀಡಿರುವ ಹೋರಾಟಕ್ಕೆ ನಮ್ಮ ಒಕ್ಕೂಟದ ಬೆಂಬಲ ಇಲ್ಲ ಎಂದರು. ಈ ವೇಳೆ ಕೆಎಸ್‌ಆರ್‌ಟಿಸಿ ನೌಕರರ ಕೂಟದ ಗೌರವಾಧ್ಯಕ್ಷ ಬಿ.ಎಸ್.ಸುರೇಶ್, ತಾಳಶಾಸನ ಮೋಹನ್ ಸೇರಿದಂತೆ ಸಮಾನಮನಸ್ಕರ ಒಕ್ಕೂಟದ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇ–ಸ್ವತ್ತು, ಇ–ಖಾತೆಯ ಗೊಂದಲಗಳ ನಿವಾರಿಸಿ

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆಗ್ರಹ



ಮೈಸೂರು,ಡಿ.16(ಜಿಎ)–ಇ–ಸ್ವತ್ತು ಹಾಗೂ ಇ–ಖಾತೆಯಲ್ಲಿ ಭಾರಿ ಗೊಂದಲಗಳಿದ್ದು, ಇದನ್ನು ಬಗೆಹರಿಸಲು ಮೈಸೂರು ಮಹಾನಗರಪಾಲಿಕೆ ಮುಂದಾಗಲಿ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇ–ಸ್ವತ್ತು ಹಾಗೂ ಇ–ಖಾತೆಗಳನ್ನು ಯಾರಿಗೆ ಕೊಡುತ್ತಿದ್ದಾರೆ. ಯಾವ ಪ್ರಾಪರ್ಟಿಗೆ ಕೊಡುತ್ತಿದ್ದಾರೆ ಎಂಬುದನ್ನು ಪಾಲಿಕೆಯವರು ತಿಳಿಸಬೇಕಿದೆ. ಅಶೋಕಪುರಂ, ಸುಣ್ಣದಕೇರಿ ಸೇರಿದಂತೆ ಹಲವು ಬಡಾವಣೆಗಳಿಗೆ ಸರಿಯಾದ ದಾಖಲಾತಿಗಳು ಇಲ್ಲದೇ ಇರುವುದರಿಂದ, ಪಾಲಿಕೆಯವರು ಹೇಗೆ ಇ–ಸ್ವತ್ತು ಹಾಗೂ ಇ–ಖಾತೆಗಳನ್ನು ಮಾಡಿಕೊಡುತ್ತಾರೆ. ಈ ವಿಚಾರವಾಗಿ ಮುಡಾಗೆ ಜನರು ಕೂಡ ಅಲೆಯುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಗರದ ಪ್ರದೇಶಗಳಲ್ಲಿ ಗ್ರಾಮಗಳಂತೆ ಬಿಂಬಿಸಿಕೊಂಡಿರುವ ಬಡಾವಣೆಗಳಿಗೆ ಸರಿಯಾದ ದಾಖಲಾತಿ ಇಲ್ಲ, ಆಸ್ತಿಗಳಿಗೆ ಸರಿಯಾದ ಸ್ಪಷ್ಟನೆ ಇಲ್ಲ, ಹೀಗಾದರೆ ಜನಸಾಮಾನ್ಯರ ಪಾಡೇನು? ದಾಖಲಾತೀಕರಣ ಮಾಡಲು ಅಧಿಕಾರಿಗಳು ಯೋಜನೆ ರೂಪಿಸಬೇಕು ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮೈಸೂರಿನಲ್ಲಿ 73 ಅನಧಿಕೃತ ಬಡಾವಣೆಗಳಿವೆ. ಇವುಗಳಿಂದ ಕಂದಾಯ ಕಟ್ಟಿಸಿಕೊಳ್ಳುತ್ತಿರುವ ಪಾಲಿಕೆ ಇವರ ಸಮಸ್ಯೆಗಳನ್ನು ಬಗೆಹರಿಸಬೇಕು. ಜಿಲ್ಲಾಧಿಕಾರಿಗಳು ಸಾರ್ವಜನಿಕವಾಗಿ ಸಭೆ ಕರೆದು, ಜನರ ಸಮಸ್ಯೆಗಳನ್ನು ಆಲಿಸಿ, ಬಗೆಹರಿಸಲು ಮುಂದಾಗಲಿ ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ವಾಸು ಉಪಸ್ಥಿತರಿದ್ದರು.

ಮಧುಮೇಹಿಗಳ ಸಂಖ್ಯೆಯಲ್ಲಿ ಭಾರತಕ್ಕೆ ಎರಡನೇ ಸ್ಥಾನ

ಹಿರಿಯ ವೈದ್ಯ ಡಾ.ವಿ.ಲಕ್ಷ್ಮಿನಾರಾಯಣ ಅಭಿಮತ



ಶ್ರೀರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಪ್ರತಿ ಹುಣ್ಣಿಮೆಯಂದು ಜರುಗುವ ತಿಂಗಳ ತಿಳಿವು ಕಾರ್ಯಕ್ರಮದಲ್ಲಿ ಹಿರಿಯ ವೈದ್ಯ ಡಾ.ವಿ.ಲಕ್ಷ್ಮೀನಾರಾಯಣ, ಡಾ.ಎಸ್.ಪಿ.ಯೋಗಣ್ಣ, ಇತರರಿದ್ದರು.

ಮೈಸೂರು, ಡಿ.16(ಎಸ್‌ಪಿಎನ್)– ದಿನದಿಂದ ದಿನಕ್ಕೆ ಜಗತ್ತಿನಲ್ಲಿ ಮಧುಮೇಹಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಸಾಲಿನಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ ಎಂದು ಹಿರಿಯ ವೈದ್ಯ ಡಾ.ವಿ.ಲಕ್ಷ್ಮೀನಾರಾಯಣ ಹೇಳಿದರು.

ಮೈಸೂರು ರಾಮಕೃಷ್ಣ ವೃತ್ತದ ಪರಮಹಂಸ ಪ್ರತಿಮೆಯ ನೆಲಮಹಡಿಯಲ್ಲಿ ಶ್ರೀರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಪ್ರತಿ ಹುಣ್ಣಿಮೆಯಂದು ಜರುಗುವ ತಿಂಗಳ ತಿಳಿವು ಕಾರ್ಯಕ್ರಮ ಅಂಗವಾಗಿ 'ಸಕ್ಕರೆ ಕಾಯಿಲೆ, ಏನು, ಏಕೆ, ನಿಯಂತ್ರಣ ಹೇಗೆ' ವಿಷಯ ಕುರಿತು ಮಾತನಾಡಿದರು.

ಭಾರತದಲ್ಲಿ ಮಧುಮೇಹಿಗಳ ಸಂಖ್ಯೆ ಶೇ.11.4ರಷ್ಟಿದೆ. ಇದರಲ್ಲಿ ಶೇ.15.3ರಷ್ಟು ಜನರು ಆರಂಭಿಕ ಹಂತದಲ್ಲಿದ್ದಾರೆ. 2022ರಲ್ಲಿ ನಡೆದಿರುವ ಈ ಸಮೀಕ್ಷೆ ಪ್ರಕಾರ ಭಾರತದಲ್ಲಿ ಮಧುಮೇಹಿಗಳ ಸಂಖ್ಯೆ ಅಂದಾಜು 10.1 ಕೋಟಿ. ಮಧುಮೇಹ ಸಮಸ್ಯೆಯ ಆರಂಭಿಕ ಹಂತದಲ್ಲಿ 13.6 ಕೋಟಿ ಮಂದಿ ಇದ್ದಾರೆ ಎಂದರು.

ಪ್ರಸ್ತುತ ಜಗತ್ತು ಸ್ಪರ್ಧಾತ್ಮಕ ತಂತ್ರಜ್ಞಾನದ ನಾಗಾಲೋಟದಲ್ಲಿ ಪ್ರಯಾಣಿಸುತ್ತಿದೆ. ಜನರು ಇದಕ್ಕೆ ತಕ್ಕಂತೆ ತಮ್ಮ ಜೀವನಶೈಲಿ ರೂಢಿಸಿಕೊಂಡು ಮಧುಮೇಹಿ ರೋಗಿಗಳಾಗಿ ಅತೀ ಚಿಕ್ಕವಯಸ್ಸಿನಲ್ಲೇ ಹೊರಹೊಮ್ಮುತ್ತಿದ್ದಾರೆ. ಈಗ ಎಲ್ಲಾ ಕಡೆ ಕಲಬೆರಕೆ ಆಹಾರ, ಅನಾರೋಗ್ಯಕರ ಆಹಾರ ಸೇವನೆ ರೂಢಿಸಿಕೊಂಡಿರುವುದೇ ಕಾರಣ ಎಂದು ಅವರು ಬೇಸರ ಹೊರಹಾಕಿದರು.

ಮಧುಮೇಹ ಕಡಿಮೆಗೊಳಿಸಲು ದಿನ ನಿತ್ಯದ ಆಹಾರ ಪದ್ಧತಿಯಲ್ಲಿ ಕಾರ್ಬೋಹೈಡ್ರೇಟ್ ಪ್ರಮಾಣ ಕಡಿಮೆಗೊಳಿಸಬೇಕು. ನಿಧಾನವಾಗಿ ಜೀರ್ಣವಾಗುವ ಆಹಾರವನ್ನು ತೆಗೆದುಕೊಳ್ಳುವುದು. ನಿಯಮಿತವಾಗಿ ತಿನ್ನುವುದು, ಕೊಬ್ಬು, ಸಿಹಿ ಪದಾರ್ಥಗಳನ್ನು ತ್ಯಜಿಸುವುದು, ಸಿಹಿಯಾದ ಮಾವು, ಹಲಸು ಇಂತಹ ಕ್ಯಾಲೋರಿ ಇರುವ ಹಣ್ಣುಗಳನ್ನು, ಒಂದು ಹೊತ್ತಿನ ಊಟವನ್ನಾದರೂ ತ್ಯಜಿಸಿ ತಿನ್ನಬೇಕು ಎಂದು ಸಲಹೆ ನೀಡಿದರು.

> “ಮಧುಮೇಹ ಕಡಿಮೆಗೊಳಿಸಲು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ನೀರು ಕುಡಿಯುವುದು ನಂತರ ಮುಂಚಿನ ದಿನ ನೀರಿನಲ್ಲಿ ನೆನೆಹಾಕಿದ್ದ ಮೆಂತ್ಯದ ನೀರು ಕುಡಿಯಬೇಕು. ಬೆಂಡೆಕಾಯಿಯನ್ನು ತುಂಡರಿಸಿ ನೀರಲ್ಲಿ ಹಾಕಿ ಅದನ್ನು ಕುಡಿಯುವುದು ಅಥವಾ ಅಗಸೆ ಬೀಜ ತಿನ್ನಬೇಕು. ಬೆಳಗ್ಗಿನ ಉಪಾಹಾರಕ್ಕೆ ಗೋಧಿ, ರಾಗಿ, ನವಣೆಯಂತಹ ನವಧಾನ್ಯಗಳಿಂದ ಮಾಡಿರುವ ತಿಂಡಿಗಳ ಸೇವನೆ ಒಳ್ಳೆಯದು.
> –ಡಾ.ಲಕ್ಷ್ಮಿನಾರಾಯಣ

ವೇದಿಕೆಯಲ್ಲಿ ಶ್ರೀರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಉಪಾಧ್ಯಕ್ಷ ಬಸವಣ್ಣ, ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಸಂಚಾಲಕ ಪ್ರೊ.ಜಿ.ಚಂದ್ರಶೇಖರ್, ಖಜಾಂಚಿ ಹೆಚ್.ಜಿ.ಬಸವಲಿಂಗಪ್ಪ, ಮರಿಮಲ್ಲಪ್ಪ ಪಿಯು ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ವಿಶ್ವನಾಥ್ ಇತರರಿದ್ದರು. ನಂತರ ಮೈಸೂರಿನ ವಿದ್ವಾನ್ ವಿ.ಧನ್ಯಪಾಲ್ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ವ್ಯಾಪಕ ಪೊಲೀಸ್ ಬಂದೋಬಸ್ತ್, 3200ಕ್ಕೂ ಅಧಿಕ ಪೊಲೀಸರ ನಿಯೋಜನೆ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿಗೆ ಅಧಿಕಾರಿಗಳ ಮಾಹಿತಿ

● ಪೊಲೀಸ್ ಔಟ್‌ಪೋಸ್ಟ್, ಸಹಾಯವಾಣಿ ಕೇಂದ್ರ ಸ್ಥಾಪನೆ ● ಎಲ್ಲೆಡೆ ಸಿಸಿ ಕ್ಯಾಮರಾ ಕಣ್ಗಾವಲು ● 67ಎಕರೆಯಲ್ಲಿ ಪಾರ್ಕಿಂಗ್ ವ್ಯವಸ್ಥೆ ● 150 'ಸಾಹಿತ್ಯ ಸಾರಿಗೆ' ಬಸ್ ಸಂಚಾರ



ಪೊಲೀಸ್ ಬಂದೋಬಸ್ತ್ ಸಭೆಯಲ್ಲಿ ಮಾತನಾಡಿದ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ.

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ 30 ವರ್ಷಗಳ ಬಳಿಕ ನೆರವೇರುತ್ತಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಲಿದ್ದು ಗಣ್ಯರು, ಸಾಹಿತ್ಯಾಸಕ್ತರು ಮತ್ತು ಸಾರ್ವಜನಿಕರ ಸುರಕ್ಷತೆ ಕಾಪಾಡುವ ಹೊಣೆ ಪೊಲೀಸರ ಮೇಲಿದ್ದು, ಯಾವುದೇ ಅನಾಹುತಕ್ಕೆ ಎಡೆಮಾಡಿಕೊಡದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಮತ್ತು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಚಲುವರಾಯಸ್ವಾಮಿ ಅವರು ಹೇಳಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಆಯೋಜಿಸಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೊಲೀಸ್ ಬಂದೋಬಸ್ತ್ ಸಭೆಯಲ್ಲಿ ಮಾತನಾಡಿದ ಸಚಿವರು, ಸಮ್ಮೇಳನಕ್ಕೆ ಆಗಮಿಸುವವರಿಗೆ ಸಂಚಾರ ಮಾರ್ಗದ ಫಲಕಗಳು ಹಾಗೂ ಆಗಮನ, ನಿರ್ಗಮನದ ಸ್ಥಳಗಳ ಕುರಿತ ಸೂಚನಾ ಫಲಕಗಳನ್ನು ಹೆದ್ದಾರಿಗಳಲ್ಲಿ ಹಾಕಬೇಕು. ಜನದಟ್ಟಣೆ ಹೆಚ್ಚಾಗಿರುವುದರಿಂದ ಕಾನೂನು ಸುವ್ಯವಸ್ಥೆ ಹದಗೆಡದಂತೆ ನೋಡಿಕೊಳ್ಳಬೇಕು. ವ್ಯಾಪಕವಾಗಿ ಪೊಲೀಸ್ ಬಂದೋಬಸ್ತ್ ಆಗಬೇಕು ಎಂದರು.

ಸಮ್ಮೇಳನ ಸಂಬಂಧ ಪೊಲೀಸ್ ಬಂದೋಬಸ್ತ್‌ಗೆ ನಿಯೋಜನೆಗೊಳ್ಳಲಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಊಟ, ತಿಂಡಿ, ವಸತಿ ಸೌಕರ್ಯ ಕಲ್ಪಿಸಬೇಕು. ಗಣ್ಯರ ಭದ್ರತೆಯಲ್ಲಿ ಲೋಪವಾಗದಂತೆ ನಿಗಾವಹಿಸಬೇಕು. ಅಡುಗೆ ಮಾಡುವ ಸ್ಥಳ, ಪಾರ್ಕಿಂಗ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಬೆಂಕಿ ಅವಘಡ ಸಂಭವಿಸಿದರೆ ಅದನ್ನು ನಂದಿಸಲು ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಬೇಕು ಎಂದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು, ಸಮ್ಮೇಳನ ಸಂಬಂಧ ಮಂಡ್ಯದಲ್ಲಿ ಕೈಗೊಂಡಿರುವ ಪೊಲೀಸ್ ಬಂದೋಬಸ್ತ್ ಕುರಿತು ಸಚಿವರಿಗೆ ವಿವರವಾಗಿ ಮಾಹಿತಿ ನೀಡಿದರು.

ಸಮ್ಮೇಳನಾಧ್ಯಕ್ಷರ ಮೆರವಣಿಗೆ ಸಾಗುವ ಮಾರ್ಗದಲ್ಲಿ ಸೂಕ್ತ ಬಂದೋಬಸ್ತ್ ಮಾಡಲಾಗುತ್ತದೆ. ಸಮ್ಮೇಳನಕ್ಕೆ ಬೆಂಗಳೂರು, ಮೈಸೂರು ಕಡೆಯಿಂದ ಆಗಮಿಸುವವರಿಗೆ, ನಿರ್ಗಮಿಸುವವರಿಗೆ ಮಾರ್ಗದ ಸೂಚನಾ ಫಲಕಗಳನ್ನು ಅಳವಡಿಸಲಾಗುತ್ತದೆ. ಸಂಚಾರ ದಟ್ಟಣೆ ಆಗದಂತೆ ಕ್ರಮವಹಿಸಲಾಗುವುದು. 67 ಎಕರೆಗೂ ಅಧಿಕ ಪ್ರದೇಶದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದ್ದು, ಎಲ್ಲಾ ಕಡೆ ಪೊಲೀಸರನ್ನು ನಿಯೋಜಿಸಲಾಗುವುದು ಎಂದರು.

6 ಎಎಸ್‌ಪಿ, 21 ಡಿವೈಎಸ್‌ಪಿ, 63 ಸಿಪಿಐ, 170 ಪಿಎಸ್‌ಐ, 262 ಎಎಸ್‌ಐ, 1500 ಪೇದೆಗಳು, 1000 ಹೋಂ ಗಾರ್ಡ್, 165 ಮಹಿಳಾ ಕಾನ್‌ಸ್ಟೇಬಲ್ ಒಳಗೊಂಡಂತೆ 14 ಜಿಲ್ಲೆಗಳಿಂದ 3200ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ಆಗಮಿಸಲಿದ್ದಾರೆ. ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಪಾಳಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಸಂಚಾರ ನಿರ್ವಹಣೆ, ಪಾರ್ಕಿಂಗ್, ಊಟದ ಕೌಂಟರ್, ವೇದಿಕೆ ಹೀಗೆ ಎಲ್ಲಾ ಕಡೆ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದ್ದು ಹಗಲು ಮತ್ತು ರಾತ್ರಿ ಪೊಲೀಸ್ ಸಿಬ್ಬಂದಿ ಕರ್ತವ್ಯದಲ್ಲಿ ನಿರತರಾಗಿರಲಿದ್ದಾರೆ. ಸಿಸಿ ಕ್ಯಾಮರಾ ನಿಗಾ ವ್ಯವಸ್ಥೆ ಮಾಡಲಾಗಿದೆ. ಅಪರಾಧ ಹಾಗೂ ಕಳ್ಳತನ ತಡೆಯಲು ಅಪರಾಧಿ ಪತ್ತೆ ದಳ ಹಾಗೂ ಮಫ್ತಿಯಲ್ಲಿ ಪೊಲೀಸರು ಗಸ್ತು ತಿರುಗಲಿದ್ದಾರೆ ಎಂದರು.

ಪೊಲೀಸರು ತಂಗಲು ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ. ವಾಹನಗಳಿಗೆ ಪಾರ್ಕಿಂಗ್ ಪಾಸ್ ಹಾಗೂ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಪಾಸ್ ವ್ಯವಸ್ಥೆ ಮಾಡಲಾಗಿದೆ. ಹೆದ್ದಾರಿ ಹಾಗೂ ನಗರದಲ್ಲಿ ಟೋಯಿಂಗ್ ವಾಹನಗಳ ವ್ಯವಸ್ಥೆ ಕೂಡ ಮಾಡಲಾಗುತ್ತಿದೆ. 10ಕ್ಕೂ ಅಧಿಕ ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಲಾಗುತ್ತಿದೆ. ಪೊಲೀಸ್ ಔಟ್‌ಪೋಸ್ಟ್, ಮಹಿಳಾ ಸಹಾಯವಾಣಿ ಕೇಂದ್ರಗಳನ್ನು ಸಹ ತೆರೆಯಲಾಗುತ್ತಿದೆ ಎಂದು ಸಚಿವರಿಗೆ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮಾತನಾಡಿ, ಪ್ರತಿ ಅರ್ಧ ಗಂಟೆಗೆ ಒಂದರಂತೆ ವಿಶೇಷ "ಸಾಹಿತ್ಯ ಸಾರಿಗೆ ಬಸ್"ಗಳು ಸಂಚರಿಸಲಿವೆ. ಪ್ರತಿ ತಾಲೂಕಿಗೆ 15 ಬಸ್‌ಗಳಂತೆ 105 ಬಸ್‌ಗಳು ಸಂಚರಿಸಲಿವೆ. ನಗರದಿಂದ 15 ಬಸ್‌ಗಳು ಉಚಿತವಾಗಿ ಸಂಚರಿಸಲಿವೆ. ನೋಂದಣಿ ಕೇಂದ್ರದ ಸಮೀಪ ಆರೋಗ್ಯ ಕೇಂದ್ರ ತೆರೆಯಲಾಗುತ್ತಿದ್ದು ದಿನದ 24 ಗಂಟೆ ಕಾರ್ಯ ನಿರ್ವಹಿಸಲಿದೆ ಎಂದು ಹೇಳಿದರು.

ಸಭೆಯಲ್ಲಿ ಶಾಸಕರುಗಳಾದ ರವಿಕುಮಾರ್ ಗಣಿಗ, ರಮೇಶ್ ಬಾಬು ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ಡಿಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಶಿಷ್ಟಾಚಾರದಲ್ಲಿ ಲೋಪವಾಗದಂತೆ ಎಚ್ಚರವಹಿಸಿ: ಜಿಲ್ಲಾಧಿಕಾರಿ ಡಾ.ಕುಮಾರ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಿಷ್ಟಾಚಾರ ಪಾಲನೆ ಆಗಬೇಕು. ಗಣ್ಯರು, ಅತಿಥಿಗಳು, ಸನ್ಮಾನಿತರು, ಸಾಧಕರು ಸೇರಿದಂತೆ ಸಮ್ಮೇಳನಕ್ಕೆ ಆಗಮಿಸುವ ಗಣ್ಯರ ಶಿಷ್ಟಾಚಾರ ಪಾಲನೆಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಶಿಷ್ಟಾಚಾರ ಪಾಲನೆ ಸಂಬಂಧ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ಸಮಿತಿಗಳೊಂದಿಗೆ ಸಮನ್ವಯತೆ ಕಾಯ್ದುಕೊಳ್ಳಬೇಕು. ಸಮ್ಮೇಳನಕ್ಕೆ ಆಗಮಿಸುವ ಗಣ್ಯರಿಗೆ ಆಸನ, ವಾಹನ, ಊಟ, ವಸತಿ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳು ಸೂಕ್ತ ರೀತಿಯಲ್ಲಿ ನೆರವೇರಬೇಕು ಎಂದರು.

ಸನ್ಮಾನಿತರಿಗೆ ನೀಡುವ ಸ್ಮರಣಿಕೆಯನ್ನು ಸೂಕ್ತ ರೀತಿಯಲ್ಲಿ ತಲುಪಿಸುವ ಕೆಲಸವಾಗಬೇಕು. ತಂಡಗಳನ್ನು ರಚನೆ ಮಾಡಿಕೊಂಡು ಕೆಲಸ ಮಾಡಬೇಕು. ವಸ್ತ್ರಸಂಹಿತೆ ಪಾಲನೆ ಆಗಬೇಕು. ಸಮ್ಮೇಳನದಲ್ಲಿ ಪ್ಲಾಸ್ಟಿಕ್ ಬಾಟಲ್ ಬಳಸದಂತೆ ನೋಡಿಕೊಳ್ಳಬೇಕು. ಮೈಕ್, ಲೈಟ್, ಸೌಂಡ್ ವ್ಯವಸ್ಥೆಯಲ್ಲಿ ಎಲ್ಲೂ ಅಭಾಸವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಸನ್ಮಾನಿತರು, ಗಣ್ಯರ ಪಟ್ಟಿಯನ್ನು ಮೊದಲೇ ಸಿದ್ಧಪಡಿಸಿಕೊಳ್ಳಬೇಕು. ಸನ್ಮಾನಿತರು, ಗಣ್ಯರಿಗೆ ಪ್ರತ್ಯೇಕ ವಿಐಪಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಗೊಂದಲಕ್ಕೆ ಒಳಗಾಗದೆ ಗಣ್ಯರನ್ನು ಗೌರವಯುತವಾಗಿ ಸತ್ಕರಿಸಬೇಕು. ಎಲ್ಲಿಯಾದರೂ ಲೋಪ ಕಂಡುಬಂದ ಮಾತುಗಳು ಕೇಳಿಬಂದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮಕೈಗೊಳ್ಳಲಾಗುತ್ತದೆ ಎಂದರು.

ಆಹಾರ ಗುಣಮಟ್ಟ ಪರೀಕ್ಷೆ ಸಮಿತಿಯವರು ಪ್ರತಿ ಹಂತದಲ್ಲಿ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿ ವರದಿಯನ್ನು ನೀಡಬೇಕು. ಸ್ಥಳದಲ್ಲೇ ಇದ್ದು ಗುಣಮಟ್ಟದ ಪರಿಶೀಲನೆ ನಡೆಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಸನ್ಮಾನಿತರ ಫೋಟೋಲಿಸ್ಟ್ ಸಿದ್ಧಪಡಿಸಿಕೊಳ್ಳಬೇಕು. ಅವರೊಂದಿಗೆ ಸಂಪರ್ಕದಲ್ಲಿರಬೇಕು. ಅವರನ್ನು ಕರೆತರುವುದು ಬೀಳ್ಕೊಡುವ ಪ್ರತಿ ಜವಾಬ್ದಾರಿ ಸಂಬಂಧಿಸಿದ ಅಧಿಕಾರಿಗಳದ್ದಾಗಿರುತ್ತದೆ. ಗಂಭೀರತೆಯನ್ನು ಅರಿತು ಅಧಿಕಾರಿಗಳು ಕೆಲಸ ಮಾಡಬೇಕು ಎಂದರು.

ಜೆಡಿಎಸ್‌ನಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹುಟ್ಟುಹಬ್ಬ ಆಚರಣೆ


ಮಂಡ್ಯ,ಡಿ.16– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ಅಧಿಕಾರ ಸಿಕ್ಕಿ ಜನಸೇವೆ ಮಾಡುವ ಅವಕಾಶ ಸಿಗಲಿ ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ತಿಳಿಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿರವರ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಕಾರ್ಯಕರ್ತರು ನಗರದ ವಿದ್ಯಾ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೇವರು ಆರೋಗ್ಯ, ಆಯಸ್ಸು ಕೊಟ್ಟು ಜನಸೇವೆಗೆ ಅವಕಾಶ ಕೊಡಲಿ ಎಂದು ಹೇಳಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ಮಾತನಾಡಿ, ಅಪರೂಪದ ವ್ಯಕ್ತಿತ್ವ, ಬಡವರು ಹಾಗೂ ದೀನದಲಿತರು, ರೈತರ ಬಾಳಿನಲ್ಲಿ ಸದಾಕಾಲ ಇರುವ ಎಚ್.ಡಿ.ಕುಮಾರಸ್ವಾಮಿ ಅವರು 66ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಈ ಸುಸಂದರ್ಭದಲ್ಲಿ ಇಡೀ ರಾಜ್ಯಾದ್ಯಂತ ವಿಶೇಷವಾಗಿ ಅವರದೇ ಕ್ಷೇತ್ರ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ತಾಲೂಕು ಕೇಂದ್ರಗಳಲ್ಲಿ ದೇವರಿಗೆ ಪೂಜೆ ಸಲ್ಲಿಸಿ, ಆಸ್ಪತ್ರೆಗಳಲ್ಲಿ ಹಣ್ಣು ಹಂಪಲು ವಿತರಣೆ ಮಾಡುವ ಮೂಲಕ ಸರಳವಾಗಿ ಹುಟ್ಟು ಹಬ್ಬ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಕೇಂದ್ರ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರ ಸೇವೆ ಇಡೀ ದೇಶಕ್ಕೆ ಹಾಗೂ ನಾಡಿಗೆ ಹಾಗೂ ಜಿಲ್ಲೆಗೆ ರೈತರಿಗೆ, ನಿರ್ಗತಿಕರಿಗೆ ಒಳ್ಳೆಯದಾಗುವ ರೀತಿ ಸಿಗಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ಮೈಷುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ನಗರಸಭೆ ಅಧ್ಯಕ್ಷ ನಾಗೇಶ್, ನಗರಸಭೆ ಸದಸ್ಯರಾದ ಮಂಜುಳಾ ಉದಯಶಂಕರ್, ಮೀನಾಕ್ಷಿ ಪುಟ್ಟಸ್ವಾಮಿ, ರಾಮಲಿಂಗಯ್ಯ, ರವಿ, ಜೆಡಿಎಸ್ ಮುಖಂಡರಾದ ಸಾತನೂರು ಜಯರಾಮ್, ಅಬ್ಬಾಸ್‌ಅಲಿ ಬೋಹ್ರ, ನಾಗಮ್ಮ, ಪದ್ಮಾವತಿ, ಬಿ.ಆರ್.ಸುರೇಶ್ ಇತರರು ಹಾಜರಿದ್ದರು.



ಮಂಡ್ಯ ಜೆಡಿಎಸ್ ವತಿಯಿಂದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಆಚರಿಸಲಾಯಿತು.

ವಿದ್ಯಾರ್ಥಿಗಳಿಗೆ ಕನ್ನಡ ಪ್ರಜ್ಞೆ, ಕನ್ನಡದ ಬಗ್ಗೆ ತಿಳುವಳಿಕೆ ಬಹಳ ಮುಖ್ಯ

ಮಂಡ್ಯ ಜಿಲ್ಲಾ ಕಸಾಪ ಸಂಚಾಲಕಿ ಡಾ.ಮೀರಾಶಿವಲಿಂಗಯ್ಯ



ಮಂಡ್ಯ,ಡಿ.16– ವಿದ್ಯಾರ್ಥಿಗಳಿಗೆ ಕನ್ನಡ ಪ್ರಜ್ಞೆ, ಕನ್ನಡದ ಬಗ್ಗೆ ತಿಳುವಳಿಕೆ ಬಹಳ ಮುಖ್ಯವಾಗಿ ಇರಬೇಕು ಎಂಬ ನಿಟ್ಟಿನಲ್ಲಿ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಒಳ್ಳೆಯದಾಗಲಿ ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ ತಿಳಿಸಿದರು.

ನಗರದ ಎಸ್‌ಬಿ ಸಮುದಾಯ ಭವನದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರಚಾರ ಸಮಿತಿ ವತಿಯಿಂದ ಇಡೀ ಜಿಲ್ಲೆಯಾದ್ಯಂತ ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ ಮತ್ತು ವಿಶೇಷವಾಗಿ ಮಂಡ್ಯ ಜಿಲ್ಲಾ ಸಾಹಿತ್ಯ ಇತಿಹಾಸ ವೈಶಿಷ್ಟ್ಯಗಳ ಕುರಿತು ಹಮ್ಮಿಕೊಳ್ಳಲಾಗಿರುವ ಜಿಲ್ಲಾ ಮಟ್ಟದ ರಸಪ್ರಶ್ನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಮಕ್ಕಳಲ್ಲಿ ಕನ್ನಡದ ಬಗ್ಗೆ ಅರಿವು ಮತ್ತು ಜಾಗೃತಿಯನ್ನು ಮೂಡಿಸುವ ಸಲುವಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಶಾಲಾ ವಿಭಾಗ, ಕಾಲೇಜು ವಿಭಾಗ ಹಾಗೂ ತಾಲೂಕು ಮಟ್ಟದಲ್ಲಿ ಮೂರು ಹಂತವಾಗಿ ಏರ್ಪಡಿಸಲಾಗಿತ್ತು. ಇಂದು ಪ್ರೌಢಶಾಲಾ ವಿಭಾಗ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಜಿಲ್ಲಾ ಮಟ್ಟದಲ್ಲಿ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಮಕ್ಕಳೆಲ್ಲರೂ ಸ್ಪರ್ಧೆಯಲ್ಲಿ ಭಾಗವಹಿಸಲು ಬಹಳ ಉತ್ಸುಕತೆಯಿಂದ ಕೂಡಿರುವುದು ಸಂತೋಷದ ವಿಷಯವಾಗಿದೆ ಎಂದರು.

ಪ್ರತಿಯೊಬ್ಬರೂ ಕನ್ನಡ ಭಾಷೆ ಬಗ್ಗೆ ಜ್ಞಾನ ಹೊಂದುವುದು ಬಹಳ ಮುಖ್ಯವಾಗಿದೆ. ಜ್ಞಾನ ಎಂಬುದು ಅಕ್ಷಯ ಪಾತ್ರೆ ಇದ್ದಂತೆ. ಎಷ್ಟೇ ತಿಳಿದುಕೊಂಡರೂ ಮತ್ತಷ್ಟು ತಿಳಿಯಬೇಕು ಎಂಬ ಹಂಬಲ ಹೆಚ್ಚಾಗುತ್ತದೆ. ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಸಾಕಷ್ಟು ಬದಲಾವಣೆ ಆಗುತ್ತಿದ್ದು, ಅವುಗಳ ಬಗ್ಗೆ ತಿಳಿಯಬೇಕು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅನೇಕ ಸಾಹಿತಿಗಳು, ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಪ್ರತಿಯೊಬ್ಬರು ಸಮ್ಮೇಳನದಲ್ಲಿ ಭಾಗವಹಿಸಿ ಎಂದರು.

ಇದೇ ಸಂದರ್ಭದಲ್ಲಿ ಶಾಲಾ ಹಾಗೂ ಕಾಲೇಜಿಗೆ ಆಯೋಜಿಸಲಾಗಿದ್ದ ತಾಲೂಕು ಮಟ್ಟದಲ್ಲಿ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಚಾರ ಸಮಿತಿಯ ಇವೆಂಟ್ ಕಮಿಟಿ ಅಧ್ಯಕ್ಷ ಶಶಿಧರ್ ಸಬ್ಬನಹಳ್ಳಿ, ಕಸಾಪ ಗೌರವ ಕಾರ್ಯದರ್ಶಿಗಳಾದ ಡಾ ಹುಸ್ಕೂರು ಕೃಷ್ಣೆಗೌಡ, ಹರ್ಷ ಪಣ್ಣೆದೊಡ್ಡಿ, ಚಿಕ್ಕತಿಮ್ಮಯ್ಯ, ತಾಲೂಕು ಅಧ್ಯಕ್ಷ ಚಂದ್ರಲಿಂಗು, ಸಂಘಟನೆ ಕಾರ್ಯದರ್ಶಿ ಭಾಸ್ಕರ್, ಧನಂಜಯ ದರಸಗುಪ್ಪೆ, ಶಂಭು ಕಬ್ಬನಳ್ಳಿ, ಮಂಚಶೆಟ್ಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹೆಜ್ಜೇನು ದಾಳಿಗೆ ರೈತ ಬಲಿ

ಮಳವಳ್ಳಿ, ಡಿ.16– ಹೆಜ್ಜೇನು ದಾಳಿಗೆ ರೈತ ಬಲಿಯಾದ ಘಟನೆ ಮಳವಳ್ಳಿ ತಾಲೂಕು ಕಂದೇಗಾಲ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿಂಗೇಗೌಡ(50) ಇಂದು ಬೆಳಿಗ್ಗೆ 9.30ರ ಸುಮಾರಿನಲ್ಲಿ ಹಿಪ್ಪನೇರಳೆ ಸೊಪ್ಪು ಕೀಳಲು ಜಮೀನಿಗೆ ತೆರಳಿದ್ದ ವೇಳೆ ಈ ಅವಘಡ ಸಂಭವಿಸಿದ್ದು, ಅವರು ಹಿಪ್ಪನೇರಳೆ ಸೊಪ್ಪು ಕೀಳುತ್ತಿದ್ದ ವೇಳೆ ಪಕ್ಕದ ಮರದಲ್ಲಿದ್ದ ಹೆಜ್ಜೇನುಗಳು ಏಕಾಏಕಿ ದಾಳಿ ಮಾಡಿವೆ. ಹೆಜ್ಜೇನಿನಿಂದ ತಪ್ಪಿಸಿಕೊಂಡು ಓಡಿದರೂ ಬಿಡದೆ ಮುತ್ತಿಕೊಂಡು ಕಚ್ಚಿದ ಪರಿಣಾಮ ನಿಂಗೇಗೌಡ ಸ್ಥಳದಲ್ಲೇ ಮೃತಪಟ್ಟರೆಂದು ಹೇಳಲಾಗಿದೆ.

ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಬಸವರಾಜು ಎಂಬ ರೈತನ ಮೇಲೆ ಸಹ ಹೆಜ್ಜೇನುಗಳು ದಾಳಿ ಮಾಡಿದ ಪರಿಣಾಮ ಆತ ತೀವ್ರವಾಗಿ ಗಾಯಗೊಂಡಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸರಿಗೆ ದೂರು ನೀಡಲಾಗಿದೆ.

10.20 ಕೋಟಿ ವೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಾಣಕ್ಕೆ ಶಾಸಕ ಹೆಚ್.ಟಿ.ಮಂಜು ಗುದ್ದಲಿ ಪೂಜೆ



ಕೋಲ್ಡ್ ಸ್ಟೋರೇಜ್ ಘಟಕದ ನಿರ್ಮಾಣಕ್ಕೆ ತಾಲೂಕಿನ ಮರುಕನಹಳ್ಳಿ ತೋಟಗಾರಿಕಾ ಫಾರಂನಲ್ಲಿ ಶಾಸಕ ಹೆಚ್.ಟಿ.ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ,ಡಿ.16– ತಾಲೂಕಿನ ರೈತರ ಬಹುಕಾಲದ ಬೇಡಿಕೆಯಾದ ಕೋಲ್ಡ್ ಸ್ಟೋರೇಜ್ ಘಟಕದ ನಿರ್ಮಾಣಕ್ಕೆ ತಾಲೂಕಿನ ಮರುಕನಹಳ್ಳಿ ತೋಟಗಾರಿಕಾ ಫಾರಂನಲ್ಲಿ ಶಾಸಕ ಹೆಚ್.ಟಿ.ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಕೆ.ಆರ್.ಪೇಟೆ ತಾಲೂಕಿನ ರೈತರು ಬೆಳೆಯುವ ಪ್ರಮುಖ ಬೆಳೆಗಳಾದ ಸೇವಂತಿಗೆ ಹೂವು, ಶುಂಠಿ, ಹಣ್ಣು ಮತ್ತು ತರಕಾರಿ ಸೇರಿದಂತೆ ಅನೇಕ ರೈತರ ಕೃಷಿ ಉತ್ಪನ್ನಗಳಾಗಿವೆ, ಬೆಲೆ ಇಲ್ಲದಿದ್ದಾಗ ಈ ಕೃಷಿ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಬೇಕು ಅಥವಾ ಬೀದಿಗೆ ಚೆಲ್ಲಬೇಕು ಇಂತಹ ಪರಿಸ್ಥಿತಿ ಇದೆ. ಟೊಮ್ಯಾಟೊ, ಶುಂಠಿ, ಸೇವಂತಿಗೆ ಹೂವು, ಕಲ್ಲಂಗಡಿ, ಶೀಘ್ರವೇ ಕೆಟ್ಟು ಹೋಗುವುದರಿಂದ ಬೆಲೆ ಬಂದಾಗ ಮಾರಾಟ ಮಾಡುವವರೆವಿಗೂ ಈ ಕೋಲ್ಡ್ ಸ್ಟೋರೇಜ್ ಘಟಕದಲ್ಲಿ ಸಂಗ್ರಹಿಸಿಟ್ಟು ಬೆಲೆ ಜಾಸ್ತಿ ಆದಾಗ ಮಾರಾಟ ಮಾಡಲು ಇದರಿಂದ ಸಾಧ್ಯವಾಗುತ್ತದೆ. ಆದಷ್ಟು ಬೇಗ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಯನ್ನು ಮಾಡಬೇಕು. ಈ ಮೂಲಕ ತಾಲೂಕಿನ ರೈತರಿಗೆ ಕೋಲ್ಡ್ ಸ್ಟೋರೇಜಿನ ಉಪಯೋಗ ದೊರೆಯುವಂತಾಗಬೇಕು ಎಂದು ಶಾಸಕರು ತಿಳಿಸಿದರು.

ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಮಲ್ಲೇನಹಳ್ಳಿ ಮೋಹನ್, ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಲೋಕೇಶ್, ಕಿರಿಯ ಸಹಾಯಕ ನಿರ್ದೇಶಕ ಡಾ.ಆರ್.ಜಯರಾಂ, ಮುರುಕನಹಳ್ಳಿ ಗ್ರಾಪಂ ಅಧ್ಯಕ್ಷ ಹೆಚ್.ಜಿ.ಶೇಖರ್, ಉಪಾಧ್ಯಕ್ಷ ಪುನೀತ್, ಪಿಡಿಓ ಸಯ್ಯದ್ ಮುಜಾಕಿರ್, ಸದಸ್ಯರಾದ ದೇವರಾಜು, ಕುಮಾರಸ್ವಾಮಿ, ಕುಮಾರ್, ವೆಂಕಟರಾಮು, ಪೂರ್ಣಿಮಾ ಆನಂದ್, ಬಾಬು, ಮುಖಂಡರಾದ ಚಂದ್ರೇಶ್, ತಿಮ್ಮೇಗೌಡ, ಎಂ.ಎಲ್.ಶಿವಕುಮಾರ್, ಜಗದೀಶ್, ಗುತ್ತಿಗೆದಾರ ವಿಜಿತ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಸೇರಿದಂತೆ ನೂರಾರು ಮುಖಂಡರು ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ನಾಗಮಂಗಲ: ಮಾಗಡಿಯಿಂದ ಜಲಸೂರು ರಸ್ತೆವರೆಗೂ ರಸ್ತೆ ಅಗಲೀಕರಣ ಮಾಡುತ್ತಿರುವುದರಿಂದ ವಿದ್ಯುತ್ ಕಂಬಗಳನ್ನು ಸ್ಥಳಾಂತರ ಮಾಡಬೇಕಾಗಿರುವುದರಿಂದ ಡಿ.17ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6ವರೆಗೆ ಮಂಡ್ಯ ರಸ್ತೆ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಆದ್ದರಿಂದ ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ಹಿರಿಯರು ಕಟ್ಟಿಕೊಟ್ಟ ಮಾನವೀಯತೆ ಮೌಲ್ಯ ಅಳವಡಿಸಿಕೊಂಡರೆ ಬದುಕು ಸಾರ್ಥಕ

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಮತ



ಕಾರ್ಯಕ್ರಮದಲ್ಲಿ ಮಾತನಾಡಿದ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ

ಮಂಡ್ಯ,ಡಿ.16– ಹಿರಿಯರು ಕಟ್ಟಿಕೊಟ್ಟ ಮಾನವೀಯತೆ ಮೌಲ್ಯಗಳನ್ನು ನಾವು ಜೀವನದಲ್ಲಿ ಅಳವಡಿಸಿ ಮುಂದುವರೆದರೆ ನಮ್ಮ ಬದುಕು ಸಾರ್ಥಕ ಆಗುವುದು ಮಾತ್ರವಲ್ಲ, ಸಮಾಜ ಹಾಗೂ ದೇಶದಲ್ಲಿ ಶಾಂತಿ ಸೌಹಾರ್ದತೆ ನೆಲೆಸುತ್ತದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯ ಮೂರ್ತಿ ಸಂತೋಷ್ ಹೆಗ್ಡೆ ತಿಳಿಸಿದರು.

ತಾಲೂಕಿನ ಸಿದ್ದಯ್ಯನಕೊಪ್ಪಲು ಗೇಟ್ ಹತ್ತಿರವಿರುವ ಕಾವೇರಿ ತಾಂತ್ರಿಕ ಮಹಾವಿದ್ಯಾಲಯದ ದಶಮಾನೋತ್ಸವ ಸಂಭ್ರಮದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯಗಳಿಗೆ ವ್ಯಕ್ತಿಗಳು ಕಾರಣರಲ್ಲ. ಇದಕ್ಕೆಲ್ಲ ಸಮಾಜವೇ ಕಾರಣ. ಹಿಂದೆ ಒಳ್ಳೆಯದು ಮಾಡಿದವರನ್ನು ಗುರುತಿಸಿ ಸನ್ಮಾನಿಸುವ ಹಾಗೂ ತಪ್ಪು ಮಾಡಿದವರನ್ನು ಬಹಿಷ್ಕರಿಸುವ ಸಮಾಜ ಇತ್ತು. ಆದರೆ ಈಗ ಸಮಾಜದ ಭಾವನೆಯಲ್ಲಿ ಬದಲಾವಣೆಯಾಗಿದೆ. ಶ್ರೀಮಂತಿಕೆ ಹಾಗೂ ಅಧಿಕಾರವನ್ನು ಪೂಜಿಸುವ ಸಮಾಜದಲ್ಲಿ ನಾವು ಇದ್ದೇವೆ ಎಂದು ವಿಷಾದಿಸಿದರು.

ಇಂದಿನ ಸಮಾಜದಲ್ಲಿ ತಂದೆ, ತಾಯಿಗಳಿಬ್ಬರೂ ಕೆಲಸಕ್ಕೆ ಹೋಗುತ್ತಾರೆ, ಸದಾ ಕೆಲಸದ ಒತ್ತಡದಲ್ಲಿರುತ್ತಾರೆ. ಮಕ್ಕಳಲ್ಲಿ ಮಾತನಾಡಲೂ ಸಮಯವಿರುವುದಿಲ್ಲ. ಮಕ್ಕಳ ಕೈಯಲ್ಲಿ ಐಫೋನ್‌ಗಳಿರುತ್ತವೆ. ಮಕ್ಕಳು ದಾರಿ ತಪ್ಪುವ ಮೊದಲು ಪಾಲಕರು ದಿನದಲ್ಲಿ ಸ್ವಲ್ಪ ಸಮಯವಾದರೂ ಮಕ್ಕಳಿಗಾಗಿ ಕೊಡಿ ಎಂದರು.

ವಿದ್ಯಾರ್ಥಿಗಳಲ್ಲಿ ಶಾಂತಿ, ಸೌಹಾರ್ದತೆ ಇರಬೇಕಾದರೆ ಮಾನವೀಯತೆ ಇರಬೇಕು ದುರಾಸೆಗಳನ್ನು ತ್ಯಜಿಸಿ ಜೀವನದಲ್ಲಿ ತೃಪ್ತಿ, ಮಾನವೀಯ ಮೌಲ್ಯಗಳು ಹಾಗೂ ಶಾಂತಿ ಸಹಬಾಳ್ವೆ ಅಳವಡಿಸಿಕೊಂಡು ದೇಶದ ಪ್ರಗತಿಗೆ ಹೆಚ್ಚಿನ ಕೊಡುಗೆ ನೀಡಲು ಶ್ರಮಿಸಬೇಕು ಎಂದು ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ಮಹಾಸ್ವಾಮೀಜಿ ಮಾತನಾಡಿ, ಜಗತ್ತಿಗೆ ಬೇಕಾದ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಶೋಧನೆಗಳು ನಡೆಯಬೇಕು. ಅವು ರಾಷ್ಟ್ರದ ಬೆಳವಣಿಗೆಗೆ ಪೂರಕವಾಗಿರಬೇಕು. ಹೊಸ ಆವಿಷ್ಕಾರಗಳು ಯಾರಿಗೂ ಅಪಾಯವನ್ನುಂಟು ಮಾಡದೆ ಒಳಿತನ್ನು ಉಂಟು ಮಾಡುವಂತಿದ್ದರೆ ಅವು ಸಾರ್ಥಕತೆ ಪಡೆದುಕೊಳ್ಳುತ್ತವೆ ಎಂದು ಹೇಳಿದರು.

ಸಿಇಆರ್‌ಟಿ ಕಾರ್ಯದರ್ಶಿ ಪ್ರೊ.ಟಿ. ನಾಗೇಂದ್ರ ಮಾತನಾಡಿ, ಕಾವೇರಿ ಎಜುಕೇಶನ್ ಅಂಡ್ ರಿಸರ್ಚ್ ಟ್ರಸ್ಟ್‌ನ್ನು 2010ರಲ್ಲಿ ಸೈನ್ಸ್ ಹಾಗೂ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರುಗಳಿಂದ ಗ್ರಾಮೀಣ ಭಾಗದ ಮಕ್ಕಳಿಗೆ ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣವನ್ನು ತಲುಪಿಸುವ ಸದುದ್ದೇಶದಿಂದ ಪ್ರಾರಂಭಿಸಲಾಯಿತು ಎಂದು ಹೇಳಿದರು.

ವಿದ್ಯಾರ್ಥಿಗಳನ್ನು ಸಂಶೋಧನೆ ಕಡೆ ಗಮನ ಸೆಳೆಯುವುದು, ಪ್ರಯೋಗಗಳನ್ನು ಮಾಡಿಸುವುದು. ಒಂದು ದೇಶದ ಅಭಿವೃದ್ಧಿಗೆ ವಿಜ್ಞಾನ ತಂತ್ರಜ್ಞಾನ, ಸಂಶೋಧನೆ ಮುಖ್ಯ ಕಾರಣ ಎಂದು ಹೇಳಿದರು.

ಕೊಮ್ಮೇರಹಳ್ಳಿ ಆದಿಚುಂಚನಗಿರಿ ಶಾಖಾ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮ ನಂದನಾಥಸ್ವಾಮಿ, ಸಿಇಆರ್‌ಟಿ ಅಧ್ಯಕ್ಷ ಡಾ.ಹೆಚ್.ಪಿ.ರಾಜು, ಆಡಳಿತ ಮಂಡಳಿಯ ನಿರ್ದೇಶಕರಾದ ಡಿ.ಕೃಷ್ಣೇಗೌಡ, ಗಂಗಾಧರ್‌ಗೌಡ, ಕೆ.ಎಸ್.ಶಿವಕುಮಾರ್, ಕೆ.ಟಿ.ಶ್ರೀಧರ್, ಕೆ.ಮಲ್ಲಿಕಾರ್ಜುನ, ಬಿ.ಎಂ.ತಮ್ಮಣ್ಣ, ಶ್ರೀಕಂಠಪ್ಪ, ಶಶಿಧರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರು ವಿಭಾಗೀಯ ಮಟ್ಟದ ಕಬಡ್ಡಿ ಪಂದ್ಯಾವಳಿ



ಮೈಸೂರು ವಿಭಾಗಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಕ್ರೀಡಾಪಟುಗಳಿಗೆ ಶುಭಕೋರಿದರು.

ಪಾಂಡವಪುರ, ಡಿ.16– ಕಬಡ್ಡಿ, ಖೋ–ಖೋ ಸೇರಿದಂತೆ ಗ್ರಾಮೀಣ ಕ್ರೀಡಾಕೂಟಗಳನ್ನು ಹೆಚ್ಚಿನ ಮಟ್ಟದಲ್ಲಿ ಆಯೋಜನೆ ಮಾಡುವ ಮೂಲಕ ಪ್ರೋತ್ಸಾಹಿಸಿ ಬೆಳೆಸಬೇಕಾದ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಹೇಳಿದರು.

ತಾಲೂಕಿನ ಹಿರೇಮರಳಿ ಗ್ರಾಮದಲ್ಲಿ ಸರಕಾರಿ ಪ್ರೌಢಶಾಲೆಯಲ್ಲಿ ಶ್ರೀವೀರಭದ್ರೇಶ್ವರ ಕ್ರೀಡಾ ಸಮಿತಿ ವತಿಯಿಂದ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಯಲ್ಲಿ ಕ್ರೀಡಾಪಟುಗಳಿಗೆ ಶುಭಾಶಯ ತಿಳಿಸಿ ಮಾತನಾಡಿದರು.

ಕಬಡ್ಡಿ ಕ್ರೀಡೆ ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಪ್ರಖ್ಯಾತಿಗಳಿಸಿದೆ. ಕಬಡ್ಡಿ ಮೂಲ ನೆಲೆಯ ಮಂಡ್ಯ ಜಿಲ್ಲೆಯಾಗಿದ್ದು, ಇದೀಗ ಕಬ್ಬಡಿ ಕ್ರೀಡೆ ರಾಷ್ಟ್ರ, ಅಂತರರಾಷ್ಟ್ರಮಟ್ಟದಲ್ಲಿ ಪ್ರಖ್ಯಾತಿ ಗಳಿಸಿದೆ. ಇಂತಹ ಕ್ರೀಡೆಗಳನ್ನು ಪೋಷಣೆ ಮಾಡುವುದು ನಮ್ಮಗಳ ಜವಾಬ್ದಾರಿಯಾಗಿದೆ. ಯುವಕ–ಯುವತಿಯರನ್ನು ಹೆಚ್ಚಿನ ಮಟ್ಟದಲ್ಲಿ ಇಂತಹ ಕ್ರೀಡೆಗಳಲ್ಲಿ ಭಾಗವಹಿಸುವ ಕೆಲಸ ಮಾಡಬೇಕು, ಹಾಗಾಗಿಯೇ ಕ್ರೀಡೆಗಳನ್ನು ಆಯೋಜನೆ ಮಾಡುವ ಮೂಲಕ ದೊಡ್ಡಮಟ್ಟದಲ್ಲಿ ಬೆಳೆಸಿ ನಮ್ಮ ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ನೀಡಬೇಕಾಗಿದೆ ಎಂದು ತಿಳಿಸಿದರು.

ಮೈಸೂರು ವಿಭಾಗಮಟ್ಟದ ಹೊನಲು ಬೆಳಕಿನ ಕ್ರೀಡಾಕೂಟದಲ್ಲಿ ನಾನಾ ಭಾಗದಿಂದ ಹಲವಾರು ಕ್ರೀಡಾಪಟುಗಳು ಭಾಗವಹಿಸಿದ್ದೀರ, ಎಲ್ಲರು ಸೋಲು–ಗೆಲುವು ಎರಡನ್ನು ಸಮಾನವಾಗಿ ಸ್ವೀಕರಿಸಬೇಕು, ಯಾವುದೇ ಗಲಾಟೆ, ಗದ್ದಲಗಳು ಸಂಭವಿಸದಂತೆ ಕ್ರೀಡಾ ಸ್ಫೂರ್ತಿಯಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಶ್ರೀವೀರಭದ್ರೇಶ್ವರ ಕ್ರೀಡಾ ಸಮಿತಿ ವತಿಯಿಂದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಅವರನ್ನು ಅಭಿನಂದಿಸಲಾಯಿತು.

ವಿಜೇತರ ವಿವರ: ಕ್ರೀಡಾಕೂಟದಲ್ಲಿ ಸುಮಾರು 40ಕ್ಕೂ ಅಧಿಕ ತಂಡಗಳು ಪಾಲ್ಗೊಂಡಿದ್ದವು. ಅಂತಿಮವಾಗಿ ಹಿರೇಮರಳಿ ಗ್ರಾಮದ ಶ್ರೀವೀರಭದ್ರೇಶ್ವರ ಎ ತಂಡ ಪ್ರಥಮ ಸ್ಥಾನಗಳಿಸಿ 7 ಸಾವಿರ ನಗದು ಹಾಗೂ ಟ್ರೋಫಿ ತನ್ನದಾಗಿಸಿಕೊಂಡಿತು. ಸಾತನೂರು ತಂಡ ದ್ವಿತೀಯ ಸ್ಥಾನ ಪಡೆದು 5 ಸಾವಿರ ನಗದು ಟ್ರೋಫಿ, ವೀರಭದ್ರೇಶ್ವರ ಬಿ ತಂಡ ತೃತೀಯ ಹಾಗೂ ಕ್ಯಾತನಹಳ್ಳಿ ತಂಡಕ್ಕೆ ನಾಲ್ಕನೇ ಸ್ಥಾನಪಡೆದ ಎರಡು ತಂಡಕ್ಕೂ ತಲಾ 2500 ನಗದು ಟ್ರೋಪಿ ನೀಡಲಾಯಿತು.

ಬೆಸ್ಟ್ ರೈಡರ್‌ರಾಗಿ ಸಾತನೂರು ಶರತ್, ಬೆಸ್ಟ್ ಆಲ್‌ರೌಂಡರ್‌ರಾಗಿ ಹಿರೇಮರಳಿ ನಿಶಾಂತ್ ಹಾಗೂ ಉತ್ತಮ ಕ್ಯಾಚರ್ ಮಂಜು ಹಿರೇಮರಳಿ ಅವರಿಗೆ ಬಹುಮಾನ ನೀಡಲಾಯಿತು.

ಸಮಾರಂಭದಲ್ಲಿ ಶ್ರೀವೀರಭದ್ರೇಶ್ವರ ಕ್ರೀಡಾ ಸಮಿತಿ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಗ್ರಾಮದ ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಮೈಸೂರು ಮಿತ್ರ ಮಂಗಳವಾರ 17 ಡಿಸೆಂಬರ್ 2024

ಕೇಂದ್ರ ಸಚಿವ ಕುಮಾರಸ್ವಾಮಿಗೆ ಉಪರಾಷ್ಟ್ರಪತಿ ಧನಕರ್, ಪ್ರಧಾನಿ ಮೋದಿ, ಸ್ಪೀಕರ್ ಓಂ ಬಿರ್ಲಾ, ಗೃಹ ಸಚಿವ ಅಮಿತ್ ಷಾ, ಇತರರಿಂದ ಹುಟ್ಟುಹಬ್ಬದ ಶುಭ ಹಾರೈಕೆ



ನವದೆಹಲಿ, ಡಿ.16 (ಕೆಎಂಶಿ)– ಸೋಮವಾರ 66ನೇ ವರ್ಷಕ್ಕೆ ಕಾಲಿಟ್ಟ ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಗೃಹ ಸಚಿವ ಅಮಿತ್ ಷಾ ಸೇರಿದಂತೆ ರಾಷ್ಟ್ರದ ಅನೇಕ ಗಣ್ಯರು ಶುಭಾಶಯ ಕೋರಿದ್ದಾರೆ.

ಉಪರಾಷ್ಟ್ರಪತಿ ಜಗದೀಪ್ ಧನಕರ್ ಬೆಳಗ್ಗೆ ಸಚಿವರಿಗೆ ದೂರವಾಣಿ ಕರೆ ಮಾಡಿ ಶುಭ ಕೋರಿದರು. ಈ ವೇಳೆ ಸಚಿವರು, ಉಪರಾಷ್ಟ್ರಪತಿಗಳಿಗೆ ಧನ್ಯವಾದ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರವೇ ಸಚಿವರಿಗೆ ಜನ್ಮದಿನ ಶುಭಾಶಯ ಪತ್ರ ಕಳಿಸಿ ಶುಭ ಕೋರಿದ್ದರು. ಸೋಮವಾರ ಬೆಳಗ್ಗೆಯೂ ಪ್ರಧಾನಿಗಳು ಸಚಿವರಿಗೆ ಶುಭ ಕೋರಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಶಿವರಾಜ್ ಸಿಂಗ್ ಚೌಹಾಣ್, ಪ್ರಹ್ಲಾದ್ ಜೋಶಿ, ಗಜೇಂದ್ರ ಸಿಂಗ್ ಶೆಖಾವತ್, ಜೋಲ್ ಒರಂ, ಡಾ. ವೀರೇಂದ್ರಕುಮಾರ್, ಶರ್ಬಾನಂದ ಸೋನಾವಾಲ್, ರಾಮ್ ಮೋಹನ್ ನಾಯ್ಡು, ಮನೋಹರ್‌ಲಾಲ್, ಧರ್ಮೇಂದ್ರ ಪ್ರಧಾನ್, ಪಿಯೂಷ್ ಗೋಯಲ್, ಡಾ.ಎಸ್.ಜೈಶಂಕರ್, ಕೇಂದ್ರದ ರಾಜ್ಯ ಸಚಿವರಾದ ವಿ.ಸೋಮಣ್ಣ, ಶ್ರೀನಿವಾಸ ಭೂಪತಿ ರಾಜು ವರ್ಮ, ಕಿಶನ್ ರೆಡ್ಡಿ ಅವರು ಕುಮಾರಸ್ವಾಮಿಗೆ ಶುಭ ಕೋರಿದ್ದಾರೆ.

ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾಸ್ ಶರ್ಮ, ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಕುಮಾರಸ್ವಾಮಿ ಅವರಿಗೆ ಶುಭ ಹಾರೈಸಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಪ್ರತಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಡಾ.ಕೆ.ಸುಧಾಕರ್, ಸಂಸದ ಬಿ.ವೈ.ರಾಘವೇಂದ್ರ, ತೇಜಸ್ವಿ ಸೂರ್ಯ, ಸಚಿವ ಎಂ.ಬಿ.ಪಾಟೀಲ್ ಸೇರಿದಂತೆ ಅನೇಕರು ಸಚಿವರಿಗೆ ಜನ್ಮದಿನದ ಶುಭಾಶಯ ಕೋರಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ, "ನನ್ನ ಪುತ್ರ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಜನ್ಮದಿನದ ಪ್ರೀತಿಪೂರ್ವಕ ಶುಭಾಶಯಗಳು, ಭಗವಂತ ನಿಮಗೆ ಇನ್ನೂ ಹೆಚ್ಚಿನ ಆಯುರಾರೋಗ್ಯ, ಕರುಣಿಸಿ ಇನ್ನಷ್ಟು ದೀರ್ಘಕಾಲ ಜನಸೇವೆ ಮಾಡುವ ಶಕ್ತಿ, ಚೈತನ್ಯ ನೀಡಲಿ ಎಂದು ಹಾರೈಸುತ್ತೇನೆ ಎಂದು ತಿಳಿಸಿದ್ದಾರೆ.

ಸೋಮವಾರ ಬೆಳಗ್ಗೆ ಕುಮಾರಸ್ವಾಮಿ ಅವರು ನವದೆಹಲಿಯಲ್ಲಿ ಶಿವ ದೇವಾಲಯಕ್ಕೆ ತೆರಳಿ ಅಭಿಷೇಕ, ಪೂಜೆಯಲ್ಲಿ ಪಾಲ್ಗೊಂಡರು. ನಂತರ ರಾಷ್ಟ್ರೀಯ ವಿಶೇಷಚೇತನ ಮಕ್ಕಳ ಶಾಲೆಗೆ ತೆರಳಿ ಮಕ್ಕಳ ಜತೆ ತಮ್ಮ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಿಕೊಂಡರು. ಈ ಸಂದರ್ಭದಲ್ಲಿ ಸಚಿವರು ಮಕ್ಕಳಿಗೆ ಸ್ವೆಟರ್ ಹಾಗೂ ಸಿಹಿ ಹಂಚಿ ಕೆಲ ಸಮಯ ಅಲ್ಲಿಯೇ ಕಳೆದರು.

ಸೈನಸೈಟಿಸ್ ಉಚಿತ ತಪಾಸಣಾ ಶಿಬಿರ

ಮೈಸೂರು, ಡಿ.16– ಮೈಸೂರಿನ ಸುಯೋಗ್ ಆಸ್ಪತ್ರೆ ವತಿಯಿಂದ ಡಿ.21ರವರೆಗೆ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಸೈನಸೈಟಿಸ್ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಮೂಗು ಸೋರುವಿಕೆ, ನೆಗಡಿ, ತಲೆಭಾರ, ತಲೆನೋವು, ಗಂಟಲುಕೆರೆತ, ಗಂಟಲುನೋವು ಮುಂತಾದ ಸಮಸ್ಯೆಗಳಿರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ಉಪಯೋಗ ಪಡೆದುಕೊಳ್ಳಬಹುದು. ಮಾಹಿತಿಗೆ 0821–2566966, 9986399862 ಸಂಪರ್ಕಿಸಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಕನ್ನಡದ ಪರಿಸರ ಪ್ರೇಮಿ; ಪದ್ಮಶ್ರೀ ಪುರಸ್ಕೃತೆ ತುಳಸಿ ಗೌಡ ಇನ್ನಿಲ್ಲ




ಉತ್ತರಕನ್ನಡ (ಡಿ.16): ಭಾರತದಲ್ಲಿ ಸಾಲು ಮರದ ತಿಮ್ಮಕ್ಕ ಅವರಂತೆಯೇ ಪರಿಸರ ಪ್ರೇಮಿ ಎಂದೇ ಖ್ಯಾತರಾಗಿರುವ ಕನ್ನಡ ನಾಡಿನ ತುಳಸಿ ಗೌಡ ಅವರು ಸ್ವಗೃಹದಲ್ಲಿ ಸೋಮವಾರ ನಿಧನರಾಗಿದ್ದಾರೆ.

ಭಾರತದ ಪರಿಸರ ಪ್ರೇಮಿ, ಪದ್ಮಶ್ರೀ ಪುರಸ್ಕೃತೆ ತುಳಸಿಗೌಡ (86) ಅವರು ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದು, ಇಂದು ಸಂಜೆ ವೇಳೆ ನಿಧನರಾಗಿದ್ದಾರೆ ಎಂದು ತಿಳಿದುಬಂದಿದೆ. ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹೊನ್ನಳ್ಳಿ ಗ್ರಾಮದ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ. ಇವರು ತಮ್ಮ ಜೀವಿತಾವಧಿಯಲ್ಲಿ ವರ್ಷಕ್ಕೆ 30 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಬೆಳಸಿ ಪರಿಸರ ಪ್ರೇಮಿ ಎಂದೇ ಖ್ಯಾತವಾಗಿದ್ದರು.


ಕಳೆದ 14 ವರ್ಷಕ್ಕೂ ಹೆಚ್ಚು ಕಾಲ ಗಿಡ ನೆಟ್ಟು ಬೆಳೆಸುವ ಕಾಯಕದಲ್ಲಿ ತೊಡಗಿದ್ದರು. ಮನೆಯಲ್ಲಿ ತೀರಾ ಬಡತನವಿದ್ದೂ ಕುಟುಂಬಕ್ಕಾಗಿ ಕೂಲಿ ಕೆಲಸವನ್ನು ಮಾಡುತ್ತಲೇ ಹಸಿರು ಕ್ರಾಂತಿ ಮಾಡಿದ್ದ ಪರಿಸರ ಪ್ರೇಮಿ ತುಳಸಿಗೌಡ ಅವರ ಪರಿಸರ ಪ್ರೇಮವನ್ನು ಮೆಚ್ಚಿ ಭಾರತ ಸರ್ಕಾದರದಿಂದ ಕೊಡಮಾಡುವ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿತ್ತು. ಹಿಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವಿಕರಿಸಿದ್ದರು. ಸುಬ್ರಾಯ ಮತ್ತು ಸೋನಿ ಎಂಬ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಕೆ.ಪಿ.ನಾಗರಾಜು



ಕೆ.ಆರ್.ಪೇಟೆ,ಡಿ.16– ಪಟ್ಟಣದ ಜಯನಗರ ಬಡಾವಣೆಯ ನಿವಾಸಿ, ನಿವೃತ್ತ ಮುಖ್ಯ ಶಿಕ್ಷಕ ಕೆ.ಪಿ.ನಾಗರಾಜು(67) ಸೋಮವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಹೊಸಹೊಳಲು ಕೆರೆ ಸಮೀಪದ ರುದ್ರಭೂಮಿಯಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎ.ಬಿ.ಸುಬ್ಬೇಗೌಡ



ಕೆ.ಆರ್.ಪೇಟೆ, ಡಿ.16– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ನಿವಾಸಿ, ನಿವೃತ್ತ ಗ್ರಾಮ ಲೆಕ್ಕಾಧಿಕಾರಿ ಎ.ಬಿ. ಸುಬ್ಬೇಗೌಡ(90) ಅವರು ಸೋಮವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಮಂಗಳವಾರ ಮಧ್ಯಾಹ್ನ 1ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಅರಮನೆಗೆ ಅನಿಲ್ ಕುಂಬ್ಳೆ ಕುಟುಂಬ ಭೇಟಿ





ಅಂತರರಾಷ್ಟ್ರೀಯ ಮಾಜಿ ಕ್ರಿಕೆಟ್ ತಾರೆ ಅನಿಲ್ ಕುಂಬ್ಳೆ (ಮಧ್ಯದಲ್ಲಿರುವವರು) ಪತ್ನಿ ಚೇತನಾ ರಾಮತೀರ್ಥ, ಪುತ್ರಿಯರಾದ ಸ್ವಸ್ತಿ ಕುಂಬ್ಳೆ ಮತ್ತು ಆರುಣಿ ಕುಂಬ್ಳೆ ಅವರೊಂದಿಗೆ ಸೋಮವಾರ ಮೈಸೂರು ಅರಮನೆಗೆ ಭೇಟಿ ನೀಡಿದ್ದರು. ಚೆನ್ನೈನ ಯುಎಸ್ ಕಾನ್ಸುಲೇಟರ್ ಜನರಲ್‌ನ ಪಬ್ಲಿಕ್ ಅಫೇರ್ ಅಧಿಕಾರಿ ಜಾನೆ ಬ್ರಿಗಂಟಿ ಅವರು ಪಬ್ಲಿಕ್ ಎಂಗೇಜ್‌ಮೆಂಟ್ ತಜ್ಞೆ ರತ್ನ ಮುಖರ್ಜಿ ಸಹ ಅರಮನೆಗೆ ಭೇಟಿ ನೀಡಿದ್ದರು (ಬಲಚಿತ್ರ). ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು, ಅತಿಥಿಗಳನ್ನು ಅಭಿನಂದಿಸಿದರು.

ಮೈಸೂರು,ಡಿ.16(ಆರ್‌ಕೆ)– ಅಂತರರಾಷ್ಟ್ರೀಯ ಮಾಜಿ ಕ್ರಿಕೆಟ್ ತಾರೆ ಅನಿಲ್ ಕುಂಬ್ಳೆ ಅವರು ಪತ್ನಿ ಚೇತನಾ ರಾಮತೀರ್ಥ, ಪುತ್ರಿಯರಾದ ಸ್ವಸ್ತಿ ಕುಂಬ್ಳೆ ಮತ್ತು ಆರುಣಿ ಕುಂಬ್ಳೆ ಅವರೊಂದಿಗೆ ಸೋಮವಾರ ಮೈಸೂರು ಅರಮನೆಗೆ ಭೇಟಿ ನೀಡಿದ್ದರು.

ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಅವರು ಅನಿಲ್ ಕುಂಬ್ಳೆ ಕುಟುಂಬವನ್ನು ಆತ್ಮೀಯವಾಗಿ ಬರಮಾಡಿಕೊಂಡು ಅವರಿಗೆ ಅರಮನೆ ವೀಕ್ಷಿಸಲು ವ್ಯವಸ್ಥೆ ಮಾಡಿದರು. ಕಲ್ಯಾಣ ಮಂಟಪ, ಪಬ್ಲಿಕ್ ದರ್ಬಾರ್ ಹಾಲ್, ಖಾಸಗಿ ದರ್ಬಾರ್ ಹಾಲ್, ಅರಮನೆ ಮುಂದಿನ ಉದ್ಯಾನವನಗಳ ಕಂಡು ಅವರು ನಿಬ್ಬೆರಗಾದರು.

ನಂತರ ಅನಿಲ್ ಕುಂಬ್ಳೆ ಅವರು ಅರಮನೆ ಬಗ್ಗೆ 'Pride of karnataka! thank you for the tour of the palace' ಎಂದು ತಮ್ಮ ಅನಿಸಿಕೆಯನ್ನು ರಿಜಿಸ್ಟರ್‌ನಲ್ಲಿ ನಮೂದಿಸಿದರು. ಇದೇ ವೇಳೆ ಈ ಭವ್ಯ ಸ್ಮಾರಕವನ್ನು ಸಂರಕ್ಷಿಸಿರುವ ಅರಮನೆ ಆಡಳಿತ ಮಂಡಳಿಯ ಕಾರ್ಯವೈಖರಿ ಬಗ್ಗೆಯೂ ಪ್ರಶಂಸಿಸಿ ಅವರು ಕನ್ನಡದಲ್ಲಿ ದಾಖಲಿಸಿದರು. ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಜಯಲಕ್ಷ್ಮಿ ಮ್ಯಾನ್ಷನ್‌ನ ಜಾನಪದ ಸಂಗ್ರಹಾಲಯದ ಸಂರಕ್ಷಣಾ ಕಾಮಗಾರಿಯನ್ನು ವೀಕ್ಷಿಸಲೆಂದು ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ವೇಳೆ ಚೆನ್ನೈನ ಯುಎಸ್ ಕಾನ್ಸುಲೇಟರ್ ಜನರಲ್‌ನ ಪಬ್ಲಿಕ್ ಅಫೇರ್ ಅಧಿಕಾರಿ ಜಾನೆ ಬ್ರಿಗಂಟಿ ಅವರು ಪಬ್ಲಿಕ್ ಎಂಗೇಜ್‌ಮೆಂಟ್ ತಜ್ಞೆ ರತ್ನ ಮುಖರ್ಜಿ ಅವರೊಂದಿಗೆ ಮೈಸೂರು ಅರಮನೆಗೆ ಭೇಟಿ ನೀಡಿ, ವೀಕ್ಷಿಸಿದರು.

ಪಡುವಾರಹಳ್ಳಿಯಲ್ಲಿ ಹನುಮ ಜಯಂತಿ ಅಂಗವಾಗಿ ಗಾಯನ ಸ್ಪರ್ಧೆ: ರಾಯಚೂರಿನ ಅದ್ವೈತ್ ಪ್ರಥಮ



ಪಡುವಾರಹಳ್ಳಿ ಹನುಮ ಜಯಂತಿ ಅಂಗವಾಗಿ ನಡೆದ ಗಾಯನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು,ಡಿ.16–ನಗರದ ಪಡುವಾರಹಳ್ಳಿ 4ನೇ ಮುಖ್ಯ ರಸ್ತೆಯ ಶ್ರೀ ವಿದ್ಯಾಗಣಪತಿ ಮತ್ತು ಮಾರುತಿ ಶ್ರೀ ಯುವಕರ ಸಂಘದ ವತಿಯಿಂದ 57ನೇ ವರ್ಷದ ಶ್ರೀ ಹನುಮ ಜಯಂತಿಯ ಪೂಜಾ ಮಹೋತ್ಸವ ಅಂಗವಾಗಿ ಗೀತ ಗಾಯನ ಸ್ಪರ್ಧೆ ಏರ್ಪಡಿಸಲಾಗಿತ್ತು.

ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ನಡೆದ ಸ್ಪರ್ಧೆಯಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಬೆಂಗಳೂರು, ಆನೇಕಲ್, ಹಾಸನ, ಶಿವಮೊಗ್ಗ, ತುಮಕೂರು, ರಾಯಚೂರು ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ 75 ಗಾಯಕರು ಪಾಲ್ಗೊಂಡಿದ್ದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಹನುಮ ಜಯಂತಿ ಅಂಗವಾಗಿ ಗೀತ ಗಾಯನ ಸ್ಪರ್ಧೆ ಏರ್ಪಡಿಸಿ ಪ್ರತಿಭಾ ಅನಾವರಣಕ್ಕೆ ವೇದಿಕೆ ಒದಗಿಸಿರುವುದು ಉತ್ತಮ ಕಾರ್ಯ ಎಂದರು.

ಸಂಘದವರು ಕಳೆದ 57 ವರ್ಷಗಳಿಂದ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಾ ಕಲಾ ಸೇವೆ ಮಾಡುವುದರ ಜೊತೆಗೆ ದೇವರ ಸೇವೆ ಮತ್ತು ಜನಸೇವೆಯನ್ನು ಮಾಡುತ್ತಿದ್ದಾರೆ. ಹೀಗೆ ಮುಂದುವರೆದುಕೊಂಡು ಹೋಗಲಿ ಎಂದರು.

ಬಿಜೆಪಿ ಮುಖಂಡ ವಿ.ಕವೀಶ್‌ಗೌಡ, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ ಪುತ್ರ ಕಿಷನ್ ಗೌಡ, ಪಡುವಾರಹಳ್ಳಿ ಯಜಮಾನರಾದ ರಾಮಣ್ಣ, ಹಿರಿಯ ರಂಗಭೂಮಿ ಕಲಾವಿದ ಕೆರೆಹಳ್ಳಿ ಬಿ.ದೊರೆಸ್ವಾಮಿ, ಸಂಘದ ಅಧ್ಯಕ್ಷ ಕೃಷ್ಣಪ್ಪ, ಸಮಾಜ ಸೇವಕ ಪಡುವಾರಹಳ್ಳಿ ಮಂಜುನಾಥ್, ಬಿಜೆಪಿ ಯುವ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಸಮಾಜ ಸೇವಕರಾದ ಸಿದ್ದರಾಜು, ಭೈರಪ್ಪ, ಬಾಬು, ಯೋಗೇಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಕುಮಾರ್, ಶಿವು ಹಾಗೂ ಸ್ಪರ್ಧೆಯ ತೀರ್ಪುಗಾರರಾದ ಮೇಘ ಶ್ರೀ, ಮತ್ತು ಜಾಯ್ಸ್ ವೈಶಾಖ್, ಹೂಟಗಳ್ಳಿ ನಾಗರಾಜು, ಮೋಹನ್, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಮುಂತಾದವರು ಇದ್ದರು.


ಸ್ಪರ್ಧೆಯಲ್ಲಿ ವಿಜೇತರಾದ ರಾಯಚೂರಿನ ಅದ್ವೈತ್ ಜಾಂಬವಂಥ ಋಷಿ, ಪ್ರಥಮ ಬಹುಮಾನ ರೂ. 4000, ಸಂತೋಷ್ ಮೈಸೂರು, ದ್ವಿತೀಯ ಬಹುಮಾನ 3000, ಏಳುಮಲೆ ಸಾಗರ, ತೃತಿಯ ಬಹುಮಾನ ರೂ.2000, ಸವಿತಾ ಮಹದೇವಪುರ 4ನೇ ಬಹುಮಾನ ರೂ. 1000, ಕೆ.ವಿ.ಅಶೋಕ್ ಪಿರಿಯಾಪಟ್ಟಣ 5ನೇ ಬಹುಮಾನ, ನಿಧಿ 6ನೇ ಬಹುಮಾನ, ಯಶವಂತ್ ಪಡುವಾರಹಳ್ಳಿ 7ನೇ ಬಹುಮಾನ, ಮಂಜುಳಾ ಮೈಸೂರು 8ನೇ ಬಹುಮಾನ, ಎಸ್.ಬಾಲಕೃಷ್ಣ ಮೈಸೂರು 9ನೇ ಬಹುಮಾನ, ರಾಜೇಶ್ವರಿ ಮೈಸೂರು 10ನೇ ಬಹುಮಾನ ಪಡೆದವರು. 5ರಿಂದ 10ನೇ ಬಹುಮಾನ ಪಡೆದವರಿಗೆ ತಲಾ 500 ರೂ. ನಗದು ನೀಡಲಾಯಿತು. ಭಾಗವಹಿಸಿದ ಪ್ರತಿಯೊಬ್ಬರಿಗೂ ನೆನಪಿನ ಕಾಣಿಕೆ ಮತ್ತು ಅಬಿನಂದನಾ ಪತ್ರ ವಿತರಿಸಲಾಯಿತು.

ಹೆಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಆಚರಣೆ...



ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಹುಟ್ಟುಹಬ್ಬವನ್ನು ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದಿಂದ ಶ್ರೀ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಹಣ್ಣು, ಹಂಪಲು, ಉಪಾಹಾರ ವಿತರಿಸುವ ಮೂಲಕ ಆಚರಿಸಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ವರುಣ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಬಾಲಕೃಷ್ಣ, ಮಹೇಶ್ ಸಿದ್ದರಾಮನಹುಂಡಿ, ಕುಮಾರ್ ಬೀಡನಹಳ್ಳಿ, ಚಂದ್ರಶೇಖರ್, ನಾಗರಾಜು ಇನ್ನಿತರರಿದ್ದರು.

2025ರ ಕ್ಯಾಲೆಂಡರ್ ಬಿಡುಗಡೆ...



ಸಿದ್ಧಾರ್ಥನಗರ ವಿವಿಧೋದ್ದೇಶ ಸಹಕಾರ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಸಂಘದ ಅಧ್ಯಕ್ಷ ಎಸ್.ಪಿ.ಮಹೇಶ್ (ಪಾಪು), ಉಪಾಧ್ಯಕ್ಷ ಜಿ.ನಾಗರಾಜು, ನಿರ್ದೇಶಕರಾದ ರವೀಂದ್ರಕುಮಾರ್, ರಾಧಾಮಣಿ, ಅರುಣಾಕ್ಷಿ, ಮಲ್ಲರಾಜೇ ಅರಸ್, ಎಂ.ಸೋಮಶೇಖರ್ ಚಿನ್ನ, ನಾಗರಾಜು, ಶಿವಕುಮಾರ್, ಡಾ.ರಾಮಚಂದ್ರ, ಯೋಗೀಶ್, ಕಾರ್ಯದರ್ಶಿ ರಾಮಲಿಂಗೇಗೌಡ, ಕೃಷ್ಣೇಗೌಡ ಇದ್ದರು.

ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು ಶಿಕ್ಷಣದ ಗುರಿಯಾಗಬೇಕು



ಎಐಡಿಎಸ್‌ಓನ ರಾಜ್ಯ ಮಟ್ಟದ ಅಧ್ಯಯನ ಶಿಬಿರದಲ್ಲಿ ಪಾಲ್ಗೊಂಡು ಎಸ್‌ಯುಸಿಐ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಉಮಾ ಮಾತನಾಡುತ್ತಿರುವುದು.

ಮೈಸೂರು, ಡಿ.16(ಎಸ್‌ಪಿಎನ್)– ವಿದ್ಯಾರ್ಥಿಗಳು ಕೇವಲ ಓದುವುದಾಗಲಿ, ಪದಕಗಳನ್ನು ಗಳಿಸುವುದಾಗಲಿ ಜೀವನದ ಪರಮೋಚ್ಛ ಗುರಿಯಾಗದೆ, ಅನ್ಯಾಯದ ವಿರುದ್ಧ ದ್ವನಿ ಎತ್ತುವುದು ಶಿಕ್ಷಣದ ಗುರಿಯಾಗಬೇಕು ಎಂದು ಎಸ್‌ಯುಸಿಐ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಉಮಾ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ನೃಪತುಂಗ ಶಾಲೆಯಲ್ಲಿ ನಡೆದ ಎಐಡಿಎಸ್‌ಓನ ರಾಜ್ಯದ ಮಟ್ಟದ ಅಧ್ಯಯನ ಶಿಬಿರದ ಎರಡನೇ ದಿನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ದೇಶದ ಪ್ರಗತಿಯಲ್ಲಿ ವಿವಿಧ ಕ್ಷೇತ್ರದಲ್ಲಿ ಕೊಡುಗೆ ನೀಡಿರುವ ಶರತ್ ಚಂದ್ರ, ಚಿತ್ತರಂಜನ್ ದಾಸ್, ರವೀಂದ್ರಾನಾಥ ಟ್ಯಾಗೋರ್ ಹಾಗೂ ನೇತಾಜಿ ಸುಭಾಷ್‌ಚಂದ್ರ ಬೋಸ್ ಹೀಗೆ ಮುಂತಾದ ಮಹಾನ್ ವ್ಯಕ್ತಿಗಳು ಹೇಳಿದಂತೆ ಕೇವಲ ಓದುವುದಾಗಲಿ, ಪದಕಗಳನ್ನು ಪಡೆದು ಕೊಳ್ಳುವುದಾಗಲಿ ವಿದ್ಯಾರ್ಥಿ ಜೀವನದ ಪರಮೋಚ್ಚ ಗುರಿಯಲ್ಲ ಎಂದು ಹೇಳಿದರು.

ಚಾರಿತ್ರ್ಯ ಗಳಿಸಿಕೊಳ್ಳುವುದು ಶಿಕ್ಷಣದ ಗುರಿಯಾಗಬೇಕು. ಅನ್ಯಾಯದ ವಿರುದ್ಧ ಧ್ವನಿ ಎತ್ತುವುದನ್ನು ಕಲಿಸುವುದು ಶಿಕ್ಷಣದ ಗುರಿಯಾಗಬೇಕು. ಹೀಗಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವುದು ವಿದ್ಯಾರ್ಥಿಗಳ ಜವಾಬ್ದಾರಿ. ಜೀವನದ ಎಲ್ಲಾ ಅಂಶಗಳನ್ನು ನಿರ್ದೇಶಿಸುವುದೇ ರಾಜಕೀಯ. ಯಾರೂ ಸಹ ರಾಜಕೀಯದಿಂದ ತಟಸ್ಥವಾಗಿರಲು ಸಾಧ್ಯವಿಲ್ಲ. ರಾಜಕೀಯದಲ್ಲಿ ಎರಡು ರೀತಿಯ ಬಣಗಳಿವೆ. ಒಂದು ನ್ಯಾಯದ ಪರ ಇರುವ ರಾಜಕೀಯ. ಇನ್ನೊಂದು ಅನ್ಯಾಯದ ಪರವಾದ ರಾಜಕೀಯ ಎಂದರು.

ನಮ್ಮ ಸುತ್ತಮುತ್ತಲಿನ ಶಿಕ್ಷಕರು, ಪೋಷಕರು, ಸಂಬಂಧಿಗಳು ಎಲ್ಲರೂ ಸೇರಿ ವಿದ್ಯಾರ್ಥಿಗಳ ಪರಮೋಚ್ಛ ಜವಾಬ್ದಾರಿ ಎಂದರೆ ಓದು ಎನ್ನುತ್ತಾರೆ. ಆದರೆ ಇಂದಿನ ಸಮಾಜದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಎಷ್ಟೋ ಜನ ಇರುವ ಉದ್ಯೋಗವನ್ನು ಸಹ ಕಳೆದುಕೊಳ್ಳುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ 4 ಲಕ್ಷಕ್ಕೂ ಹೆಚ್ಚು ಜನ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 20 ಕೋಟಿ ಜನ ಹಸಿವಿನಿಂದ ಬಳಲುತ್ತಿದ್ದಾರೆ ಎಂದರು.

ಅಲ್ಲದೆ, 4,500 ಮಕ್ಕಳು ಅಪೌಷ್ಟಿಕತೆಗೆ ಬಲಿಯಾಗುತ್ತಿದ್ದಾರೆ. 7 ಸಾವಿರ ಜನರು ಹಸಿವಿನಿಂದ ಪ್ರತಿ ದಿನ ಸಾಯುತ್ತಿದ್ದಾರೆ. ಜೊತೆಗೆ ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ ಕೂಡಾ ಬಡವರ ವಿರೋಧಿಯಾಗಿದೆ ಎನ್ನುವುದಕ್ಕೆ ಉದಾಹರಣೆ ಬಿಲ್ಕಿಸ್ ಬಾನು, ಬನ್ವಾರಿ, ಆರ್‌ಜಿ ಕರ್ ಪ್ರಕರಣಗಳಲ್ಲಿಯೇ ಸಾಬೀತಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿದರು. ಉಪಾಧ್ಯಕ್ಷರಾದ ಹಣಮಂತು, ಅಭಯ ದಿವಾಕರ್, ಚಂದ್ರಕಲಾ, ಅಪೂರ್ವ, ರಾಜ್ಯ ಖಜಾಂಚಿ ಸುಭಾಷ್, ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ್ ಬಿಳೂರ್ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇಂದು, ನಾಳೆ ಜನಸಂಪರ್ಕ ಸಭೆ

ಮೈಸೂರು,ಡಿ.16– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವಿ.ವಿ ಮೊಹಲ್ಲಾ ವಿಭಾಗದ ಅಧೀಕ್ಷಕ ಇಂಜಿನಿಯರ್, ಕಾರ್ಯನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಡಿ.17 ಮತ್ತು 18ರಂದು ಗ್ರಾಹಕರ ಕುಂದುಕೊರತೆಗಳ ಬಗ್ಗೆ ಮೂರನೇ ತ್ರೈಮಾಸಿಕ ಜನಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ. ಡಿ.17ರಂದು ಬೆಳಗ್ಗೆ 11 ಹೂಟಗಳ್ಳಿ ಉಪವಿಭಾಗ ಕಚೇರಿಯಲ್ಲಿ, ಮಧ್ಯಾಹ್ನ 3:30 ಗಂಟೆಗೆ ವಿ.ವಿ ಮೊಹಲ್ಲಾದ ಉಪವಿಭಾಗ ಕಚೇರಿಯಲ್ಲಿ ಹಾಗೂ ಡಿ.18ರಂದು ಬೆಳಗ್ಗೆ 11 ಗಂಟೆಗೆ ಕುವೆಂಪುನಗರ ಉಪವಿಭಾಗ ಕಚೇರಿಯಲ್ಲಿ ಮತ್ತು ಮಧ್ಯಾಹ್ನ 3:30 ಗಂಟೆಗೆ ಆರ್.ಕೆ ನಗರ ಉಪವಿಭಾಗ ಕಚೇರಿಯಲ್ಲಿ ಜನಸಂಪರ್ಕ ಸಭೆಯನ್ನು ಆಯೋಜಿಸಲಾಗಿದ್ದು, ಈ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಭಾಗವಹಿಸಿ ವಿದ್ಯುತ್ ಸಮಸ್ಯೆ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ ಅರ್ಜಿ ನೀಡುವುದರ ಮುಖಾಂತರ ಬಗೆಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಕೊನೆಗೂ ಬಾಂಗ್ಲಾದಲ್ಲಿ ಚುನಾವಣೆ ಘೋಷಿಸಿದ ಹಂಗಾಮಿ ಪ್ರಧಾನಿ



ಢಾಕ: ಬಾಂಗ್ಲಾದೇಶದ ಹಂಗಾಮಿ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್, ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು 2025ರ ಕೊನೆಯಲ್ಲಿ ಅಥವಾ 2026ರ ಆರಂಭದಲ್ಲಿ ನಡೆಯಲಿವೆ ಎಂದು ಸೋಮವಾರ ಘೋಷಿಸಿದ್ದಾರೆ. ಈ ವರ್ಷದ ಆಗಸ್ಟ್‌ನಲ್ಲಿ ವಿದ್ಯಾರ್ಥಿ ಸಂಘಟನೆಗಳ ಹಿಂಸಾತ್ಮಕ ಪ್ರತಿಭಟನೆಯಿಂದ ಮಾಜಿ ಪ್ರಧಾನಿ ಶೇಖ್ ಹಸೀನಾರನ್ನು ಅಧಿಕಾರದಿಂದ ಹೊರಹಾಕಿದ ನಂತರ ಉಸ್ತುವಾರಿ ಸರ್ಕಾರದ ಮುಖ್ಯ ಸಲಹೆಗಾರನಾಗಿರುವ ಯೂನಸ್ ಮೇಲೆ ಚುನಾವಣಾ ದಿನಾಂಕಗಳನ್ನು ನಿಗದಿಪಡಿಸುವಂತೆ ಒತ್ತಡ ಹೆಚ್ಚುತ್ತಿತ್ತು. ಈಗ ಚುನಾವಣೆ ದಿನಾಂಕಗಳನ್ನು 2025ರ ಅಂತ್ಯದ ವೇಳೆಗೆ ಅಥವಾ 2026ರ ಮೊದಲಾರ್ಧದಲ್ಲಿ ನಿಗದಿಪಡಿಸಬಹುದು ಎಂದು ಹೇಳಲಾಗಿದೆ. ಯೂನಸ್ ಚುನಾವಣೆ ನಡೆಸುವ ಮುನ್ನ ಹಲವು ಸುಧಾರಣೆಗಳ ಅಗತ್ಯವನ್ನು ಒತ್ತಿ ಹೇಳಿದ್ದು, ದೋಷರಹಿತ ಮತದಾರರ ಪಟ್ಟಿ ಹೊಂದಿರುವಂತಹ ಕನಿಷ್ಠ ಸುಧಾರಣೆಗಳೊಂದಿಗೆ ಹಿಂದಿನ ದಿನಾಂಕದಂದು ಚುನಾವಣೆ ನಡೆಸಲು ರಾಜಕೀಯ ಪಕ್ಷಗಳು ಒಪ್ಪಿಕೊಂಡರೆ, ನವೆಂಬರ್ ಅಂತ್ಯದೊಳಗೆ ಚುನಾವಣೆ ನಡೆಸಬಹುದು. ಯಾಕೆಂದರೆ ಚುನಾವಣಾ ಸುಧಾರಣೆಗಳ ಸಂಪೂರ್ಣ ಪಟ್ಟಿಯನ್ನು ಸೇರಿಸುವುದರಿಂದ ಕೆಲ ತಿಂಗಳವರೆಗೆ ಚುನಾವಣೆ ವಿಳಂಬವಾಗುತ್ತದೆ ಎಂದರು.

ಕಾರಿನ ಬಾಗಿಲಿಗೆ ಹೆಬ್ಬೆರಳು ಸಿಕ್ಕಿದ್ದರೂ ವ್ಯಕ್ತಿಯನ್ನು ಅರ್ಧ ಕಿ.ಮೀ ಎಳೆದೊಯ್ದ ಚಾಲಕ



ವಯನಾಡು: ಕೇರಳದ ವಯನಾಡು ಜಿಲ್ಲೆಯ ರಸ್ತೆಯೊಂದರಲ್ಲಿ ಬುಡಕಟ್ಟು ವ್ಯಕ್ತಿಯೊಬ್ಬರ ಹೆಬ್ಬೆರಳು ಕಾರಿನ ಬಾಗಿಲಲ್ಲಿ ಸಿಕ್ಕಿಹಾಕಿಕೊಂಡಿದ್ದರೂ ಅಪರಿಚಿತ ಗ್ಯಾಂಗ್ ಸುಮಾರು ಅರ್ಧ ಕಿಲೋಮೀಟರ್ ಎಳೆದುಕೊಂಡು ಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಡಿ.15ರಂದು ಸಂಜೆ ವಯನಾಡಿನ ಮಾನಂದವಾಡಿಯ ಕೂಡಲ್ ಕಡವು ಚೆಕ್ ಡ್ಯಾಂ ಬಳಿ ಘಟನೆ ನಡೆದಿದೆ. ಚೆಕ್ ಡ್ಯಾಂ ನೋಡಲು ಬಂದ ಪ್ರವಾಸಿಗರೆಂದು ಶಂಕಿಸಲಾದ ಕಾರಿನಲ್ಲಿದ್ದವರು, ಚೆಮ್ಮಾಡು ಬಡಾವಣೆಯ ಮಥನ್ ಎಂಬುವವರನ್ನು ಎಳೆದೊಯ್ದ ಪರಿಣಾಮ ಅವರ ಕೈ, ಸೊಂಟ ಮತ್ತು ಕಾಲುಗಳಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಹಿತಿ ಪ್ರಕಾರ, ಭಾನುವಾರ ಈ ಪ್ರದೇಶಕ್ಕೆ ಭೇಟಿ ನೀಡಿದ ಎರಡು ಪ್ರವಾಸಿಗರ ತಂಡಗಳ ನಡುವೆ ಕೆಲ ಸಮಯ ವಾಗ್ವಾದ ನಡೆದಿದೆ. ಈ ವೇಳೆ ಮಥನ್ ಸೇರಿದಂತೆ ಕೆಲ ಸ್ಥಳೀಯರು ಮಧ್ಯಪ್ರವೇಶಿಸಿ ಜಗಳ ಬಿಡಿಸಲು ಯತ್ನಿಸಿದ್ದಾರೆ. ಈ ವೇಳೆ ಕಾರಿನಲ್ಲಿದ್ದವರು ತರಾತುರಿಯಲ್ಲಿ ಬಾಗಿಲು ಹಾಕಿಕೊಂಡು ಕಾರು ಚಲಾಯಿಸುವಾಗ ಮಥನ್ ಅವರ ಹೆಬ್ಬೆರಳು ಬಾಗಿಲಿನಲ್ಲಿ ಸಿಕ್ಕಿಕೊಂಡಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂದಿನ 5 ವರ್ಷದಲ್ಲಿ ಚೀನಾದಿಂದ ಅಪಾರ ಅಣುಬಾಂಬ್ ತಯಾರು



ತೈವಾನ್: ಬುಲೆಟ್ ರೈಲಿನ ವೇಗದಲ್ಲಿ ಚೀನಾ ತನ್ನ ಪರಮಾಣು ಬಾಂಬ್‌ಗಳ ಸಂಗ್ರಹವನ್ನು ಹೆಚ್ಚಿಸುತ್ತಿದೆ. 2030ರ ವೇಳೆಗೆ ತನ್ನ ಪರಮಾಣು ಸಂಪತ್ತನ್ನು ದ್ವಿಗುಣಗೊಳಿಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. ಅಮೆರಿಕದ ಪರಮಾಣು ಶಸ್ತ್ರಾಸ್ತ್ರಗಳ ಆಧುನೀಕರಣದ ದೃಷ್ಟಿಯಿಂದ ಚೀನಾ ತನ್ನ ಪರಮಾಣು ಶಕ್ತಿಯನ್ನು ಹೆಚ್ಚಿಸುವಲ್ಲಿ ನಿರತವಾಗಿದೆ ಎಂದು ತೈವಾನ್ ತಜ್ಞರು ಇತ್ತೀಚಿನ ವರದಿಯಲ್ಲಿ ಹೇಳಿದ್ದಾರೆ. ಮೇನ್‌ಲ್ಯಾಂಡ್ ಅಫೇರ್ಸ್ ಕೌನ್ಸಿಲ್‌ನಲ್ಲಿ ಪ್ರಕಟವಾದ ವರದಿಯಲ್ಲಿ ಮೇ ತಿಂಗಳವರೆಗೆ ಚೀನಾ 500 ಪರಮಾಣು ಬಾಂಬ್‌ಗಳನ್ನು ಹೊಂದಿದ್ದು, ಕ್ಸಿ ಜಿನ್‌ಪಿಂಗ್ ಅದನ್ನು 1000ಕ್ಕೆ ತೆಗೆದುಕೊಂಡು ಹೋಗುವಲ್ಲಿ ನಿರತರಾಗಿದ್ದಾರೆ ಎಂದು ಹೇಳಲಾಗಿದೆ. ಕಳೆದ ವರ್ಷ, ಅಮೆರಿಕದ ರಕ್ಷಣಾ ಸಚಿವಾಲಯದ ಪೆಂಟಗನ್ ಕೂಡ ಇದೇ ರೀತಿಯ ವರದಿಯನ್ನು ಬಿಡುಗಡೆ ಮಾಡಿತ್ತು, ಅದರಲ್ಲಿ ಚೀನಾ ತನ್ನ ಪರಮಾಣು ಶಕ್ತಿಯನ್ನು 2030ರ ವೇಳೆಗೆ ದ್ವಿಗುಣಗೊಳಿಸಲಿದೆ ಎಂದು ಹೇಳಿತ್ತು. ಇದು 2021ರಲ್ಲಿ 400 ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿತ್ತು, ಪ್ರಸ್ತುತ ಇದು 500 ಕಾರ್ಯಾಚರಣಾ ಪರಮಾಣು ಬಾಂಬ್‌ಗಳನ್ನು ಹೊಂದಿದೆ ಮತ್ತು 2030ರ ವೇಳೆಗೆ ಈ ಅಂಕಿ ಅಂಶವು 1000 ತಲುಪುತ್ತದೆ.

ಎಸ್‌ಯುವಿ, ಟ್ರಕ್ ಡಿಕ್ಕಿ: ಆರು ಮಂದಿ ಸಾವು



ಬಲೋದ್: ಛತ್ತೀಸ್‌ಗಢದ ಬಲೋದ್ ಜಿಲ್ಲೆಯಲ್ಲಿ ಟ್ರಕ್ ಮತ್ತು ಎಸ್‌ಯುವಿ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ಆರು ಮಂದಿ ಸಾವನ್ನಪ್ಪಿದ್ದು ಮತ್ತು ಏಳು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಭಾನುವಾರ ತಡರಾತ್ರಿ ದೌಂಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದವರು ಜಿಲ್ಲೆಯ ಗುಂಡರ್‌ದೇಹಿ ಪ್ರದೇಶದಲ್ಲಿ ಸಂಬಂಧಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದರು ಎಂದು ಹೇಳಿದ್ದಾರೆ. ಕಾರು ಮತ್ತು ಟ್ರಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಎಸ್‌ಯುವಿಯಲ್ಲಿದ್ದ 13 ಪ್ರಯಾಣಿಕರಲ್ಲಿ ಆರು ಮಂದಿ ಸ್ಥಳದಲ್ಲೇ ಸಾವನ್ನಪ್ಪಿದರೆ, ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಇಲ್ಲಿನ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಐವರು ಮಹಿಳೆಯರು ಮತ್ತು ಮಗು ಸೇರಿದಂತೆ ಏಳು ಗಾಯಗೊಂಡ ವ್ಯಕ್ತಿಗಳನ್ನು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ರಾಜನಂದಗಾಂವ್ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಫ್ರಾನ್ಸ್‌ನಲ್ಲಿ ಭೀಕರ ಚಂಡಮಾರುತ; ಸಾವಿರ ಗಡಿ ದಾಟಿದ ಮೃತರ ಸಂಖ್ಯೆ



ಪ್ಯಾರಿಸ್: 'ಚಿಡೋ' ಚಂಡಮಾರುತವು ಫ್ರಾನ್ಸ್‌ನ ಮಯೊಟ್ಟೆ ಪ್ರದೇಶದಲ್ಲಿ ಭಾರಿ ಹಾನಿಯನ್ನುಂಟು ಮಾಡಿದ್ದು ಚಂಡಮಾರುತದ ಹೊಡೆತಕ್ಕೆ ಪ್ರಾಣ ಕಳೆದುಕೊಂಡವರ ಸಂಖ್ಯೆ 1,000 ಗಡಿ ದಾಟುವ ಸಾಧ್ಯತೆ ಇದೆ ಎಂದು ಉನ್ನತ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಶನಿವಾರ ಹಿಂದೂ ಮಹಾಸಾಗರದ ದ್ವೀಪಗಳಿಗೆ ಚಂಡಮಾರುತ ಅಪ್ಪಳಿಸಿದ್ದು ಇದರಿಂದ ವ್ಯಾಪಕ ಹಾನಿಯಾಗಿದೆ. ಸಾವಿರಾರು ಮಂದಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಂಡರೆ, ಸಾವಿರಾರು ಮಂದಿ ಜೀವ ಕಳೆದುಕೊಂಡಿರಬಹುದು. ಅಲ್ಲದೆ ಸಾವಿರಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶನಿವಾರದಂದು ಮಯೊಟ್ಟೆಗೆ ಅಪ್ಪಳಿಸಿದ ಚಂಡಮಾರುತದ ಅಬ್ಬರಕ್ಕೆ ಆ ಪ್ರದೇಶದಲ್ಲಿರುವ ನೂರಾರು ಮನೆಗಳು ನೆಲಸಮಗೊಂಡಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ ಅಲ್ಲದೆ ಚಂಡಮಾರುತದಿಂದ ಉಂಟಾದ ಸಾವಿನ ಸಂಖ್ಯೆ ನಿಖರವಾಗಿ ಹೇಳುವುದು ಕಷ್ಟ ಸಾಧ್ಯ. ಪ್ರದೇಶ ತುಂಬಾ ಮೃತದೇಹಗಳೇ ಕಂಡು ಬರುತ್ತಿದ್ದು, ಇದು ಸಾವಿರದ ಗಡಿ ದಾಟುವ ಸಂಭವವಿದೆ ಎನ್ನಲಾಗಿದೆ. ಅಲ್ಲದೆ ಈ ಪ್ರದೇಶದಲ್ಲಿರುವ ವಿಮಾನ ನಿಲ್ದಾಣ ನೆಲಸಮವಾಗಿದೆ.

ತಮ್ಮನನ್ನೇ ಗುಂಡಿಕ್ಕಿ ಕೊಲೆ ಮಾಡಿದ ಅಣ್ಣ

● ಸಹೋದರರ ನಡುವೆ ಕ್ಷುಲ್ಲಕ ವಿಚಾರಕ್ಕೆ ನಡೆದ ಜಗಳ ಕೊಲೆಯಲ್ಲಿ ಅಂತ್ಯ ● ಮಡಿಕೇರಿ ವಣಚಲು ಬಳಿ ಘಟನೆ

ಮಡಿಕೇರಿ, ಡಿ.16–ಕ್ಷುಲ್ಲಕ ವಿಚಾರಕ್ಕೆ ಅಣ್ಣ ತಮ್ಮನನ್ನು ಗುಂಡು ಹೊಡೆದು ಕೊಲೆ ಮಾಡಿರುವ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ವಣಚಲು ಬಳಿ ಸೋಮವಾರ ಬೆಳಿಗ್ಗೆ ನಡೆದಿದೆ.

ವಣಚಲು ನಿವಾಸಿ ಧ'ರ್ಮ ಅಲಿಯಾಸ್ ಅಪ್ಪಣ್ಣ(53) ಹತ್ಯೆಯಾಗಿದ್ದು, ಕೊಲೆ ಆರೋಪಿ ಪ್ರತು ಅಲಿಯಾಸ್ ಮಾಚಯ್ಯ(55) ಕೃತ್ಯ ಎಸಗಿದ ತಲೆಮರೆಸಿಕೊಂಡಿದ್ದಾನೆ.

ಘಟನೆ: ಅಪ್ಪಣ್ಣ ಮತ್ತು ಮಾಚಯ್ಯ ಸಹೋದರರಾಗಿದ್ದು, ಪ್ರತ್ಯೇಕವಾಗಿ ವಾಸವಿದ್ದು ತೋಟದ ಕೆಲಸದ ಮೂಲಕ ಬದುಕು ಕಟ್ಟಿಕೊಂಡಿದ್ದರು. ಸಹೋದರರಿಗೆ ಮದ್ಯ ಸೇವನೆ ಚಟವಿದ್ದು, ಇದೇ ವಿಚಾರಕ್ಕೆ ಸಹೋದರರ ನಡುವೆ ಸಣ್ಣಪುಟ್ಟ ಕಲಹ ನಡೆಯುತ್ತಿತ್ತು ಎನ್ನಲಾಗಿದೆ.

ಸೋಮವಾರ ಬೆಳಗ್ಗೆ 9.30ರಲ್ಲಿ ಸಹೋದರರ ನಡುವೆ ಕ್ಷುಲ್ಲಕ ವಿಚಾರವಾಗಿ ಜಗಳ ನಡೆದಿದೆ. ಈ ವೇಳೆ ಅಪ್ಪಣ್ಣ ಮೇಲೆ ಮಾಚಯ್ಯ ಹಲ್ಲೆ ನಡೆಸಿದ್ದಾನೆ. ಈ ವೇಳೆ ಒಂಟಿ ನಳಿಕೆ ಕೋವಿಯಿಂದ ಮಾಚಯ್ಯ ಗುಂಡು ಹೊಡೆದು ಕೊಲೆ ಮಾಡಿದ್ದಾನೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಪ್ರೊಬೇಷನರಿ ಎಸ್‌ಪಿ ಬೆನಕ ಪ್ರಸಾದ್ ಮತ್ತು ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಬಳಿಕ ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವವನ್ನು ಹಸ್ತಾಂತರಿಸಲಾಯಿತು.

ಈ ಸಂಬಂಧ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಅಪ್ಪಣ್ಣ ಕೊಲೆಯಾದ ವಣಚಲು ಸ್ಥಳವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಪರಿಶೀಲಿಸಿ, ಸ್ಥಳೀಯರಿಂದ ಮಾಹಿತಿ ಪಡೆದರು.

ಕತ್ತಿಯಿಂದ ಹಲ್ಲೆ ನಡೆಸಿದ ಅಳಿಯ: ಅತ್ತೆ ಸಾವು

ಮಡಿಕೇರಿ: ಅಳಿಯನ ಕತ್ತಿ ಏಟಿನಿಂದ ತೀವ್ರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅತ್ತೆ ಮೃತಪಟ್ಟಿದ್ದಾರೆ.

ನಾಪೋಕ್ಲು ಅಯ್ಯಂಗೇರಿ ನಿವಾಸಿ ಐಸಮ್ಮ ಮೃತಪಟ್ಟವರು. ಶುಕ್ರವಾರ ಮಧ್ಯರಾತ್ರಿ ಮಡಿಕೇರಿ ನಿವಾಸಿ ಹ್ಯಾರೀಸ್ ಆಟೋದಲ್ಲಿ ಅಯ್ಯಂಗೇರಿಯ ತೆರಳಿ ತನ್ನ ಅತ್ತೆ ಮನೆ ಬಾಗಿಲು ಒಡೆದು ಒಳ ನುಗ್ಗಿ ಅತ್ತೆ ಐಸಮ್ಮ ಮತ್ತು ಸಂಬಂಧಿ ಕದೀಜ ಅವರಿಗೆ ಕತ್ತಿಯಿಂದ ಗಂಭೀರ ಗಾಯಗೊಳಿಸಿದ್ದ. ಬಳಿಕ ಗಾಯಾಳುಗನ್ನು ಚಿಕಿತ್ಸೆಗಾಗಿ ಮೈಸೂರು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಸೋಮವಾರ ಅತ್ತೆ ಐಸಮ್ಮ ಮೃತಪಟ್ಟಿದ್ದಾರೆ.

ಈ ಸಂಬಂಧ ಭಾಗಮಂಡಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

❛ ಕೊಲೆ ಆರೋಪಿ ಸೆರೆಗೆ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಕೋವಿ ಸಹಿತ ಆರೋಪಿ ಪರಾರಿಯಾಗಿದ್ದು, ಜೊತೆಯಲ್ಲಿ ಎಷ್ಟು ಕಾಡತೂಸು ತೆಗೆದುಕೊಂಡು ಹೋಗಿದ್ದಾನೆ ಎನ್ನುವ ಬಗ್ಗೆ ತನಿಖೆ ಮುಂದುವರೆದಿದೆ. ಮೇಲ್ನೋಟಕ್ಕೆ ಆಸ್ತಿ ವಿಚಾರಕ್ಕೆ ಕಲಹ ನಡೆದಿರುವ ಶಂಕೆ ಇದ್ದು, ತನಿಖೆ ಮುಂದುವರೆದಿದೆ.

–ಕೆ.ರಾಮರಾಜನ್, ಕೊಡಗು ಎಸ್‌ಪಿ

ಜೀಪ್ ಡಿಕ್ಕಿ: ಇಬ್ಬರು ಬೈಕ್ ಸವಾರರು ಸಾವು

ಗೋಣಿಕೊಪ್ಪ, ಡಿ.16–ಜೀಪ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬ ಗಂಭೀರವಾಗಿ ಗಾಯ ಗೊಂಡಿರುವ ಘಟನೆ ತಿತಿಮತಿ–ಗೋಣಿಕೊಪ್ಪ ರಾಜ್ಯ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.





ಸಣ್ಣುವಂಡ ಜಯ ಸನತ್

ತಿತಿಮತಿ ಹೆಬ್ಬಾಲೆ ನಿವಾಸಿಗಳಾದ ಸಣ್ಣುವಂಡ ಜಯ (48) ಹಾಗೂ ದೇವರಪುರದ ಸನತ್(26) ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡ ಎಂ.ಎನ್.ಹರೀಶ್ (36)ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾತ್ರಿ 10 ಗಂಟೆ ವೇಳೆ ತಿತಿಮತಿಯಲ್ಲಿ ಹನುಮ ಜಯಂತಿ ಆಚರಣೆಯ ಪೂರ್ವ ಸಿದ್ಧತೆ ಕಾರ್ಯದಲ್ಲಿ ಪಾಲ್ಗೊಂಡು ಮೂವರು ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದರು. ತಿತಿಮತಿ ಬಳಿಯ ಭದ್ರಗೋಳ ಇಳಿಜಾರಿನ ರಸ್ತೆಯಲ್ಲಿ ಬೈಕ್ ನಿಲ್ಲಿಸಿ ಮಾತನಾಡುತ್ತಿದ್ದರು. ಈ ವೇಳೆ ತಿತಿಮತಿ ಕಡೆಯಿಂದ ಪಿರಿಯಾಪಟ್ಟಣ ಕಡೆಗೆ ಹೋಗುತ್ತಿದ್ದ ಜೀಪ್ ವೇಗವಾಗಿ ಬಂದು ಮೂವರಿಗೂ ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಎಂ.ಎನ್.ಹರೀಶ್ ಗಂಭೀರ ಗಾಯಗೊಂಡಿದ್ದಾರೆ.

ಕೊಳತ್ತೋಡು–ಬೈಗೋಡು ಗ್ರಾಮದ ಜೀಪ್ ಚಾಲಕ ಸಿದ್ದುನನ್ನು ಗೋಣಿಕೊಪ್ಪ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ್ ಮುಧೋಳ್, ಠಾಣಾಧಿಕಾರಿ ಪ್ರದೀಪ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿದರು.

ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಶವಗಳನ್ನು ಹಸ್ತಾಂತರಿಸಲಾಯಿತು. ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಂಟಿಕೊಪ್ಪದಲ್ಲಿ ಮುತ್ತಪ್ಪ ಪುತ್ತರಿ ವೆಳ್ಳಾಟಂ



ಸುಂಟಿಕೊಪ್ಪ ಚಾಮುಂಡೇಶ್ವರಿ ಮತ್ತು ಮುತ್ತಪ್ಪ ದೇವಸ್ಥಾನದಲ್ಲಿ ನಡೆದ ಪುತ್ತರಿ ವೆಳ್ಳಾಟಂ.

ಸುಂಟಿಕೊಪ್ಪ, ಡಿ.16–ಶ್ರೀ ಚಾಮುಂಡೇಶ್ವರಿ ಮತ್ತು ಮುತ್ತಪ್ಪ ದೇವಸ್ಥಾನ ಸಮಿತಿ ವತಿಯಿಂದ ಮುತ್ತಪ್ಪ ದೇವರ ಪುತ್ತರಿ ವೆಳ್ಳಾಟಂ ಭಾನುವಾರ ನಡೆಯಿತು.

ಮುತ್ತಪ್ಪ ದೇವರ ಮಲೆ ಇಳಿಸುವಿಕೆ ನಡೆದ ಬಳಿಕ ರಾತ್ರಿ 10 ಗಂಟೆವರೆಗೆ ಮುತ್ತಪ್ಪ ವೆಳ್ಳಾಟಂ ನಡೆಯಿತು. ಕೆದಕಲ್, 7ನೇ ಹೊಸಕೋಟೆ, ಕೊಡಗರಹಳ್ಳಿ, ಅತ್ತೂರು, ಬಾಳೆಕಾಡು, ಶ್ರೀದೇವಿಗಳಿಂದ ಆಗಮಿಸಿದ್ದ ನೂರಾರು ಭಕ್ತರು ದೇವರಲ್ಲಿ ಬೇಡಿಕೆ ಮತ್ತು ಹರಕೆ ಸಲ್ಲಿಸಿದರು.

ರಾತ್ರಿ ಕುಂದನ್ ನೃತ್ಯಾಲಯ ತಂಡದಿಂದ ವೈವಿಧ್ಯಮಯ ನೃತ್ಯ ಪ್ರದರ್ಶನ ಮತ್ತು ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ನಂತರ ಚಾಮುಂಡೇಶ್ವರಿ ಮತ್ತು ಮುತ್ತಪ್ಪ ದೇವಾಲಯದಲ್ಲಿ ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು. ಬಳಿಕ ಅನ್ನಸಂತರ್ಪಣೆ ನಡೆಯಿತು.

ಇದೇ ವೇಳೆ ದೇವಾಲಯ ಸಮಿತಿಯ ಪಟ್ಟೆಮನೆ ಉದಯಕುಮಾರ್, ರಮೇಶ್ ಪಿಳ್ಳೈ, ಜಿ.ಪಿ.ಅನಿಲ್ ಕುಮಾರ್, ಯಂಕನ ಕೌಶಿಕ್, ಮುತ್ತಪ್ಪ ದೇವಾಲಯದ ಪೂಜಾರಿ ಶಿವರಾಮು, ಚಾಮುಂಡೇಶ್ವರಿ ದೇವಾಲಯದ ಮುಖ್ಯ ಅರ್ಚಕ ಮಂಜುನಾಥ್ ಉಡುಪ, ಸಮಿತಿ ಸದಸ್ಯರು ಹಾಜರಿದ್ದರು.

ಕಾರ್ಮಿಕರ ದೌರ್ಜನ್ಯ ವಿರುದ್ಧ ಸಿಪಿಐ(ಎಂ) ಹೋರಾಟ

ವಿರಾಜಪೇಟೆ, ಡಿ.16–ಕೊಡಗಿನಲ್ಲಿ ದಲಿತರು ಹಾಗೂ ಆದಿವಾಸಿಗಳಿಗೆ ಕೃಷಿ ಭೂಮಿ ಇಲ್ಲದೆ ಬಡತನಕ್ಕೆ ಕಾರಣವಾಗಿದೆ. ದುಡಿಯುವ ಕಾರ್ಮಿಕರ ಶೋಷಣೆ, ದೌರ್ಜನ್ಯ ನಡೆಸುವವರ ವಿರುದ್ಧ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹೋರಾಟ ನಡೆಸಲಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಸ್.ವೈ.ಗುರುಶಾಂತ್ ಹೇಳಿದರು.



ವಿರಾಜಪೇಟೆ ಮಹಿಳಾ ಸಮಾಜದ ಸಭಾಂಗಣದಲ್ಲಿ ನಡೆಯುವ ಬಹಿರಂಗ ಅಧಿವೇಶನದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಎಸ್.ವೈ.ಗುರುಶಾಂತ್ ಮಾತನಾಡಿದರು.

ಪಟ್ಟಣದ ಮಹಿಳಾ ಸಮಾಜದ ಸಭಾಂಗಣದಲ್ಲಿ ಸಿಪಿಐ(ಎಂ)ನಿಂದ ತುಮಕೂರಿನಲ್ಲಿ ಡಿ.29, 30 ಹಾಗೂ 31ರಂದು ಮತ್ತು ತಮಿಳುನಾಡಿನ ಮಧುರೈನಲ್ಲಿ ಏಪ್ರಿಲ್‌ನಲ್ಲಿ ನಡೆಯುವ ರಾಜ್ಯ ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಅಧಿವೇಶನ ಉದ್ಘಾಟಿಸಿ ಮಾತನಾಡಿದ ಅವರು, ಮೂರು ವರ್ಷಕ್ಕೊಮ್ಮೆ ನಡೆಯುವ ಪಕ್ಷದ ಸಮ್ಮೇಳನದ ಮೂಲಕ ರೈತರು, ಕಾರ್ಮಿಕರು ಹಾಗೂ ಜನಸಾಮಾನ್ಯರ ಸಮಸ್ಯೆಗಳ ಬಗೆಹರಿಸಲು ಚಳವಳಿ ನಡೆಸಲಾಗುತ್ತಿದೆ ಎಂದರು.

ಕೇಂದ್ರ ಸರ್ಕಾರ ಕಳೆದ 10 ವರ್ಷದಿಂದ ಬೆಲೆ ಏರಿಕೆಯಿಂದ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ದೂಡಿದೆ. ದೇಶದಲ್ಲಿ ಹಲವಾರು ಜಾತಿ, ಧರ್ಮ, ಭಾಷೆಯೊಂದಿಗೆ ಒಟ್ಟಾಗಿ ಬಾಳುವವರನ್ನು ಛಿದ್ರ ಮಾಡಲು ಹೊರಟಿದೆ. ಬಡವ–ಶ್ರೀಮಂತ ಎಲ್ಲರಿಗೂ ಸಂವಿಧಾನ ಒಂದೇ. ಪ್ರತಿಯೊಬ್ಬರೂ ಅದನ್ನು ಪಾಲಿಸಬೇಕು ಎಂದು ತಿಳಿಸಿದರು.

ರಾಜ್ಯ ಕಾರ್ಯದರ್ಶಿ ಕೆ.ಯಾದವ್ ಶೆಟ್ಟಿ ಮಾತನಾಡಿ, ನಮ್ಮ ಪಕ್ಷ ದುಡಿಯುವ ಜನರ ಪರವಾಗಿ ಕೆಲಸ ಮಾಡುತ್ತಿದೆ. ಕಮ್ಯೂನಿಸ್ಟ್ ಪಕ್ಷ ಅಧಿಕಾರದಲ್ಲಿದ್ದರೂ, ಇಲ್ಲದಿದ್ದರೂ ದುಡಿಯುವ ಜನರ ಪರ ನಿಂತಿದೆ. ಗುಜರಾತ್‌ನಲ್ಲಿ ಹೆಚ್ಚು ಕಾರ್ಮಿಕರು ಬಡತನದಲ್ಲಿದ್ದಾರೆ. ಅಲ್ಲಿನ ಕಾರ್ಮಿಕರಿಗೆ ಇನ್ನೂ ಸೌಲಭ್ಯಗಳು ದೊರಕಿಲ್ಲ ಎಂದು ಆರೋಪಿಸಿದರು.

ಪಕ್ಷದ ಗೌರವಾಧ್ಯಕ್ಷ ಐ.ಆರ್.ಪ್ರಮೋದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಎ.ಸಿ.ಸಾಬು, ಕಾರ್ಯಾಧ್ಯಕ್ಷ ಕೆ.ಎಸ್.ಶಾಜಿ ರಮೇಶ್, ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ರಮೇಶ್, ಖಜಾಂಚಿ ಎನ್.ಡಿ.ಕುಟ್ಟಪ್ಪ ಹಾಗೂ ಎ.ಮಹದೇವ್ ಮಾತನಾಡಿದರು.

ಇದಕ್ಕೂ ಮೊದಲು ಕಾರ್ಮಿಕರು ಹಾಗೂ ಪಕ್ಷದ ಕಾರ್ಯಕರ್ತರು ಪಟ್ಟಣದ ತೆಲುಗರ ಬೀದಿಯಿಂದ ಜೈನರ ಬೀದಿ, ದೊಡ್ಡಟ್ಟಿಚೌಕಿ, ಮುಖ್ಯರಸ್ತೆಯ ಗಡಿಯಾರ ಕಂಬದ ಮಾರ್ಗವಾಗಿ ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಪ್ರಮುಖರಾದ ಪದ್ಮಿನಿ ಶ್ರೀಧರ್, ಹೆಚ್.ಆರ್.ಶಿವಪ್ಪ, ಡಾ.ದುರ್ಗಾಪ್ರಸಾದ್, ವೈ.ಕೆ.ಗಣೇಶ್, ಪಿ.ಆರ್.ಭರತ್, ಎಸ್.ಬೈಜು, ಎನ್.ಕೆ.ಅನಿಲ್, ಸಾಲಿ ಪೌಲೋಸ್ ಭಾಗವಹಿಸಿದ್ದರು.

ಕೊಡವ ಸಮಾಜದಿಂದ ಪುತ್ತರಿ ಸಂಭ್ರಮಾಚರಣೆ

ಕುಶಾಲನಗರ: ಇಲ್ಲಿನ ಕೊಡವ ಸಮಾಜದ ವತಿಯಿಂದ ಪುತ್ತರಿ ನಮ್ಮೆ ಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಮಾಜದ ಸಭಾಂಗಣದಲ್ಲಿ ಸಾಂಪ್ರದಾಯಿಕ ಉಡುಗೆ ಧರಿಸಿ ನೆಲ್ಲಕ್ಕಿಯಡಿಯಲ್ಲಿ ಗುರುಕಾರೋಣರು ದೇವರಿಗೆ ಪೂಜೆ ಸಲ್ಲಿಸಲಾಯಿತು. ನಂತರ ಅರಳಿ, ಮಾವು, ಹಲಸು, ಕುಂಬಳಿ ಹಾಗೂ ಗೇರು ಮರಗಳ ಎಲೆಗಳಿಂದ ನೆರೆಕಟ್ಟುವ ಮೂಲಕ ಪುತ್ತರಿ ನೆರವೇರಿಸಿದರು.

ಬಳಿಕ ತೋಕ್ ಕತ್ತಿ, ದುಡಿಕೊಟ್ಟ್ ಪಾಟ್ ತಳಿಯತಕ್ಕಿ ಹಾಗೂ ಒಡ್ಡೋಲದೊಂದಿಗೆ ಗದ್ದೆಗೆ ಮೆರವಣಿಗೆಯಲ್ಲಿ ತೆರಳಲಾಯಿತು. ಅಲ್ಲಿ ಮೂರು ಸುತ್ತು ಕುಶಾಲತೋಪು ಸಿಡಿಸಿ ಪೂಜೆ ಸಲ್ಲಿಸಿ ಕದಿರು ತೆಗೆಯಲಾಯಿತು. ನಂತರ ಧಾನ್ಯಲಕ್ಷ್ಮಿಯನ್ನು ಮೆರವಣಿಗೆ ಮೂಲಕ ತಂದು ಕದಿರನ್ನು ಸಮಾಜದಲ್ಲಿಟ್ಟು ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭ ಕೊಡವ ಸಮಾಜದ ಅಧ್ಯಕ್ಷ ವಾಂಚಿರ ಮನು ನಂಜುಂಡ, ಕಾರ್ಯದರ್ಶಿ ಐಲಪಂಡ ಸಂಜು ಬೆಳ್ಯಪ್ಪ, ಜಂಟಿ ಕಾರ್ಯದರ್ಶಿ ಮೈದಪಂಡ ಜಗದೀಶ್, ಮುಖಂಡರಾದ ಬಲ್ಲಾರಂಡಜಾಲಿ ತಿಮ್ಮಯ್ಯ, ಮಾದಂಡ ಸಾಬು ಪೊಣ್ಣಪ್ಪ, ಪಟ್ಟಡಕೇಸು, ಪುಲಿಯಂಡ ಚಂಗಪ್ಪ ಇತರರು ಇದ್ದರು.



ಕುಶಾಲನಗರ ಕೊಡವ ಸಮಾಜದ ವತಿಯಿಂದ ಪುತ್ತರಿ ನಮ್ಮೆ ಆಚರಿಸಲಾಯಿತು.

ಅಪಘಾತ: ಗ್ರಾಮಸ್ಥರಿಂದ ಕೆಲಕಾಲ ರಸ್ತೆ ತಡೆ



ಟಗರಪುರ ಗ್ರಾಮದ ಹೆದ್ದಾರಿಗೆ ಉಬ್ಬು ನಿರ್ಮಿಸುವಂತೆ ಒತ್ತಾಯಿಸಿ ಗ್ರಾಮಸ್ಥರು ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ, ಡಿ.16–ಟಗರಪುರ ಗ್ರಾಮದ ಸಮೀಪ ನಡೆದ ಅಪಘಾತದಲ್ಲಿ ಇಬ್ಬರು ಬೈಕ್ ಸವಾರು ತೀವ್ರವಾಗಿ ಗಾಯಗೊಂಡಿದ್ದರಿಂದ ಆಕ್ರೋಶಗೊಂಡ ಗ್ರಾಮಸ್ಥರು ರಸ್ತೆ ಉಬ್ಬು ನಿರ್ಮಿಸುವಂತೆ ಒತ್ತಾಯಿಸಿ ಕೆಲಕಾಲ ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ಟಗರಪುರ ಗ್ರಾಮದ ಸಮೀಪ ಆಂಬುಲೆನ್ಸ್ ಡಿಕ್ಕಿ ಹೊಡೆದು ಇಬ್ಬರು ಬೈಕ್ ಸವಾರರಾದ ಮೆಲ್ಲಹಳ್ಳಿ ಮಾಳ ಗ್ರಾಮದ ಪತ್ರಕರ್ತ ಕುಮಾರ್ ಹಾಗೂ ಮಹೇಶ್ ಅವರು ತೀವ್ರವಾಗಿ ಗಾಯಗೊಂಡಿದ್ದಾರೆ. ಇದರಿಂದ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು, ಟಗರಪುರ ಗ್ರಾಮದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಾಗ್ಗೆ ಅಪಘಾತಗಳು ಸಂಭವಿಸುತ್ತವೆ. ಆದ್ದರಿಂದ ರಸ್ತೆ ಉಬ್ಬು ನಿರ್ಮಿಸಬೇಕು ಎಂದು ಆಗ್ರಹಿಸಿ ರಸ್ತೆ ಸಂಚಾರ ತಡೆದು ಪ್ರತಿಭಟನೆ ನಡೆಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಧರ್ಮೇಂದ್ರ, ಅಗರ ಮಾಂಬಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕರಿಬಸಪ್ಪ, ರಾಷ್ಟ್ರೀಯ ಹೆದ್ದಾರಿಯಾಗಿರುವುದರಿಂದ ಈ ರಸ್ತೆಗೆ ಉಬ್ಬು ನಿರ್ಮಿಸಲು ಸಾಧ್ಯವಿಲ್ಲ. ಆದರೆ, ಹೆದ್ದಾರಿಯ ಎರಡು ಬದಿಗೆ ಬ್ಯಾರಿಕೇಡ್ ಅಳವಡಿಸಲಾಗುವುದು ಎಂದು ಭರವಸೆ ನೀಡಿ, ಪ್ರತಿಭಟನಾಕಾರರ ಮನವೊಲಿಸಿದರು. ನಂತರ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಉತ್ತಮ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಿದಾಗ ಸಧೃಡ ಸಮಾಜ ನಿರ್ಮಾಣ

ಮಕ್ಕಳ ಸಂವಾದದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಅಭಿಮತ

ಚಾಮರಾಜನಗರ, ಡಿ.16–ಪ್ರತಿ ಮಗುವನ್ನು ಮಕ್ಕಳ ಸ್ನೇಹಿ ಪರಿಸರದಲ್ಲಿ ಬೆಳೆಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ತಿಳಿಸಿದರು.



ಚಾಮರಾಜನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ನಡೆದ ಮಕ್ಕಳ ಸಂವಾದದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿದರು.

ನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ಸೋಮವಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಾರ್ಮಿಕ, ಪೊಲೀಸ್ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಹಯೋಗದಲ್ಲಿ ಆಯೋಜಿಸಿದ್ದ 'ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ' ಕುರಿತ ಶೀರ್ಷಿಕೆಯಡಿ ಆರ್‌ಟಿಇ ಕಾಯ್ದೆ ಅನುಷ್ಠಾನ ಹಾಗೂ ಮಕ್ಕಳೊಂದಿಗೆ ಸಂವಾದ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳನ್ನು ಉತ್ತಮ ವಾತಾವರಣದಲ್ಲಿ ಬೆಳೆಸಬೇಕು. ಆಗ ಮಾತ್ರ ಸಧೃಡ ಸಮಾಜ ನಿರ್ಮಾಣವಾಗಲು ಸಾಧ್ಯವಾಗಲಿದೆ. ಮಕ್ಕಳಿಗೆ ಸಾಮಾಜಿಕ ನ್ಯಾಯ, ಸಹೋದರತ್ವ, ಭ್ರಾತೃತ್ವ ಭಾವನೆಗಳಿಂದ ಕೂಡಿದ ಮೌಲ್ಯಯುತ ಶಿಕ್ಷಣ ನೀಡಬೇಕು. ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಶಾಲೆಯಲ್ಲಿ ಶಿಕ್ಷಣದೊಂದಿಗೆ ರಕ್ಷಣೆ ಎಂಬ ಶೀರ್ಷಿಕೆಯಡಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಹಾಗೂ ರಾಜ್ಯ ಸರ್ಕಾರದ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜೊತೆಗೂಡಿ ರಾಜ್ಯಾದ್ಯಂತ ಆರ್‌ಟಿಇ ಕಾಯ್ದೆ ಅನುಷ್ಠಾನದ ಬಗ್ಗೆ ಸಂವಾದ, ಅಹವಾಲು ಸ್ವೀಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಕ್ಕಳಿಗೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಆರ್‌ಟಿಇ ಕಾಯ್ದೆ ಮಕ್ಕಳ ಪ್ರತಿಭೆಗಳನ್ನು ಹೊರ ತರಲು ಅನೇಕ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಕಾರ್ಯಕ್ರಮ ನಡೆಸಲು ಅವಕಾಶ ಕಲ್ಪಿಸಿದೆ ಎಂದು ತಿಳಿಸಿದರು.

ಸಂವಿಧಾನದದಲ್ಲಿ ಪ್ರತಿಯೊಬ್ಬರಿಗೂ ಬದುಕುವ ಹಕ್ಕನ್ನು ನೀಡಲಾಗಿದೆ. ವಿಶ್ವ ಸಂಸ್ಥೆಯಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆ ಅಂಗೀಕಾರವಾದ ನಂತರ ದೇಶದಲ್ಲಿ ಮಕ್ಕಳ ಹಕ್ಕು ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಅದರಲ್ಲಿ ಬಹಳ ಮುಖ್ಯವಾದದ್ದು ಬಾಲ ನ್ಯಾಯ ಹಾಗೂ ಬಾಲ್ಯ ವಿವಾಹ ನಿಷೇಧ ಕಾಯ್ದೆ ಎಂದು ಹೇಳಿದರು.

ಇದೇ ವೇಳೆ ವಿವಿಧ ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಲಾಯಿತು. ಮಕ್ಕಳು ಕೇಳಿದ ಪ್ರಶ್ನೆಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉತ್ತರಿಸಿದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ಸವಿತಾ, ತಾಲೂಕು ವೈದ್ಯಾಧಿಕಾರಿ ಡಾ.ಶ್ರೀನಿವಾಸ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಬಾಲನ್ಯಾಯ ಮಂಡಳಿ ಸದಸ್ಯರಾದ ಸರಸ್ವತಿ, ಗಂಗಾಧರ್ ಉಪಸ್ಥಿತರಿದ್ದರು.

❛ ಶಾಲೆಯಲ್ಲಿ ಶಿಕ್ಷಣದ ಜೊತೆ ಮಕ್ಕಳ ರಕ್ಷಣೆ ಕುರಿತು ಮೊದಲ ಬಾರಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಕ್ಕಳೊಂದಿಗೆ ಸಂವಾದ ನಡೆಸಿ ಮಕ್ಕಳ ಸಮಸ್ಯೆಗಳನ್ನು ಆಲಿಸಿ, ಪರಿಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಸಂವಾದದಲ್ಲಿ ಮಕ್ಕಳ ಪ್ರಶ್ನೆಗಳನ್ನು ಆಧರಿಸಿ ಆಯೋಗದ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗುವುದು.

–ವೆಂಕಟೇಶ್, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ಉಮ್ಮತ್ತೂರು ಗ್ರಾಪಂ ಅಧ್ಯಕ್ಷೆಯಾಗಿ ರಾಜಮ್ಮ ಆಯ್ಕೆ



ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಗ್ರಾಪಂ ಅಧ್ಯಕ್ಷೆಯಾಗಿ ಆಯ್ಕೆಯಾದ ರಾಜಮ್ಮ ಅವರನ್ನು ಸದಸ್ಯರು ಅಭಿನಂದಿಸಿದರು.


ಚಾಮರಾಜನಗರ, ಡಿ.16–ತಾಲೂಕಿನ ಉಮ್ಮತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ರಾಜಮ್ಮ ಅವಿರೋಧವಾಗಿ ಆಯ್ಕೆಯಾದರು.

ಯಮುನಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಗ್ರಾಪಂ ಕಚೇರಿ ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಸಾಮಾನ್ಯ ಮಹಿಳೆಗೆ ನಿಗದಿಯಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ರಾಜಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಲೋಕೋಪಯೋಗಿ ಇಲಾಖೆಯ ಮಾದೇಶ್ ಅವಿರೋಧ ಆಯ್ಕೆ ಘೋಷಿಸಿದರು.

ಅಧ್ಯಕ್ಷೆ ರಾಜಮ್ಮ ಮಾತನಾಡಿ, ಮುಂದಿನ ದಿನಗಳಲ್ಲಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಮೂಲಸೌಲಭ್ಯ ಕಲ್ಪಿಸುವ ಮೂಲಕ ಮಾದರಿ ಗ್ರಾಪಂ ಮಾಡುವ ಗುರಿ ನಮ್ಮದಾಗಿದೆ. ಎಲ್ಲರೂ ಒಗ್ಗಟ್ಟಿನಿಂದ ಪಂಚಾಯಿತಿ ಅಭಿವೃದ್ಧಿಗೆ ದುಡಿಯೋಣ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ನಂಜುಂಡಶೆಟ್ಟಿ, ಮಾಜಿ ಅಧ್ಯಕ್ಷರಾದ ಶ್ರೀಕಂಠಸ್ವಾಮಿ, ಯಮುನಾ, ಸದಸ್ಯರಾದ ಶ್ರೀಕಂಠಸ್ವಾಮಿ, ಎಸ್.ಮಹದೇವಸ್ವಾಮಿ, ಶಿವಣ್ಣ, ನಾಗರತ್ನಮ್ಮ, ಸಿದ್ದರಾಜು, ಭವಾನಿ, ಸೌಮ್ಯ, ಪದ್ಮಮ್ಮ, ಮಾದಲಾಂಬಿಕೆ, ಚಂದ್ರು, ಚಂದ್ರ, ಪಿಡಿಓ ಮಹದೇವಪ್ರಭು, ಕಾರ್ಯದರ್ಶಿ ಶಿವಯ್ಯ, ನೌಕರರು ಉಪಸ್ಥಿತರಿದ್ದರು.

ಶಂಕರ ನಿಧನ



ಚಾಮರಾಜನಗರ: ರಾಮಸಮುದ್ರದ ಹಳ್ಳದ ಬೀದಿ ನಿವಾಸಿ ಶಂಕರ(47) ಸೋಮವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಮೃತರು ತಂದೆ, ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 2 ಗಂಟೆಗೆ ರಾಮಸಮುದ್ರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಯುವತಿ ನಾಪತ್ತೆ



ಚಾಮರಾಜನಗರ: ಸಂತೇಮರಹಳ್ಳಿ ಗ್ರಾಮದ ಯುವತಿ ಕಾಣೆಯಾಗಿದ್ದು, ಈ ಸಂಬಂಧ ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಕ್ಷಿತಾ (19) ನಾಪತ್ತೆಯಾಗಿದ್ದು, ಈಕೆ ಕನ್ನಡ, ತೆಲುಗು ಭಾಷೆ ಮಾತನಾಡುತ್ತಾಳೆ. ಬಲ ಕೆನ್ನೆಯ ಹತ್ತಿರ ಹಳೆಯ ಸುಟ್ಟ ಗಾಯದ ಗುರುತು ಇದೆ. ಈಕೆಯ ಸುಳಿವು ದೊರೆತಲ್ಲಿ ಪೊಲೀಸ್ ಠಾಣೆ ದೂ.ಸಂ 08226–240250 ಅಥವಾ ಮೊ.ಸಂ: 9480804650ಗೆ ತಿಳಿಸುವಂತೆ ಪೊಲೀಸರು ತಿಳಿಸಿದ್ದಾರೆ.

ಜಯಶೇಖರ್‌ಗೆ ರಂಗಭೀಷ್ಮ ಪ್ರಶಸ್ತಿ ಪ್ರದಾನ

ಚಾಮರಾಜನಗರದಲ್ಲಿ 3 ದಿನ ನಡೆದ ರಂಗೋತ್ಸವ ಮುಕ್ತಾಯ



ಚಾಮರಾಜನಗರದಲ್ಲಿ ನಡೆದ ರಂಗೋತ್ಸವ ಸಮಾರೋಪದಲ್ಲಿ ರಂಗ ನಿರ್ದೇಶಕ ಜೆ.ಜಾಯ್‌ಫುಲ್ ಜಯಶೇಖರ್ ಅವರಿಗೆ 'ರಂಗ ಭೀಷ್ಮ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಾಮರಾಜನಗರ, ಡಿ.16–ನಗರದ ರಂಗತರಂಗ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಂಗತರಂಗ ರಂಗೋತ್ಸವದ ಪೌರಾಣಿಕ ನಾಟಕ ಉತ್ಸವ ಹಾಗೂ ರಂಗಭೀಷ್ಮ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ನಗರದ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆದ ರಂಗೋತ್ಸವ ಸಮಾರೋಪದಲ್ಲಿ ರಂಗತರಂಗ ಟ್ರಸ್ಟ್ ನೀಡುವ 'ರಂಗ ಭೀಷ್ಮ' ಪ್ರಶಸ್ತಿಯನ್ನು ರಂಗ ನಿರ್ದೇಶಕ ಜೆ.ಜಾಯ್‌ಫುಲ್ ಜಯಶೇಖರ್ ಅವರಿಗೆ ಪ್ರದಾನ ಮಾಡಲಾಯಿತು.

ನಗರಸಭಾ ಅಧ್ಯಕ್ಷ ಸುರೇಶ್ ಮಾತನಾಡಿ, ಜಿಲ್ಲೆ ಜನಪದ ಕಲೆಗಳ ತವರೂರು. ಹಲವು ಕಲಾವಿದರನ್ನು ಹುಟ್ಟು ಹಾಕಿದೆ. ಹೆಸರಾಂತ ಸಾಹಿತಿಗಳು, ಚಿತ್ರ, ರಂಗ ಕಲಾವಿದರು ಇಲ್ಲಿದ್ದಾರೆ. ಮಲೆಮಹದೇಶ್ವರ, ಬಿಳಿಗಿರಿ ರಂಗನಾಥಸ್ವಾಮಿ ನೆಲೆಸಿರುವ ಪ್ರದೇಶವಾಗಿದೆ ಎಂದು ತಿಳಿಸಿದರು.

ಎಲೆಮರೆ ಕಾಯಿಯಂತಿರುವ ರಂಗತರಂಗ ಟ್ರಸ್ಟ್ ಕಲಾವಿದರನ್ನು ಗುರುತಿಸಿ, ಗೌರವಿಸುತ್ತಿರುವುದು ಹೆಮ್ಮೆಯ ಕಾರ್ಯ. ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಕಲಾವಿದರನ್ನು ಗುರುತಿಸುವುದು, ನಾಟಕಗಳನ್ನು ಪ್ರದರ್ಶಿಸುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಿಎಸ್‌ವಿ ಪ್ರತಿಷ್ಠಾನ ಅಧ್ಯಕ್ಷ ಬಿ.ವಿ. ನಾಗಪ್ಪಶೆಟ್ಟಿ ಮಾತನಾಡಿ, ಪೌರಾಣಿಕ ರಂಗಕಲೆ ಗ್ರಾಮೀಣ ಪ್ರದೇಶದಲ್ಲಿ ಈಗಲೂ ಜೀವಂತವಾಗಿದೆ. ಜಿಲ್ಲೆಯ ಕಲಾವಿದರು ರಾಜ್ಯ ಹಾಗೂ ಅಂತಾರಾಜ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದಾರೆ ಎಂದು ತಿಳಿಸಿದರು.

3 ದಿನ ನಡೆದ ರಂಗೋತ್ಸವದಲ್ಲಿ ದಕ್ಷಯಜ್ಞ, ಕುರುಕ್ಷೇತ್ರ, ಶನಿ ಪ್ರಭಾವ ನಾಟಕಗಳನ್ನು ಪ್ರದರ್ಶಿಸಲಾಯಿತು. ಇದೇ ಸಂದರ್ಭದಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಎ.ಡಿ.ಸಿಲ್ವಾ ಎಂ.ಪಿ.ರಾಜು, ಹಾರ್ಮೋನಿಯಂ ಮಾಸ್ಟರ್ ಆರ್.ಶಿವಣ್ಣ, ಕಲಾವಿದರಾದ ಎಚ್.ಮಹದೇವ್, ದೀಪಶ್ರೀ, ವರಲಕ್ಷ್ಮೀ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಸೋಮಶೇಖರ ಬಿಸಲವಾಡಿ ಅಧ್ಯಕ್ಷತೆ ವಹಿಸಿದ್ದರು. ಜನಹಿತಾಶಕ್ತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್, ಇತರರು ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಫಲಪುಷ್ಪದ ಚೆಲುವು

ಜಿರೇನಿಯಂ, ಕಾಶಿಗೊಂಡೆ, ಆಸ್ಟರ್, ಗೈರಾಲ್ಡಿಯಾ, ಸ್ಪೈಡರ್, ಬೋನ್ಸಾಯ್ ಗಿಡಗಳು ಸೇರಿದಂತೆ 35ಕ್ಕೂ ಹೆಚ್ಚು ಬಗೆಯ ಹೂವಿನ ಗಿಡಗಳನ್ನು ಬೆಳೆಸಲಾಗಿದ್ದು, ಅರಮನೆ ಆವರಣದ ಪಾರ್ಕ್‌ನಲ್ಲಿ ವಿವಿಧ ಮಾದರಿಯಲ್ಲಿ ಜೋಡಣೆ ಮಾಡಲಾಗುತ್ತದೆ. ಅಲ್ಲದೆ, 6 ಲಕ್ಷ ವಿವಿಧ ಬಣ್ಣದ ಗುಲಾಬಿಗಳು, ಕ್ರೈಸಾಂಥಿ ಮಮ್, ಪಿಂಗ್ ಪಾಂಗ್, ಕಾರ್ನೆಷನ್, ಆಸ್ಟ್ರಮೇರಿಯ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂಡೈಸಿ ಹಾಗೂ ಇತರೆ ಅಲಂಕಾರಿಕ ಹೂವು, ಊಟಿ ಕಟ್ ಫ್ಲವರ್‌ಗಳಿಂದ ವಿವಿಧ ಆಕೃತಿಗಳು ತಲೆ ಎತ್ತಲಿವೆ.

ಅಕ್ಷರಧಾಮ: ಅರಮನೆ ಆವರಣದಲ್ಲಿ ಮಾಗಿ ಉತ್ಸವದ ಅಂಗವಾಗಿ ಈ ಬಾರಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ಹತ್ತನೆ ಪ್ರದರ್ಶನವಾಗಿದ್ದು, ಈ ನಿಟ್ಟಿನಲ್ಲಿ ಹಲವು ಆಕರ್ಷಣೀಯ ಕಾರ್ಯಕ್ರಮ ಆಯೋಜಿಸಲಾಗಿದೆ. ಅವುಗಳಲ್ಲಿ ಲಕ್ಷಾಂತರ ಹೂವುಗಳಿಂದ 50 ಅಡಿ ಅಗಲ, 16 ಅಡಿ ಉದ್ದ, 25 ಅಡಿ ಎತ್ತರದ ನವದೆಹಲಿಯ 'ಅಕ್ಷರಧಾಮ' ಮಾದರಿ ಪ್ರಮುಖ ಆಕರ್ಷಣೆಯಾಗಿರಲಿದೆ.

ವಿವಿಧ ಆಕೃತಿಗಳು: ಫಲಪುಷ್ಪ ಪ್ರದರ್ಶನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಕೃತಿ, ನಂಜನಗೂಡಿನ ನಂಜುಂಡೇಶ್ವರ, ಹದ್ದು, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಬಿಂಬಿಸುವ ಮಾದರಿ, ಆನೆ ಮರಿ, ಆಮೆ, ರಾಜವಂಶದ ಲಾಂಛನ ಗಂಡು ಭೇರುಂಡ, ಮಕ್ಕಳ ಆಕರ್ಷಣೆಗಾಗಿ ಬಂಡೀಪುರ ಅಭಯಾರಣ್ಯದ ಚಿತ್ರಣದೊಂದಿಗೆ 6 ಪ್ರಾಣಿ, 4 ಪಕ್ಷಿಗಳ ಮಾದರಿ ಚಿತ್ರವನ್ನು ಹೂಗಳಿಂದ ರೂಪಿಸಲಾಗುತ್ತದೆ. ಸೆಲ್ಫಿ ಪಾಯಿಂಟ್‌ನಲ್ಲಿ ಹ್ಯಾಟ್ ಮಾದರಿಯ ಚಿತ್ರ, ಕಾರ್ಗಿಲ್ ಯುದ್ಧ ಸ್ಮಾರಕದ ಮಾದರಿ, ಪ್ರವೇಶ ದ್ವಾರಗಳಲ್ಲಿ ನವಿಲು ಮಾದರಿಯ 2 ಚಿತ್ರ, ಸಂವಿಧಾನದ ಪೀಠಿಕೆಯ ಮಾದರಿಯನ್ನು ಹೂವುಗಳಿಂದ ಅಲಂಕರಿಸಲಾಗುತ್ತದೆ. 10ನೇ ಫಲಪುಷ್ಪ ಪ್ರದರ್ಶನದ ನೆನಪಿಗಾಗಿ ಹೂವುಗಳಿಂದ ನಾಮಫಲಕ ರೂಪಿಸಲಾಗುತ್ತದೆ.

ಮತ್ತಷ್ಟು ಆಕರ್ಷಣೆ: ಫಲಪುಷ್ಪ ಪ್ರದರ್ಶನವನ್ನು ಮತ್ತಷ್ಟು ಆಕರ್ಷಣೀಯಗೊಳಿಸಲು ಗೊಂಬೆ ಮನೆಗೆ ಪ್ರವೇಶಿಸುವ ದ್ವಾರಕ್ಕೆ ಹೂವಿನ ಅಲಂಕಾರ ಮಾಡಲಾಗುತ್ತದೆ. ಊಟಿ ಕಟ್ ಫ್ಲವರ್‌ಗಳಿಂದ ಫಲಪುಷ್ಪ ಪ್ರದರ್ಶನದ ಆವರಣವನ್ನು ಅಲಂಕರಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರದರ್ಶನದ ಕೊನೆ ದಿನದವರೆಗೂ ಹೂವುಗಳಿಂದ ರೂಪಿಸಿರುವ ಆಕೃತಿಗಳ ತಾಜಾತನ ಕಾಪಾಡಲು ಒಂದು ಬಾರಿ ಹೂವು, ತರಕಾರಿಗಳ ಬದಲಾಯಿಸಲು ನಿರ್ಧರಿಸಲಾಗಿದೆ. ವರಹಾ ದ್ವಾರ ಉದ್ಯಾನವನದಲ್ಲಿ ವರ್ಟಿಕಲ್ ಗಾರ್ಡನ್ ನಿರ್ಮಿಸಲಾಗುತ್ತಿದೆ.

ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ

ಅಚ್ಚುಕಟ್ಟಾಗಿ ಫಲಪುಷ್ಪ ಪ್ರದರ್ಶನ ಏರ್ಪಡಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. 35 ಬಗೆಯ 25 ಸಾವಿರ ಹೂವಿನ ಕುಂಡ ಗಳನ್ನು ಜೋಡಣೆ ಮಾಡಲಾಗುತ್ತಿದೆ. ಲಕ್ಷಾಂತರ ಹೂವುಗಳಿಂದ ಅಕ್ಷರಧಾಮ ಆಕೃತಿ. ನಂಜುಂಡೇಶ್ವರ, ಮುಮ್ಮಡಿ ಕೃಷ್ಣ ರಾಜ ಒಡೆಯರ್ ಆಕೃತಿ, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಕಾರ್ಯಕ್ರಮದ ಆಕೃತಿ ಸೇರಿದಂತೆ ವಿವಿಧ ಆಕೃತಿಗಳನ್ನು ರೂಪಿಸಲಾಗುತ್ತಿದೆ. ಕಳೆದ ಐದಾರು ದಿನಗಳಿಂದ ಸಿದ್ಧತಾ ಕಾರ್ಯ ಬಿರುಸಾಗಿ ನಡೆಸಲಾಗುತ್ತಿದೆ. ಈ ಬಾರಿ ಪ್ರವಾಸಿಗರ ಆಕರ್ಷಣೆಗೆ ಹಲವು ಕ್ರಮ ಕೈಗೊಳ್ಳಲಾಗಿದೆ.

–ಟಿ.ಎಸ್.ಸುಬ್ರಹ್ಮಣ್ಯ, ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ

ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬರುವ 500 ಮಂದಿ ಗಣ್ಯರು, ಪ್ರವಾಸಿಗರಿಗೆ ಸಾಂಕೇತಿಕವಾಗಿ ಔಷಧಿಯುಕ್ತ ಗಿಡಗಳಾದ ಅಲೋವೆರ, ತುಳಸಿ, ಮಲ್ಲಿಗೆ, ವೀಳ್ಯದೆಲೆ ಹಾಗೂ ಚಕ್ರಮುನಿ ಗಿಡಗಳನ್ನು ಉಚಿತವಾಗಿ ವಿತರಿಸಲಾಗುವುದು. ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸುವ ಸಮಯದಲ್ಲಿ ಶ್ರೀ ಜಯಚಾಮರಾಜ ಒಡೆಯರ್ ರಚಿಸಿರುವ ಕೀರ್ತನೆಗಳು ಸೇರಿದಂತೆ ಕ್ಲಾಸಿಕಲ್ ಮ್ಯೂಸಿಕ್ ಆಲಿಸಬಹುದಾಗಿದೆ. ಫಲಪುಷ್ಪ ಪ್ರದರ್ಶನದ ದಿನದಂತೆ ಅರಮನೆಗೆ ಹತ್ತು ದಿನ ಸಂಜೆ 7ರಿಂದ ರಾತ್ರಿ 9 ಗಂಟೆವರೆಗೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲಾಗುತ್ತದೆ.

ಈ ಬಾರಿ ಪ್ರವೇಶ ಶುಲ್ಕ ನಿಗದಿ

ಅರಮನೆ ಆವರಣದಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನಕ್ಕೆ ಈ ಬಾರಿ ಪ್ರವೇಶ ಶುಲ್ಕ ನಿಗಧಿ ಮಾಡಲಾಗಿದೆ. ದೇಶೀಯ ಹಾಗೂ ವಿದೇಶಿ ವಯಸ್ಕರಿಗೆ 30 ರೂ., 10 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶ, 10ರಿಂದ 16 ವರ್ಷದ ಮಕ್ಕಳಿಗೆ 10 ರೂ. ಪ್ರವೇಶ ಶುಲ್ಕವಿರುತ್ತದೆ.

ಡಿ.21ರಂದು ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ

ಮೈಸೂರು, ಡಿ.16(ಎಂಟಿವೈ)– ಅರಮನೆ ಆವರಣದಲ್ಲಿ ಆಯೋಜಿಸಿರುವ 10 ದಿನಗಳ ಫಲಪುಷ್ಪ ಪ್ರದರ್ಶನವನ್ನು ಡಿ.21ರಂದು ಸಂಜೆ 5 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪಾಲ್ಗೊಳ್ಳಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮಲ್ಲಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅರಣ್ಯ, ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಸಿ.ಅನಿಲ್‌ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ ಅಧ್ಯಕ್ಷ ಎ.ಬಿ.ರಮೇಶ್‌ಕುಮಾರ್ ಬಂಡಿಸಿದ್ದೇಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಸೇರಿದಂತೆ ಶಾಸಕರು, ವಿಧಾನ ಪರಿಷತ್ ಸದಸ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳೂ ಹಾಗೂ ಅರಮನೆ ಮಂಡಳಿ ಅಧ್ಯಕ್ಷರೂ ಆದ ಡಾ.ಶಾಲಿನಿ ರಜನೀಶ್, ಪ್ರಾದೇಶಿಕ ಆಯುಕ್ತ ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಪಾಲ್ಗೊಳ್ಳಲಿದ್ದಾರೆ ಎಂದರು.

ವಿಜಯೇಂದ್ರ ಪಟ್ಟು

ಅನ್ವರ್ ಮಾಣಿಪ್ಪಾಡಿ ನೀಡಿದ ವರದಿಯನ್ನೂ ಸಂಪುಟ ತಿರಸ್ಕರಿಸಿತು.

ನಿಮ್ಮ ಕಾಂಗ್ರೆಸ್ ನಾಯಕರ ಬಂಡವಾಳ ಬಯಲಾಗುತ್ತದೆ ಎಂದು ಎರಡೂ ವರದಿಗಳನ್ನು ತಿರಸ್ಕರಿಸಿ, ಈಗ ನನ್ನ ತೇಜೋವಧೆ ಮಾಡಲು ಬಂದಿದ್ದೀರಾ. ಇಂತಹ ಬೆದರಿಕೆಗಳಿಗೆ ಜಗ್ಗುವುದೂ ಇಲ್ಲ, ಬಗ್ಗುವುದೂ ಇಲ್ಲ ಎಂದರು.

ಸರಣಿ ಹಗರಣಗಳಲ್ಲಿ ಸಿಲುಕಿ ವಿಲವಿಲ ಒದ್ದಾಡುತ್ತಿರುವ ನೀವು, ಜನರ ದಿಕ್ಕು ತಪ್ಪಿಸಲು ಇಂತಹ ಚಿಲ್ಲರೆ ಆರೋಪಗಳನ್ನು ಮಾಡುತ್ತಿದ್ದೀರಾ, ನಾನೇಕೆ ವರದಿ ನೀಡಬೇಡ ಎಂದು ಮಾಣಿಪ್ಪಾಡಿ ಅವರಿಗೆ ಆಮಿಷ ಒಡ್ಡಲಿ.

ಕಾಂಗ್ರೆಸ್ ನಾಯಕರು ಲಕ್ಷಾಂತರ ಕೋಟಿ ರೂ. ಮೌಲ್ಯದ ವಕ್ಫ್ ಆಸ್ತಿ ನುಂಗಿ ನೀರು ಕುಡಿದಿದ್ದಾರೆ. ಅವರ ರಕ್ಷಣೆ ಉದ್ದೇಶದಿಂದ ಉಪಲೋಕಾಯುಕ್ತರು ನೀಡಿದ ವರದಿಯನ್ನು ನೀವು ಸ್ವೀಕರಿಸಲಿಲ್ಲ. ನನ್ನ ಮೇಲಿನ ಆರೋಪ ಸೇರಿದಂತೆ ಉಳಿದ ಎಲ್ಲಾ ಪ್ರಕರಣಗಳನ್ನೂ ಸಿಬಿಐಗೆ ವಹಿಸಿ, ಪ್ರಧಾನಿ ಅವರು ಪ್ರತ್ಯೇಕ ತೀರ್ಮಾನ ತೆಗೆದುಕೊಳ್ಳುವ ಅಗತ್ಯವಿಲ್ಲ. ನೀವೇ ಸಂಪುಟದಲ್ಲಿ ನಿರ್ಧಾರ ಕೈಗೊಂಡು ತನಿಖೆಗೆ ನೀಡಿ ಎಂದು ಸವಾಲು ಹಾಕಿದರು.

ನನ್ನ ಮೇಲಿನ 150 ಕೋಟಿ ರೂ. ಆಮಿಷ ಆರೋಪದ ಜೊತೆಗೆ ಅನ್ವರ್ ಮಾಣಿಪ್ಪಾಡಿ ವರದಿ ಸ್ವೀಕರಿಸಿ, ಅದರ ಬಗ್ಗೆಯೂ ಸಿಬಿಐ ತನಿಖೆ ಮಾಡಿಸಿ. ವಕ್ಫ್ ಜಾಗದ ವಿಚಾರದಲ್ಲಿ ಲಕ್ಷ ಲಕ್ಷ ಕೋಟಿ ರೂ. ಅವ್ಯವಹಾರ ಆಗಿದೆ ಎಂಬ ವರದಿ ಇದೆ. ಅದರ ಸಮಗ್ರ ತನಿಖೆಯೂ ಆಗಲಿ. ಆಡಳಿತ ಪಕ್ಷದವರು ಕೆಲಸಕ್ಕೆ ಬಾರದ ಸಂಗತಿಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ, ಬಾಣಂತಿಯರ ಸಾವು, ಹಸುಗೂಸುಗಳ ಮರಣ, ಉತ್ತರ ಕರ್ನಾಟಕದ ವಿಚಾರಗಳು ಸದನದಲ್ಲಿ ಚರ್ಚೆ ಆಗಬಾರದೆಂಬ ಉದ್ದೇಶ ಇದರ ಹಿಂದಿದೆ. ಯಡಿಯೂರಪ್ಪ ಅವರು, ತಮ್ಮ ಆಡಳಿತಾವಧಿಯಲ್ಲಿ ಕೋವಿಡ್ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಿದ್ದರು. ಆದರೆ, ಅವರನ್ನೇ ಗುರಿಯಾಗಿಸಿ ರಾಜಕೀಯವಾಗಿ ಮುಗಿಸುವ ದುರುದ್ದೇಶದಿಂದ ಅರೆಬರೆ ಬೆಂದ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹ ಅವರ ಮಧ್ಯಂತರ ವರದಿ ಇಟ್ಟುಕೊಂಡು ಎಫ್‌ಐಆರ್ ದಾಖಲಿಸಿದ್ದಲ್ಲದೆ, ಶಾಸಕ ಮುನಿರತ್ನ ವಿಚಾರವನ್ನೂ ಚರ್ಚಿಸಲು ಮುಂದಾಗಿದ್ದಾರೆ. ಸಿಎಜಿ ವರದಿ ಸಂಬಂಧ 25 ಪ್ರಕರಣಗಳನ್ನು, ಸಿದ್ದರಾಮಯ್ಯ ಸರ್ಕಾರ ದಾಖಲಿಸಿ, ಯಡಿಯೂರಪ್ಪ ಅವರೊಂದಿಗೆ ಬಿಜೆಪಿಯನ್ನೂ ಮುಗಿಸಲು ಪಿತೂರಿ ಮಾಡಿತು. ಯಡಿಯೂರಪ್ಪ ಬಿಜೆಪಿ ರಾಜ್ಯಾಧ್ಯಕ್ಷರಾದರೆ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಗದು ಎಂಬ ಆಲೋಚನೆಯಿಂದ ಇಂತಹ ಕೆಲಸ ಮಾಡಿದ್ದರು. ಇದ್ಯಾವುದೂ ನಮಗೆ ಹೊಸದಲ್ಲ. ಸಚಿವ ಪ್ರಿಯಾಂಕ್ ಖರ್ಗೆ ನನ್ನ ಮೇಲೆ ಆರೋಪ ಮಾಡಿದ್ದು, ಇತ್ತೀಚೆಗೆ ಅವರ ಬಂಡವಾಳವೂ ಬಯಲಾಗಿದೆ. ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನೂರಾರು ಕೋಟಿ ರೂ. ಬೆಲೆಬಾಳುವ 5 ಎಕರೆ ಭೂಮಿಯನ್ನು ಅವರ ಸಹೋದರ ರಾಹುಲ್ ಖರ್ಗೆಗೆ ಅಕ್ರಮವಾಗಿ ಮಂಜೂರು ಮಾಡಿಸಿಕೊಂಡು ನಂತರ ಹಿಂತಿರುಗಿಸಲಿಲ್ಲವೇ ಎಂದು ಪ್ರಶ್ನಿಸಿದರು.

ಅನ್ವರ್ ಮಾಣಿಪ್ಪಾಡಿ ಹೇಳಿಕೆ!

ಬರುವುದಿಲ್ಲವೇ? ಎಂದು ಹೇಳಿದ್ದರು.

ಇಂದು ಸುದ್ದಿಗಾರರು ಮಾಣಿಪ್ಪಾಡಿ ಅವರನ್ನು ಭೇಟಿ ಮಾಡಿ ಪ್ರಿಯಾಂಕ್ ಖರ್ಗೆ ಪ್ರದರ್ಶಿಸಿದ ವೀಡಿಯೋ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಮಾತನಾಡಿದ ಅವರು, ವಿಜಯೇಂದ್ರ ಅವರು 150 ಕೋಟಿ ರೂ. ಕೊಡುತ್ತಾನೆ ಎಂದು ಹೇಳಿಲ್ಲ. ಆದರೆ ನೀವು ಬಹಳ ಕಷ್ಟಪಟ್ಟಿದ್ದೀರಿ ನಿಮಗೆ ಬೇರೆಯವರು 150 ಕೋಟಿ ರೂ. ಕೊಡುತ್ತಾರೆ ಎಂದಿದ್ದರು. ಅವರು ನನ್ನ ನಿಲುವು ಏನು ಎಂಬುದನ್ನು ಟೆಸ್ಟ್ ಮಾಡಲು ಈ ಮಾತು ಹೇಳಿದ್ದರು ಎಂಬುದು 2 ದಿನದ ನಂತರ ನನಗೆ ಮನವರಿಕೆ ಆಯಿತು. ಆದರೆ ಅಷ್ಟರೊಳಗಾಗಿ ಅವರು ಆಫರ್ ಕೊಟ್ಟಿದ್ದ ವಿಷಯದ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿಬಿಟ್ಟಿದ್ದೆ ಎಂದು ಹೇಳಿದರು.

ಮೈಸೂರು ಭಾಗದ ಆಮದು, ರಫ್ತುದಾರರಿಗೆ ಮಂಗಳೂರು ಬಂದರು ಅತ್ಯಂತ ಲಾಭದಾಯಕ

ನವ ಮಂಗಳೂರು ಬಂದರು ಪ್ರಾಧಿಕಾರದ ಅಧ್ಯಕ್ಷ ಡಾ.ವೆಂಕಟರಮಣ ಅಕ್ಕರಾಜು ಅಭಿಮತ



ಮೈಸೂರು ಭಾಗದ ಆಮದು ಮತ್ತು ರಫ್ತುದಾರರೊಂದಿಗಿನ ಸಭೆಯನ್ನು ಎನ್‌ಎಂಪಿಎ ಅಧ್ಯಕ್ಷ ವೆಂಕಟರಮಣ ಅಕ್ಕರಾಜು ಉದ್ಘಾಟಿಸಿದರು. ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಶಿವಲಿಂಗಯ್ಯ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಮತ್ತಿತರರಿದ್ದರು.

ಮೈಸೂರು, ಡಿ.16(ಎಂಕೆ)– ಮೈಸೂರು ಭಾಗದ ಆಮದು ಮತ್ತು ರಫ್ತುದಾರರಿಗೆ ಮಂಗಳೂರು ಬಂದರು ಅತ್ಯಂತ ಸೂಕ್ತ, ಪಾರದರ್ಶಕ ಹಾಗೂ ಲಾಭದಾಯಕ ಸಾಗರ ಸರಕು ಸಾಗಾಣಿಕೆ ಮಾರ್ಗವಾಗಿದೆ ಎಂದು ನವ ಮಂಗಳೂರು ಬಂದರು ಪ್ರಾಧಿಕಾರದ(ಎನ್‌ಎಂಪಿಎ) ಅಧ್ಯಕ್ಷ ಡಾ.ವೆಂಕಟರಮಣ ಅಕ್ಕರಾಜು ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ನವ ಮಂಗಳೂರು ಬಂದರು ಪ್ರಾಧಿಕಾರ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಆಮದು ಮತ್ತು ರಫ್ತುದಾರರೊಂದಿಗಿನ ಬಿಸಿನೆಸ್ ಮೀಟಿಂಗ್ ಉದ್ಘಾಟಿಸಿ ಮಾತನಾಡಿದ ಅವರು, ಮಂಗಳೂರು ಬಂದರು ಅಭಿವೃದ್ಧಿಯತ್ತ ಸಾಗುತ್ತಿದ್ದು, ಲಾಭದಾಯಕವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಸರಕುಗಳನ್ನು ರಫ್ತು ಮಾಡುವಲ್ಲಿ ಇತರೆ ಬಂದರುಗಳೊಂದಿಗೆ ಸ್ಪರ್ಧಾತ್ಮಕ ಪೈಪೋಟಿ ನಡೆಸುತ್ತಿದೆ. ಮೈಸೂರು ಭಾಗದ ಉದ್ಯಮಿಗಳು ತಮ್ಮ ಸರಕುಗಳನ್ನು ಅತ್ಯಂತ ಕಡಿಮೆ ತೆರಿಗೆ ವೆಚ್ಚದಲ್ಲಿ ಸಾಗಾಣಿಕೆ ಮಾಡಬಹುದಾಗಿದ್ದು, ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ರಾಜ್ಯದ ಆಮದು ಮತ್ತು ರಫ್ತುದಾರರು ಮಂಗಳೂರು ಬಂದರಿನ ಅನುಕೂಲ ಪಡೆಯುತ್ತಿದ್ದಾರೆ. ಕಳೆದ 5 ವರ್ಷದ ಹಿಂದೆ 111 ಕೋಟಿ ರೂ. ಲಾಭ ಗಳಿಸಿದ್ದ ಬಂದರು, ಪ್ರಸಕ್ತ ಸಾಲಿನಲ್ಲಿ 450 ಕೋಟಿ ರೂ. ಲಾಭ ಗಳಿಸಿದೆ. ಮುಂದಿನ ವರ್ಷ 550 ಕೋಟಿ ರೂ. ಲಾಭದ ನಿರೀಕ್ಷೆಯಲ್ಲಿದ್ದೇವೆ. ಇದು ನಾವು ಸರಕು ಸಾಗಾಟದಲ್ಲಿ ಹೊಂದಿರುವ ಪ್ರಗತಿಯನ್ನು ತೋರುತ್ತದೆ ಎಂದರು.

ಸ್ಥಳೀಯ ಆಡಳಿತ ಹಾಗೂ ದೇಶದ ಇತರೆ ಬಂದರುಗಳ ನಡುವೆ ಉತ್ತಮ ಬಾಂಧವ್ಯ ಹೊಂದಿರುವ ಮಂಗಳೂರು ಬಂದರು, ಸ್ವಚ್ಛತೆಯಿಂದ ಕೂಡಿದ್ದು ಶೇ.100 ರಷ್ಟು ಸೌರಶಕ್ತಿಯನ್ನು ಅವಲಂಬಿಸಿಕೊಂಡಿದೆ. ಡಿಜಿಟಲೀಕರಣ ಅಳವಡಿಕೆಯಿಂದ ರಫ್ತುದಾರರು ಯಾರನ್ನು ಭೇಟಿಯಾಗದೆ, ಮಧ್ಯವರ್ತಿಗಳ ಅಗತ್ಯವಿಲ್ಲದೆ ತಮ್ಮ ಸರಕನ್ನು ಸಾಗಾಣಿಕೆ ಮಾಡಬಹುದು. ದೇಶದ ಇತರೆ ಬಂದರುಗಳಿಗೆ ಹೋಲಿಕೆ ಮಾಡಿದರೆ ತೆರಿಗೆ ಶುಲ್ಕ ಕಡಿಮೆ ಇದ್ದು, ಅಂತರರಾಷ್ಟ್ರೀಯ ಗುಣಮಟ್ಟದ ಸೇವೆ ಹಾಗೂ ಸುರಕ್ಷತೆ ಪಡೆಯಬಹುದಾಗಿದೆ. ಮೈಸೂರು ಪ್ರವಾಸೋದ್ಯಮ ಮಾತ್ರವಲ್ಲದೆ ಸಾಫ್ಟ್‌ವೇರ್ ಕೇಂದ್ರವಾಗಿಯೂ ಬೆಳೆಯುತ್ತಿದ್ದು, ಸ್ಥಳೀಯ ಉದ್ಯಮಿಗಳು ನವ ಮಂಗಳೂರು ಬಂದರು ಸಹಕಾರ ನೀಡಲಿದೆ ಎಂದು ತಿಳಿಸಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಮಂಗಳೂರು ಬಂದರು ರಾಜ್ಯದ ಏಕೈಕ ಬಂದರಾಗಿದ್ದು, ಮೈಸೂರು ಮತ್ತು ನಂಜನಗೂಡು ಭಾಗದ 156ಕ್ಕೂ ಹೆಚ್ಚು ಉದ್ಯಮಿಗಳು ಈ ಬಂದರಿನ ಮೂಲಕ ತಮ್ಮ ಉತ್ಪನ್ನಗಳನ್ನು ರಫ್ತು ಮಾಡುತ್ತಿದ್ದಾರೆ. ಅವರ ಅನುಕೂಲಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಿದ್ದು, ಎನ್‌ಎಂಪಿಎ ಆಡಳಿತ ಸಿಬ್ಬಂದಿ ಜೊತೆಗೂಡಿ ಅನುಕೂಲತೆ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸಂಪೂರ್ಣ ಸಹಕಾರ...

ಮೈಸೂರು ಭಾಗದ ಆಮದು ಮತ್ತು ರಫ್ತುದಾರರಿಗೆ ಹತ್ತಿರದಲ್ಲಿ ಮಂಗಳೂರು ಬಂದರು ಇದ್ದು, ಕೈಗಾರಿಕೋದ್ಯಮಿಗಳ ಸರಕು ಸಾಗಾಣಿಕೆಯಲ್ಲಿ ಯಾವುದೇ ಸಹಕಾರ, ಸಲಹೆ ಬೇಕಿದ್ದರೂ ಸಂಪೂರ್ಣ ಸಹಕಾರ ನೀಡಲಾಗುವುದು.

- ಶಿವಲಿಂಗಯ್ಯ, ಜಂಟಿ ನಿರ್ದೇಶಕ, ಜಿಲ್ಲಾ ಕೈಗಾರಿಕೆ ಕೇಂದ್ರ

ರಸ್ತೆ ಸಂಪರ್ಕ ಐದಾರು ತಿಂಗಳಲ್ಲಿ ಸರಿಯಾಗಲಿದೆ: ಮೈಸೂರಿನಿಂದ ಮಂಗಳೂರು ಮಾರ್ಗದ ರಸ್ತೆ ಸಂಪರ್ಕ ಸದ್ಯದ ಪರಿಸ್ಥಿತಿಯಲ್ಲಿ ಚೆನ್ನಾಗಿಲ್ಲವಾದರೂ ಮುಂದಿನ ಐದಾರು ತಿಂಗಳಲ್ಲಿ ಸರಿಯಾಗುವ ಸಾಧ್ಯತೆ ಇದೆ. ಅಲ್ಲದೆ ಈಗಾಗಲೇ ರೈಲುಗಳ ಮೂಲಕವೂ ಸರಕುಗಳನ್ನು ಸಾಗಿಸಲಾಗುತ್ತಿದೆ. ಮಂಗಳೂರು ಬಂದರಿನ ಮೂಲಕ ಕಡಿಮೆ ವೆಚ್ಚದಲ್ಲಿ ಯುರೋಪ್ ಹಾಗೂ ಅರಬ್ ದೇಶಗಳಿಗೆ ಉತ್ಪನ್ನ ಸಾಗಾಟಕ್ಕೆ ಅನುಕೂಲವಾಗಲಿದೆ ಎಂದರು. ನವ ಮಂಗಳೂರು ಬಂದರು ಪ್ರಾಧಿಕಾರ ಸಹಾಯ ನಿರ್ದೇಶಕಿ ಶಾಂತಾ, ಸರ್ವೇಕ್ಷಣಾ ಅಧಿಕಾರಿ ಕೆ.ಪದ್ಮನಾಭಾಚಾರ್ ಮತ್ತಿತರರಿದ್ದರು.

ಹೆತ್ತವರು, ಗುರು ಹಿರಿಯರ ಮಾತು ತಿರಸ್ಕರಿಸುತ್ತಿರುವ ಯುವ ಸಮೂಹ

ಪ್ರವಚನಕಾರ ಡಾ.ಪಾವಗಡ ಪ್ರಕಾಶ್ ಬೇಸರ



ವೇದ, ಉಪನಿಷತ್ ಪರಿಚಯ, ದತ್ತ ಅವಧೂತ ಅವತಾರ ವಿಷಯಗಳ ಪ್ರವಚನ ಮಾಲಿಕೆ ಕಾರ್ಯಕ್ರಮವನ್ನು ಖ್ಯಾತ ಪ್ರವಚನಕಾರ ಡಾ.ಪಾವಗಡ ಪ್ರಕಾಶ್ ಉದ್ಘಾಟಿಸಿದರು.

ಮೈಸೂರು, ಡಿ.16(ಎಸ್‌ಪಿಎನ್)– ಇಂದಿನ ಯುವ ಸಮೂಹ ವಿದೇಶಿ ಸಂಸ್ಕೃತಿಗೆ ಮಾರುಹೋಗಿ, ತಂದೆ–ತಾಯಿ, ಗುರು ಹಿರಿಯರ ಮಾತನ್ನು ತಿರಸ್ಕರಿಸುತ್ತಿರುವುದು ಬೇಸರದ ಸಂಗತಿ ಎಂದು ಖ್ಯಾತ ಪ್ರವಚನಕಾರ ಡಾ.ಪಾವಗಡ ಪ್ರಕಾಶ್ ಅಭಿಪ್ರಾಯಪಟ್ಟರು.

ಮೈಸೂರು–ಊಟಿ ರಸ್ತೆಯ ಅವಧೂತ ದತ್ತಪೀಠ ಆವರಣದಲ್ಲಿ ದತ್ತಸೇನೆ ವತಿಯಿಂದ ಏರ್ಪಡಿಸಿದ್ದ ಮೂರು ದಿನಗಳ ವೇದ ಪರಿಷತ್ ದರ್ಶನ, ಉಪನಿಷತ್ ಪರಿಚಯ, ದತ್ತ ಅವಧೂತ ಅವತಾರ ವಿಷಯಗಳ ಪ್ರವಚನ ಮಾಲಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವೇದ ಉಪನಿಷತ್‌ಗಳ ಮಹತ್ವ ಇಂದಿನ ಯುವ ಪೀಳಿಗೆ ಅರಿತುಕೊಂಡು ಜೀವನ ಕಟ್ಟಿಕೊಳ್ಳಬೇಕಿದೆ. ಈ ನೆಲದಲ್ಲಿ ದೇವಾನುದೇವತೆಗಳು, ಯತಿಗಳು, ವಿದ್ವಾಂಸರ ತಪಸ್ಸಿನ ಫಲದಿಂದಾಗಿ ಆಧ್ಯಾತ್ಮಿಕ ಕ್ಷೇತ್ರ ನಿರ್ಮಾಣವಾಗಿದೆ. ನಮ್ಮ ಪರಂಪರೆಗಿರುವ ಮೌಲ್ಯಗಳು ಜಗತ್ತಿನ ಯಾವುದೇ ದೇಶದಲ್ಲೂ ನೋಡಲು ಸಾಧ್ಯವಿಲ್ಲ. ಈ ಪರಂಪರೆಯನ್ನು ನಾವು ಉಳಿಸಿ–ಬೆಳೆಸಿಕೊಂಡು ಹೋಗುವುದು ನಮ್ಮ–ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಇದರಲ್ಲಿ ಪೋಷಕರ ಪಾತ್ರ ಮಹತ್ವದ್ದು ಎಂದರು.

ಕ್ಷಣಿಕ ಸುಖಕ್ಕೆ ನಮ್ಮ ಐತಿಹಾಸಿಕ ಪರಂಪರೆಯನ್ನು ಮರೆಯುವುದು ತರವಲ್ಲ. ಆಧ್ಯಾತ್ಮ ಕ್ಷೇತ್ರದ ಹಳೆಯ ವೈಭವವನ್ನು ಪುನರ್ ಸ್ಥಾಪಿಸಲು ವೇದ–ಉಪನಿಷತ್‌ಗಳನ್ನು ಯುವಕರಿಗೆ ಪರಿಚಯಿಸಿ, ಆಚರಣೆಗೆ ತರುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿ. ಅಲ್ಲದೆ, ಭಗವದ್ಗೀತೆಯನ್ನು ಶಾಲಾ ಹಂತದಿಂದಲೇ ಮಕ್ಕಳಿಗೆ ಕಲಿಸಬೇಕು. ಭಗವದ್ಗೀತೆಯಲ್ಲಿನ ಉತ್ತಮ ಅಂಶಗಳು, ಸಣ್ಣವಯಸ್ಸಿನಿಂದಲೇ ಪರಿಚಯಿಸಿದರೆ, ಉತ್ತಮ ಸಮಾಜ ನಿರ್ಮಾಣ ಸಾಧ್ಯವಿದೆ ಎಂದು ಸಲಹೆ ನೀಡಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಮೈಸೂರಿನಲ್ಲಿ ಮೂರು ದಿನಗಳ ಕಾಲ ನಡೆಯುತ್ತಿರುವ ಡಾ.ಪಾವಗಡ ಪ್ರಕಾಶ್ ಪ್ರವಚನಗಳನ್ನು ಕೇಳಲೆಂದೇ ಹಲವು ಸಾಂಸ್ಕೃತಿಕ ಚಿಂತಕರು ಕಾತುರದಲ್ಲಿರುವುದು ಸಂತಸದ ವಿಚಾರ. ಇಂದಿನ ಕಾರ್ಯಕ್ರಮ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಗಳ ದಿವ್ಯಸಾನ್ನಿಧ್ಯದಲ್ಲಿ ನಡೆಯುತ್ತಿರುವುದರಿಂದ ಮೌಲ್ಯಯುತ ಎಂದರು.

ಈ ವೇಳೆ ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರಿನ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಕೆ.ರಘುರಾಮ್ ವಾಜಪೇಯಿ, ಉದ್ಯಮಿ ಮಹೇಶ್ ಶೆಣೈ, ದತ್ತ ಸೇನೆಯ ಸತ್ಯನಾರಾಯಣ, ಯುವ ಮುಖಂಡ ವಿಕಾಸ್ ಶಾಸ್ತ್ರಿ ಶ್ರೇಯಸ್ ಮತ್ತಿತರು ಉಪಸ್ಥಿತರಿದ್ದರು.

ಮನೆಯಲ್ಲಿ ಬಂದೂಕು ಇರಿಸಿಕೊಂಡರೆ ಹುಷಾರ್...

ಬಂದೂಕು ತರಬೇತಿ ಪಡೆದವರಿಗೆ ಅಪರ ಪೊಲೀಸ್ ಅಧೀಕ್ಷಕ ನಾಗೇಶ್ ಸಲಹೆ



ಡಿಎಆರ್ ಮೈದಾನದಲ್ಲಿ ಸೋಮವಾರ ನಾಗರಿಕ ಬಂದೂಕು ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.16(ಎಂಕೆ)– ಮನೆಯಲ್ಲಿ ಬಂದೂಕುಗಳನ್ನು ಅತ್ಯಂತ ಜಾಗರೂಕತೆಯಿಂದ ಬಳಸುವಂತೆ ಅಪರ ಜಿಲ್ಲಾ ಪೊಲೀಸ್ ಅಧೀಕ್ಷಕ(ಅಪರಾಧ) ಎಲ್.ನಾಗೇಶ್ ಎಚ್ಚರಿಸಿದರು.

ಮೈಸೂರಿನ ಜ್ಯೋತಿನಗರದಲ್ಲಿರುವ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಕಳೆದೊಂದು ತಿಂಗಳಿಂದ ನಡೆದ ನಾಗರಿಕ ಬಂದೂಕು ತರಬೇತಿ ಶಿಬಿರದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ಬಂದೂಕುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಲು ಅವಕಾಶವಿದೆ. ಆದರೆ ಬಳಸುವಾಗ ಎಚ್ಚರಿಕೆ ವಹಿಸುವುದು ಅವಶ್ಯವಾಗಿದೆ ಎಂದರು.

ಒಂದು ತಿಂಗಳಿಂದ ಬಂದೂಕು ತರಬೇತಿ ಪಡೆದ 52 ಮಂದಿ ಸಾರ್ವಜನಿಕರು ಸಹ ಪೊಲೀಸರಂತೆ ಶಿಸ್ತು ಬದ್ಧರಾಗಿ ಕಾಣುತ್ತಿದ್ದಾರೆ. ಬಂದೂಕು ತರಬೇತಿ ಪಡೆದವರು ಮಾತ್ರವೇ ಬಂದೂಕುಗಳನ್ನು ಖರೀದಿಸಲು ಅವಕಾಶ ನೀಡಲಾಗುವುದು. ಆದರೆ, ಮನೆಯಲ್ಲಿ ಮಕ್ಕಳಿಗೆ ಬಂದೂಕುಗಳು ಸಿಗದಂತೆ ನೋಡಿಕೊಳ್ಳಿ. ಯಾವಾಗಲೂ ಅನ್‌ಲೋಡ್ ಆಗಿಟ್ಟಿರಬೇಕು. ಕ್ಲೀನ್ ಮಾಡುವಾಗ ಬಹಳ ಎಚ್ಚರಿಕೆ ವಹಿಸಬೇಕು ಎಂದು ತಿಳಿಹೇಳಿದರು.

ಬಂದೂಕು ಇಟ್ಟುಕೊಂಡಿರುವವರು ಕಾನೂನುಬಾಹಿರ ಚಟುವಟಿಕೆಗಳಿಗಾಗಲೀ ಅಥವಾ ಬೇರೆಯವರಿಗೆ ನೀಡುವ ಕೆಲಸವನ್ನು ಮಾಡಬಾರದು. ನಿಯಗಳಿಗೆ ಅನುಸಾರವಾಗಿ ಖರೀದಿಸಿದ ಬಂದೂಕುಗಳನ್ನು ನಿಯಮಾನುಸಾರವೇ ಬಳಕೆ ಮಾಡಬೇಕು. ಚುನಾವಣೆ ಸಂದರ್ಭದಲ್ಲಿ ಪೊಲೀಸ್ ಇಲಾಖೆಗೆ ಒಪ್ಪಿಸಿ, ಚುನಾವಣೆ ನಂತರ ಪಡೆದುಕೊಳ್ಳಬೇಕು. ಬೇರೆಯವರ ಹೆಸರಿಗೆ ಬಂದೂಕು ವರ್ಗಾಯಿಸುವಾಗಲೂ ಕಾನೂನು ನಿಯಮ ಪಾಲಿಸಿ ಎಂದರು.

ಇದೇ ವೇಳೆ ತರಬೇತಿಯಲ್ಲಿ ಉತ್ತಮವಾಗಿ ಫೈರಿಂಗ್ ಮಾಡುವ ಮೂಲಕ ಅಂಕಗಳಿಸಿದವರಿಗೆ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಡಿಎಆರ್ ಡಿವೈಎಸ್‌ಪಿ ವೀರಣ್ಣ, ಇನ್ಸ್‌ಪೆಕ್ಟರ್ ದೇವಿಪ್ರಸಾದ್, ಸಬ್‌ಇನ್ಸ್‌ಪೆಕ್ಟರ್ ಸುನೀಲ್, ತರಬೇತಿ ಸಿಬ್ಬಂದಿ ಉಪಸ್ಥಿತರಿದ್ದರು.

ಡಿ. 27ಕ್ಕೆ 'ಔಟ್ ಆಫ್ ಸಿಲಬಸ್' ಬಿಡುಗಡೆ

ಮೈಸೂರು,ಡಿ.16(ಎಂಟಿವೈ)– ಯುವ ಜನರಿಗೆ ಮನೋರಂಜನೆಯೊಂದಿಗೆ ಕುಟುಂಬ ಸದಸ್ಯರೆಲ್ಲರೂ ನೋಡಬಹುದಾದ ಕಥೆಯುಳ್ಳ 'ಔಟ್ ಆಫ್ ಸಿಲಬಸ್' ಕನ್ನಡ ಚಲನಚಿತ್ರ ಡಿ. 27ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಟ, ನಿರ್ದೇಶಕ ಪ್ರದೀಪ್ ದೊಡ್ಡಯ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ್ಯಡ್ 6 ಎಂಟರ್‌ಟೈನ್ಮೆಂಟ್ ಸಂಸ್ಥೆ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ 'ಔಟ್ ಆಫ್ ಸಿಲಬಸ್' ಚಲನಚಿತ್ರದಲ್ಲಿ ನಾಯಕ ನಟನಾಗಿ ಮೊದಲ ಬಾರಿಗೆ ಅಭಿನಯಿಸಿದ್ದೇನೆ. ಈ ಚಿತ್ರಕ್ಕೆ ನಾನೇ ಕಥೆ–ಚಿತ್ರಕಥೆ, ಸಾಹಸ ನಿರ್ದೇಶನ ಮಾಡಿದ್ದೇನೆ. ಹೃತಿಕಾ ಶ್ರೀನಿವಾಸ್ ನಾಯಕಿಯಾಗಿದ್ದು, ತಾರಾಗಣದಲ್ಲಿ ಹಿರಿಯ ನಟರಾದ ಯೋಗರಾಜ್ ಭಟ್, ಅಚಿತ್ ಕುಮಾರ್ ರಾಮಕೃಷ್ಣ, ಚಿಕ್ಕಲಾ ಬಿರಾದಾರ್ ಇತರರು ಅಭಿನಯಿಸಿದ್ದಾರೆ. ಯುವ ಜನರಿಗೆ ಉತ್ತಮ ಮನರಂಜನೆ ನೀಡುವುದಲ್ಲದೇ ಕುಟುಂಬ ಸಮೇತ ಎಲ್ಲರೂ ನೋಡುವ ಈ ಸಿನಿಮಾದಲ್ಲಿ ಹಾಡುಗಳಿದ್ದು, ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ. ಸಾಹಸ ದೃಶ್ಯಗಳು ಅದ್ಭುತವಾಗಿ, ಸೊಗಸಾಗಿ ಮೂಡಿ ಬಂದಿವೆ ಪುಷ್ಪಾ 2 ಸಿನಿಮಾ ಹಂಚಿಕೆದಾರರಾದ ಶ್ರೀ ಗೋಕುಲ್ ಫಿಲಂಸ್ ನಮ್ಮ ಚಿತ್ರದ ಹಂಚಿಕೆಗೂ ಮುಂದಾಗಿದ್ದಾರೆ. ಈ ಚಿತ್ರವನ್ನು ನೋಡಿ, ನಮ್ಮ ಪ್ರಯತ್ನ ಬೆಂಬಲಿಸಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಟಿಯರಾದ ಪ್ರಕೃತಿ, ಐಶ್ವರ್ಯ ರೇಚಲ್, ಸಹ ನಿರ್ದೇಶಕ ಚೇತನ್ ಇದ್ದರು.

ಜ.4ರಂದು ಜಿಲ್ಲಾ ಅಭಿವೃದ್ಧಿ ಸಮನ್ವಯ, ಉಸ್ತುವಾರಿ ಸಮಿತಿ ಸಭೆ

ಮೈಸೂರು,ಡಿ.16– ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ 2024–25ನೇ ಸಾಲಿನ ತ್ರೈಮಾಸಿಕದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ (ದಿಶಾ ಸಮಿತಿ) ಸಭೆಯನ್ನು ಜ.4, 2025ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಎಂ.ಗಾಯತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಗೂರು ಉಪಠಾಣೆ ನೋಡಿದಾಗಲೆಲ್ಲಾ ಬೀಗ ಹಾಕಿರುತ್ತೆ; ಇದೇ ಇದರ ವಿಶೇಷ

ಠಾಣೆ ಮಾಡೋದ್ಯಾಕೆ... ಬೀಗ ಹಾಕೋದ್ಯಾಕೆ... ಈ ಭಾಗದ ಜನರ ಗುನುಗು ಪದ!?

ಮೈಸೂರು, ಡಿ.16– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ತವರು ಕ್ಷೇತ್ರದಲ್ಲಿರುವ ಐತಿಹಾಸಿಕ ಹಾಗೂ ಪ್ರಮುಖ ಗ್ರಾಮವೊಂದರ ನಾಲ್ಕು ದಶಕದ ಇತಿಹಾಸವುಳ್ಳ ಪೊಲೀಸ್ ಉಪಠಾಣೆ ಸದಾಕಾಲ ಬೀಗ ಹಾಕಲ್ಪಟ್ಟಿರುತ್ತದೆ.

ಪೊಲೀಸ್ ಠಾಣೆಗಳು ದಿನದ 24 ಗಂಟೆಯೂ ತೆರೆದಿರಬೇಕು, ಸಿಬ್ಬಂದಿ ಯಾವುದೇ ಪರಿಸ್ಥಿತಿ ಎದುರಿಸಲು ಸನ್ನದ್ಧರಾಗಿರಬೇಕು ಎಂಬುದು ದೇಶಾದ್ಯಂತ ಇರುವ ಕಾನೂನು. ಆದರೆ ಮೈಸೂರು ಜಿಲ್ಲೆಯ ತಿ.ನರಸೀಪುರ ವಿಧಾನಸಭಾ ಕ್ಷೇತ್ರಕ್ಕೊಳಪಟ್ಟ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಮೂಗೂರು ಗ್ರಾಮದ ಪೊಲೀಸ್ ಉಪಠಾಣೆ ಈ ಕಾನೂನಿಗೆ ಅಪವಾದವಾಗಿದೆ. ಪೊಲೀಸ್ ಉಪಠಾಣೆಗೆ ಓರ್ವ ಹೆಡ್ ಕಾನ್ಸ್‌ಟೇಬಲ್ ಹಾಗೂ ನಾಲ್ವರು ಕಾನ್ಸ್‌ಟೇಬಲ್‌ಗಳನ್ನು ನಿಯೋಜಿಸಬೇಕು. ಠಾಣೆಯಲ್ಲಿ ದಿನದ 24 ಗಂಟೆ ಕನಿಷ್ಠ ಒಬ್ಬರಾದರೂ ಇರಲೇಬೇಕು. ವಿಚಿತ್ರವೆಂದರೆ ಈ ಠಾಣೆಗೆ ನಿಯೋಜನೆಗೊಂಡಿರುವುದು ಕೇವಲ ಇಬ್ಬರು ಸಿಬ್ಬಂದಿ ಮಾತ್ರ. ಎಲ್ಲಾದರೂ ಬಂದೋಬಸ್ತ್ ಕರ್ತವ್ಯಕ್ಕೆ ಹೆಚ್ಚುವರಿ ಸಿಬ್ಬಂದಿಯನ್ನು ಕಳುಹಿಸಬೇಕಾದರೆ ಇವರನ್ನೇ ಕಳುಹಿಸಿಬಿಡುತ್ತಾರೆ. ಹೀಗಾಗಿ ಸದಾಕಾಲ ಈ ಉಪಠಾಣೆ ಬೀಗ ಜಡಿದಿರುತ್ತದೆ.



ಮೂಗೂರು ಪೊಲೀಸ್ ಉಪಠಾಣೆ

ಗ್ರಾಮದಲ್ಲಿ ಏನಾದರೂ ಸಮಸ್ಯೆ ಉಂಟಾದಾಗ ಅಥವಾ ಈ ಗ್ರಾಮವನ್ನು ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದಾಗ ನೊಂದ ಜನರು ಮೂಗೂರಿನ ಉಪಠಾಣೆ ಇದೆ, ಸಹಾಯ ಪಡೆಯಬಹುದು ಎಂದು ಭಾವಿಸಿ ಬಂದರೆ ಠಾಣೆಗೆ ಹಾಕಿರುವ ಬೀಗವನ್ನು ನೋಡಿ ಪೊಲೀಸ್ ಇಲಾಖೆಗೆ ಹಿಡಿಶಾಪ ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ನಾಲ್ಕು ದಶಕದ ಇತಿಹಾಸ: 1980ರ ದಶಕದಲ್ಲಿ ರೇವಣಸಿದ್ದಯ್ಯನವರು ಮೈಸೂರು ಜಿಲ್ಲೆಯ ಎಸ್ಪಿಯಾಗಿದ್ದ ವೇಳೆ ಮೂಗೂರಿನಲ್ಲಿ ಉಪಠಾಣೆ ಸ್ಥಾಪಿಸಿದ್ದರು. ಗ್ರಾಮದಲ್ಲಿ ಏನಾದರೂ ಸಮಸ್ಯೆ ಉಂಟಾದರೆ ಅಥವಾ ಅಲ್ಲಿರುವ ಪ್ರಸಿದ್ಧ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದಲ್ಲಿ ಭಕ್ತಾದಿಗಳ ಸಂಖ್ಯೆ ಹೆಚ್ಚಳವಾದರೆ ಅದನ್ನು ನಿಭಾಯಿಸುವ ಸಲುವಾಗಿ ಉಪಠಾಣೆಯ ಅವಶ್ಯಕತೆ ಇದೆ ಎಂದು ಭಾವಿಸಿ ಅವರು ಆಗ ಈ ಉಪಠಾಣೆ ಸ್ಥಾಪಿಸಿದ್ದರು.

ಆ ಸಂದರ್ಭದಲ್ಲಿ ವಾಹನ ಸಂಚಾರ ಈಗಿರುವಷ್ಟು ದಟ್ಟಣೆಯಿಂದ ಕೂಡಿರಲಿಲ್ಲ. ರಾಷ್ಟ್ರೀಯ ಹೆದ್ದಾರಿಯೂ ಆಗಿರಲಿಲ್ಲ. ಗ್ರಾಮದಲ್ಲಿ ಏನಾದರೂ ಸಮಸ್ಯೆ ಉಂಟಾದರೆ ಬಹುಶಃ ಅಲ್ಲಿನ ಸಿಬ್ಬಂದಿಯೇ ನಿಭಾಯಿಸುತ್ತಿದ್ದರು. ಅವಶ್ಯಕತೆ ಇದ್ದಲ್ಲಿ ತಿ.ನರಸೀಪುರ ಠಾಣೆಗೆ ವೈರ್‌ಲೆಸ್ ಮೂಲಕ ಮಾಹಿತಿ ರವಾನಿಸಿ ಹೆಚ್ಚಿನ ಸಿಬ್ಬಂದಿಯನ್ನು ಕರೆಸಿಕೊಳ್ಳುತ್ತಿದ್ದರು. ಆದರೆ ಈಗ...

ಮೇಲ್ದರ್ಜೆಗೇರಿಸಬೇಕಿತ್ತು: ನಾಲ್ಕು ದಶಕದ ಹಿಂದೆಯೇ ಈ ಗ್ರಾಮಕ್ಕೆ ಪೊಲೀಸ್ ಉಪಠಾಣೆ ಅವಶ್ಯಕತೆ ಇತ್ತು ಎಂದ ಮೇಲೆ ಈಗಿನ ಪರಿಸ್ಥಿತಿಗೆ ಮೂಗೂರು ಗ್ರಾಮದಲ್ಲಿ ಪೊಲೀಸ್ ಠಾಣೆಯನ್ನೇ ಸ್ಥಾಪಿಸಿ, ಕನಿಷ್ಠ ಪಕ್ಷ ಸಬ್‌ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಠಾಣೆ ಕಾರ್ಯನಿರ್ವಹಿಸಬೇಕಿತ್ತು. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯೂ ಸಲ್ಲಿಕೆಯಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಪ್ರಸ್ತಾವನೆಯ ಕಡತ ಎಲ್ಲಿ ಧೂಳು ಹಿಡಿಯುತ್ತಿದೆಯೋ ಗೊತ್ತಿಲ್ಲ.

ಉಸ್ತುವಾರಿ ಸಚಿವರಿಗೆ ಜವಾಬ್ದಾರಿ ಇಲ್ಲವೆ?: ಡಾ. ಹೆಚ್.ಸಿ. ಮಹದೇವಪ್ಪ ಅವರು ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರು ಮಾತ್ರವಲ್ಲ. ಮೂಗೂರು ಗ್ರಾಮ ಅವರು ಪ್ರತಿನಿಧಿಸುತ್ತಿರುವ ತಿ.ನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುತ್ತದೆ. ತಾವು ಪ್ರತಿನಿಧಿಸುತ್ತಿರುವ ಕ್ಷೇತ್ರದ ಗ್ರಾಮವೊಂದರ ನಾಲ್ಕು ದಶಕ ಇತಿಹಾಸ ಹೊಂದಿರುವ ಪೊಲೀಸ್ ಉಪಠಾಣೆ ಸಿಬ್ಬಂದಿ ಕೊರತೆ ಕಾರಣದಿಂದ ಸದಾಕಾಲ ಬೀಗ ಜಡಿಯಲ್ಪಟ್ಟಿರುತ್ತದೆ ಎಂಬುದು ಇವರ ಗಮನಕ್ಕೆ ಬರಲೇ ಇಲ್ಲವೆ. ಈ ಗ್ರಾಮದಲ್ಲಿರುವ ಅವರ ಪಕ್ಷದ ಕಾರ್ಯಕರ್ತರಾಗಲೀ, ಮುಖಂಡರಾಗಲೀ ಈ ವಿಷಯವನ್ನು ಇವರಿಗೆ ತಿಳಿಸಲೇ ಇಲ್ಲವೆ. ಅಂದರೆ ಮಹದೇವಪ್ಪನವರಿಗೆ ಇದು ಗೊತ್ತಿಲ್ಲವೇನೆಂದು ಅಲ್ಲ. ಪ್ರತಿಯೊಂದು ಸಭೆ–ಸಮಾರಂಭದಲ್ಲೂ ಸಂವಿಧಾನ ರಕ್ಷಣೆ ಬಗ್ಗೆ ಗಂಟೆಗಟ್ಟಲೆ ಭಾಷಣ ಬಿಗಿಯುವ ಇವರು ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ ಉದಾಸೀನ ತೋರುತ್ತಿದ್ದಾರೇನೋ ಎಂಬ ಕುಹಕದ ಮಾತುಗಳು ಕೇಳಿಬರುತ್ತಿವೆ.

ಮೈಸೂರು ಮಿತ್ರ ಮಂಗಳವಾರ 17 ಡಿಸೆಂಬರ್ 2024

ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಬ್ರಹ್ಮೋತ್ಸವ



ಅಯ್ಯಪ್ಪಸ್ವಾಮಿ ಬ್ರಹ್ಮೋತ್ಸವ ಪ್ರಯುಕ್ತ ದೇವಾಲಯದ ಗುರುಸ್ವಾಮಿ ಪಿ.ದೇವರಾಜ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿದರು.

ನಂಜನಗೂಡು, ಡಿ.16– ನಗರದ ಕಪಿಲಾ ನದಿ ತೀರದ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಶ್ರೀಅಯ್ಯಪ್ಪಸ್ವಾಮಿ ಬ್ರಹ್ಮೋತ್ಸವ ಆರಂಭವಾಗಿದ್ದು, ಸೋಮವಾರ ದೇವಾಲಯದ ಗುರು ಸ್ವಾಮಿ ಪಿ.ದೇವರಾಜ ಸ್ವಾಮೀಜಿ ಧ್ವಜಾರೋಹಣ ನೆರವೇರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಡಿ.17 ರಂದು ಸಂಜೆ 6 ಗಂಟೆಗೆ ಬ್ರಹ್ಮೋತ್ಸವದ ಪ್ರಯುಕ್ತ ದೇವಾಲಯದ ಪ್ರಧಾನ ಅರ್ಚಕ ಶ್ರೀಕಂಠ ರಾಜೀವ ತಂತ್ರಿ ಅವರ ಮಾರ್ಗದರ್ಶನದಲ್ಲಿ 18 ಮೆಟ್ಟಿಲುಗಳ ಪಡಿಪೂಜೆ ನಡೆಯಲಿದೆ. ಡಿ.20 ರಂದು ಬೆಳಗ್ಗೆ 7 ಗಂಟೆಗೆ ಅಯ್ಯಪ್ಪ ಸ್ವಾಮಿ ಅವರಿಗೆ ವಿಶೇಷ ಅಲಂಕಾರ ಪೂಜೆಗಳು ನಡೆಯಲಿವೆ. ನಂತರ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಲಿದ್ದು, ಮಧ್ಯಾಹ್ನ ನಗರದ ರಾಜ ಬೀದಿಗಳಲ್ಲಿ ಅಯ್ಯಪ್ಪ ಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ನಡೆಯಲಿದೆ. ಸಂಜೆ 7 ಗಂಟೆಗೆ ಕಪಿಲಾ ನದಿಯಲ್ಲಿ ತೇಲುವ ದೇವಾಲಯದಲ್ಲಿ ಉತ್ಸವ ಮೂರ್ತಿಯನ್ನು ಇರಿಸಿ ತೆಪ್ಪೋತ್ಸವ ನಡೆಸಲಾಗುವುದು. ಡಿ.24 ರಂದು ಅಯ್ಯಪ್ಪ ಸ್ವಾಮಿ ಪಾದಯಾತ್ರಿಗಳಿಗೆ ಇರುಮುಡಿ ಸೇವೆ ಆರಂಭವಾಗಲಿದೆ. ಡಿ.25ರಂದು ಮೈಸೂರಿನ ದತ್ತ ವೆಂಕಟೇಶ್ವರಸ್ವಾಮಿ ದೇವಸ್ಥಾನದಿಂದ ನಂಜನಗೂಡಿನ ಅಯ್ಯಪ್ಪನ ಸನ್ನಿಧಿಗೆ ಇರುಮುಡಿ ಹೊತ್ತ ಅಯ್ಯಪ್ಪ ಸ್ವಾಮಿ ಭಕ್ತರ ಜೊತೆ ಬೃಹತ್ ಪಾದಯಾತ್ರೆ ನಡೆಸಲಾಗುವುದು.

ಡಿ.26ರಂದು ಮಂಡಲಾಭಿಷೇಕ ಜರುಗಲಿದೆ. ಅಲ್ಲದೇ ಪ್ರತಿದಿನ ಸಂಜೆ 5ಕ್ಕೆ ನೃತ್ಯ ರೂಪಕ, ಭರತನಾಟ್ಯ, ಭಜನೆ, ಶನಿ ಪ್ರಭಾವ, ಭೃಗುಮುನಿಯ ಗರ್ವಭಂಗ, ದಕ್ಷಯಜ್ಞ, ಕುರುಕ್ಷೇತ್ರ, ಚಂದ್ರಮನ ಪರಿಭಾವ ಗಳಂತಹ ಪೌರಾಣಿಕ ನಾಟಕಗಳು ನಡೆಯಲಿದೆ. ಜೊತೆಗೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಅದ್ದೂರಿ ಯಾಗಿ ಜರುಗಲಿವೆ ಎಂದರು.

ದೇವಾಲಯದ ಸ್ಥಾಪಕರಾದ ದಿ.ಕಾಂತರಾಜ ಸ್ವಾಮಿಗಳ ನೆನಪಿಗಾಗಿ ನಗರದಲ್ಲಿ ಮಕ್ಕಳ ಅನಾಥಶ್ರಮ ಹಾಗೂ ವೃದ್ಧಾಶ್ರಮ ಸ್ಥಾಪಿಸಲು ತೀರ್ಮಾನಿ ಸಲಾಗಿದೆ. ದೇವಾಲಯದ ಆದಾಯ ವನ್ನು ಉಳಿಸಿ, ದಾನಿಗಳು ಹಾಗೂ ಭಕ್ತರ ದೇಣಿಗೆಯಿಂದ ಪರಶುರಾಮ ದೇವಾಲಯದ ಸಮೀಪ 1 ಎಕರೆ ಪ್ರದೇಶದಲ್ಲಿ ಸುಸಜ್ಜಿತ ಆಶ್ರಮ ಕಟ್ಟಲು ತೀರ್ಮಾನಿಸಲಾಗಿದೆ. ಅನಾಥಶ್ರಮ ದಲ್ಲಿ ತಂದೆ ಅಥವಾ ತಾಯಿ ಇಲ್ಲದ (ಸಿಂಗಲ್ ಪೇರೆಂಟ್) ಮಕ್ಕಳಿಗೆ ಅವಕಾಶ ಕಲ್ಪಿಸಲಾಗುವುದು ಎಂದರು.

ಈ ವೇಳೆ ದೇವಾಲಯದ ಗೌರವಾ ಧ್ಯಕ್ಷ ನಾರಾಯಣಸ್ವಾಮಿ, ಮಂಜುನಾಥ್, ಎನ್.ಸಿ.ಬಸವಣ್ಣ, ಎನ್.ಟಿ.ಗಿರೀಶ್, ಶ್ರೀಧರ್, ಮಧುಸೂದನ್, ಶೇಖರ್, ಭಕ್ತವತ್ಸಲ, ನಾರಾಯಣ, ವಿಶ್ವ, ವಿನೋದ್, ಬಾಲಾಜಿ, ರಾಜಶೇಖರ್, ಹುಂಡಿ ನಾಗರಾಜು ಉಪಸ್ಥಿತರಿದ್ದರು.

ಡಾ.ಶಿವಕುಮಾರಸ್ವಾಮಿ ಪುತ್ಥಳಿ ವಿರೂಪ ಖಂಡಿಸಿ ಪ್ರತಿಭಟನೆ



ಡಾ.ಶಿವಕುಮಾರಸ್ವಾಮಿಗಳ ಪುತ್ಥಳಿ ವಿರೂಪ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಸರಗೂರು, ಡಿ.16– ಬೆಂಗಳೂರಿನ ಗಿರಿನಗರದಲ್ಲಿ ತ್ರಿವಿಧ ದಾಸೋಹಿ ಡಾ.ಶಿವಕುಮಾರಸ್ವಾಮಿ ಅವರ ಪುತ್ಥಳಿ ವಿರೂಪಗೊಳಿಸಿರುವ ಘಟನೆ ಖಂಡಿಸಿ ಪಟ್ಟಣ ದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದ ಬಳಿ ಜಮಾಯಿಸಿದ ಮಹಾಸಭಾ ಸದಸ್ಯರು ಅಲ್ಲಿಂದ ಮೆರವಣಿಗೆಯಲ್ಲಿ ಹೆಚ್.ಬಿ.ರೋಡ್ ಮೂಲಕ ಬಸ್ ನಿಲ್ದಾಣಕ್ಕೆ ತೆರಳಿ, ಮಾನವ ಸರಪಳಿ ನಿರ್ಮಿಸಿ ಶಿವಕುಮಾರ ಸ್ವಾಮೀಜಿ ಅವರ ಪ್ರತಿಮೆ ವಿರೂಪಗೊಳಿಸಿದ ದುಷ್ಕರ್ಮಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ಮಾತನಾಡಿ, ಹಿಂದೂ ದೇವತೆಗಳು, ರಾಷ್ಟ್ರ ನಾಯಕರು, ಹಿಂದೂ ಧರ್ಮದ ಸಂತರು, ಸನ್ಯಾಸಿಗಳ ವಿರುದ್ಧ ದ್ವೇಷ ಸಾಧನೆಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಎಲ್ಲಾ ಜಾತಿ, ಧರ್ಮದ ಬಡಮಕ್ಕಳು ವಿದ್ಯಾವಂತರಾ ಗಬೇಕು. ಹಸಿವಿನಿಂದ ನರಳಬಾರದು ಎಂದು ನೆರಳನ್ನು ನೀಡಿ ಸಾಕಿ ಸಲುಹಿದ ಶಿವಕುಮಾರಶ್ರೀಗಳ ಪುತ್ಥಳಿ ವಿರೂಪಗೊಳಿಸಿರುವುದು ಖಂಡನೀಯ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ವೀರಭದ್ರಪ್ಪ ಮಾತನಾಡಿ, ತ್ರಿವಿಧ ದಾಸೋಹಿ, ನಡೆದಾಡುವ ದೇವರು, ಸಿದ್ಧಗಂಗಾ ಡಾ. ಶಿವಕುಮಾರ ಸ್ವಾಮೀಜಿಯವರು ಇಂದು ದೈಹಿಕವಾಗಿ ನಮ್ಮೊಂದಿಗೆ ಇಲ್ಲ. ಆದರೆ ಅವರು ತಮ್ಮ ಸಾಧನೆ, ಮಹಾನ್ ಕಾರ್ಯದ ಮೂಲಕ ಅಮರರಾಗಿದ್ದಾರೆ. ಶಿವಕುಮಾರಸ್ವಾಮಿಗಳ ಹೆಸರು ಕೇಳಿದರೆ ಗೌರವ ಮೂಡುತ್ತದೆ. ಹೀಗಿದ್ದರೂ ದುಷ್ಕರ್ಮಿ ಸ್ವಾಮೀಜಿ ಅವರ ಪುತ್ಥಳಿ ವಿರೂಪಗೊಳಿಸಿ ವಿಕೃತಿ ಮೆರೆದಿದ್ದಾನೆ. ಇಂತಹ ಕೃತ್ಯ ಎಸಗಿರುವ ಕಿಡಿಗೇಡಿ ಯನ್ನು ಗಡಿಪಾರು ಮಾಡಬೇಕು ಎಂದರು.

ಈ ವೇಳೆ ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಹಂಚೀಪುರ ಮಠದ ತೋಂಟದಾರ್ಯ ಸ್ವಾಮೀಜಿ, ಸ್ನೇಹ ಸ್ತ್ರೀ ಸಮಾಜದ ಅಧ್ಯಕ್ಷೆ ಸುಧಾ, ಗುರುಸ್ವಾಮಿ, ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು, ಮಹೇಶ್ ಮಾತನಾಡಿದರು,

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ತಾಲೂಕು ಅಧ್ಯಕ್ಷ ವೀರಭದ್ರಪ್ಪ, ಬಸವ ಬಳಗದ ಅಧ್ಯಕ್ಷ ಗಣಪತಿ, ವೀರಶೈವ ಸಮಾಜ ಟೌನ್ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಮುಖಂಡರಾದ ಸಿ.ಕೆ.ಗಿರೀಶ್, ಗಿರಿಕುಮಾರ್, ಡಿ.ಜಿ.ಶಿವರಾಜು, ಅಣ್ಣಯ್ಯ ಸ್ವಾಮಿ, ಬಸವ ಬಳಗದ ಯುವ ಸಮಿತಿ ಅಧ್ಯಕ್ಷ ನಂದೀಶ್, ಹೆಚ್.ಮಹದೇವಸ್ವಾಮಿ, ಡಿ.ಪಿ.ನಟರಾಜು, ಸಿದ್ದಪ್ಪ, ಮಾದಪ್ಪ, ಬಸವರಾಜು, ಮಂಜುನಾಥ್, ಶಿವಕುಮಾರ್, ವಿರೂಪಾಕ್ಷ, ಸಿದ್ದಪ್ಪ, ಮಹದೇವಪ್ಪ, ಪ್ರಕಾಶ್, ಜಯಕುಮಾರ್, ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು, ಮಹೇಶ್, ಪಪಂ ಸದಸ್ಯ ಶಿವಕುಮಾರ್, ನಿಂಗರಾಜು, ಶ್ರೀಕಂಠ, ವಿಕೇಶ್, ಸತೀಶ್, ರಾಜಣ್ಣ, ಬಸವಣ್ಣ, ಶಿವರಾಜಪ್ಪ, ನಂಜಪ್ಪ, ಎಂ.ನಂದೀಶ್ ಸೇರಿದಂತೆ ಇನ್ನಿತರರಿದ್ದರು.

ಡಿ.21, ಹನುಮ ಜಯಂತಿ ಹಿನ್ನೆಲೆ

ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ



ಬೆಟ್ಟದಪುರ ಠಾಣೆಯಲ್ಲಿ ಶಾಂತಿ ಸಭೆ ನಡೆಯಿತು.

ಬೆಟ್ಟದಪುರ, ಡಿ.16– ಇಲ್ಲಿನ ಚಿಕ್ಕನೇರಳೆ ಗ್ರಾಮದಲ್ಲಿ ಡಿ.21ರಂದು ನಡೆಯುವ 4ನೇ ವರ್ಷದ ಹನುಮ ಜಯಂತೋತ್ಸವ ಅಂಗವಾಗಿ ಬೆಟ್ಟದಪುರ ಪೊಲೀಸ್ ಠಾಣೆ ಯಲ್ಲಿ ಸೋಮವಾರ ಶಾಂತಿ ಸಭೆ ನಡೆಯಿತು.

ಹುಣಸೂರು ಡಿವೈಎಸ್ಪಿ ಗೋಪಾಲ ಕೃಷ್ಣ ಮಾತನಾಡಿ, ಗ್ರಾಮದಲ್ಲಿ ಶಾಂತಿ ಕಾಪಾಡುವ ಮೂಲಕ ಹನುಮ ಜಯಂತಿ ಆಚರಿಸಬೇಕು. ಯಾವುದೇ ಅಹಿತಕರ ಘಟನೆ ನಡೆಯದಂತೆ ಹನುಮ ಜಯಂತಿ ಆಯೋಜಕರು ಮುಂಜಾಗ್ರತೆ ವಹಿಸ ಬೇಕು. ಡಿಜೆ, ಪಟಾಕಿ ಹೊಡೆಯುವುದನ್ನು ನಿಷೇಧಿಸಲಾಗಿದ್ದು, ಗ್ರಾಮಸ್ಥರು ಶಾಂತಿ ಯಿಂದ ಜಯಂತಿ ಆಚರಿಸಬೇಕು ಎಂದರು.

ವೃತ್ತ ನಿರೀಕ್ಷಕ ದೀಪಕ್ ಮಾತನಾಡಿ, ಎಲ್ಲರೂ ಶಾಂತಿ ಸುವ್ಯವಸ್ಥೆ ಕಾಪಾಡುವ ಮೂಲಕ ಹನುಮ ಜಯಂತಿ ಆಚರಿಸ ಬೇಕು ಎಂದರು. ಈ ವೇಳೆ ಸಭೆಯಲ್ಲಿದ್ದ ಚಿಕ್ಕನೇರಳೆ, ದೊಡ್ಡನೇರಳೆ, ಹಾರನಹಳ್ಳಿ, ಬೆಟ್ಟದಪುರ, ಮಂಟಿಬಿಳುಗಲಿ, ಬೇಡರ ಬಿಳುಗಲಿ, ಒಡೆಯರಹೊಸಳ್ಳಿ, ಹಾರನಹಳ್ಳಿ ಸೇರಿದಂತೆ ಇನ್ನಿತರ ಗ್ರಾಮಸ್ಥರು ಶಾಂತಿಯಿಂದ ಜಯಂತಿ ಆಚರಿಸುವುದಾಗಿ ತಿಳಿಸಿದರು.

ಈ ವೇಳೆ ಉಪ ತಹಸೀಲ್ದಾರ್ ಮಹೇಶ್, ಕಂದಾಯ ನಿರೀಕ್ಷಕ ಆನಂದ್, ಪಿಡಿಓ ಮಂಜುನಾಥ್, ಎಸ್ಐ ಶಿವಶಂಕರ್, ಅಪರಾಧ ವಿಭಾಗದ ಎಸ್ಐ ಸುರೇಶ್ ನಾಯಕ, ಮುಖಂಡರಾದ ಜಿಪಂ ಮಾಜಿ ಸದಸ್ಯ ರಹಮತ್ ಜಾನ್‌ಬಾಬು, ಗ್ರಾಪಂ ಮಾಜಿ ಅಧ್ಯಕ್ಷ ವೆಂಕಟೇಶ್, ಮಾಧು, ರಾಜಶೇಖರ್, ಕೀರ್ತಿ ಕುಮಾರ್, ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಸುರೇಶ್, ದಲಿತ ಮುಖಂಡರಾದ ಗಿರೀಶ್, ರಾಜಣ್ಣ, ರಾಜಶೇಖರ್, ಕುಮಾರ್, ಬೆಟ್ಟದಪುರ ಗ್ರಾಪಂ ಮಾಜಿ ಅಧ್ಯಕ್ಷ ಇಕ್ಬಾಲ್ ಶರೀಫ್, ಇಲಿಯಾಸ್ ಪಾಷಾ, ಇಮ್ರಾನ್ ಫಯಾಜ್, ಅನೀಸ್ ಸೇರಿದಂತೆ ಇನ್ನಿತರರಿದ್ದರು.

ವಿಶ್ವ ರೈತ ದಿನಾಚರಣೆ ಪ್ರಚಾರ



ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಹೈರಿಗೆ, ಹ್ಯಾಂಡಪೋಸ್ಟ್, ಸರಗೂರು, ತುಂಬಸೋಗೆ ಗ್ರಾಪಂಗಳಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ರೈತ ಸಂಘದಿಂದ ಡಿ.23ರಂದು ಮೈಸೂರಿನ ಮುಕ್ತ ವಿಶ್ವವಿದ್ಯಾಲಯ ಶತಮಾನೋತ್ಸವ ಭವನದಲ್ಲಿ ನಡೆಯುವ ವಿಶ್ವ ರೈತ ದಿನಾಚರಣೆ, ರೈತರ ಹಬ್ಬದ ಬಗ್ಗೆ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಪ್ರಚಾರ ಮಾಡಲಾಯಿತು. ಈ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ರಾಜೇಶ್, ಮುಖಂಡರಾದ ಶಂಕರ್, ಕುಮಾರ್, ರಮೇಶ್, ಸುರೇಶ ಶೆಟ್ಟಿ, ಹೇಮಂತ್, ಗಂಗಾಧರ್, ಕೆಂಡಗಣ್ಣಸ್ವಾಮಿ, ಸುನೀಲ್ ಇತರರಿದ್ದರು.

ದೇವರಸನಹಳ್ಳಿ ಗ್ರಾಪಂಗೆ ಸೌಭಾಗ್ಯ ನೂತನ ಅಧ್ಯಕ್ಷೆ



ದೇವರಸನಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಸೌಭಾಗ್ಯ ಅವಿರೋಧವಾಗಿ ಆಯ್ಕೆಯಾದರು.

ನಂಜನಗೂಡು, ಡಿ.16– ತಾಲೂಕಿನ ದೇವರಸನಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಸೌಭಾಗ್ಯ ಅವಿರೋಧ ಆಯ್ಕೆಯಾಗಿದ್ದಾರೆ.

ಒಟ್ಟು 23 ಸದಸ್ಯ ಬಲದ ಗ್ರಾಪಂನ ಈ ಹಿಂದಿನ ಅಧ್ಯಕ್ಷೆ ಸುಮತಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಸೌಭಾಗ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಶಿಲ್ಪ ಅವಿರೋಧ ಆಯ್ಕೆಯನ್ನು ಘೋಷಿಸಿ ದರು. ಚುನಾವಣಾ ಪ್ರಕ್ರಿಯೆಯಲ್ಲಿ 20 ಸದಸ್ಯರು ಹಾಜರಾಗಿದ್ದರೆ, ಮೂವರು ಸದಸ್ಯರು ಗೈರಾಗಿದ್ದರು.

ಮುಖಂಡ ಸೋಮಣ್ಣ ಮಾತನಾಡಿ, ದೇವರಸನಹಳ್ಳಿ ಗ್ರಾಪಂ ಅಧ್ಯಕ್ಷ ಸ್ಥಾನ ಅಧಿಕಾರ ಹಂಚಿಕೆ ವಿಚಾರದಲ್ಲಿ ಗ್ರಾಪಂ ಉಪಾಧ್ಯಕ್ಷೆಯಾಗಿದ್ದ ಸೌಭಾಗ್ಯ ಅವರ ಪತಿ ನಂಜುಂಡಸ್ವಾಮಿ ಅವರನ್ನು ಪಿತೂರಿ ಮಾಡಿ ವ್ಯವಸ್ಥಿತವಾಗಿ ಕೊಲೆ ಮಾಡ ಲಾಗಿತ್ತು. ಈ ಘಟನೆ ರಾಜ್ಯಾದ್ಯಂತ ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿತ್ತು. ಕೊಲೆಯಾದ ನಂಜುಂಡಸ್ವಾಮಿ ಅವರಿಗೆ ನ್ಯಾಯ ಒದಗಿಸುವ ಸಲುವಾಗಿ ಗ್ರಾಪಂನ ಎಲ್ಲಾ ಸದಸ್ಯರು ಪಕ್ಷಾತೀತವಾಗಿ ಸಂತ್ರಸ್ತೆ ಸೌಭಾಗ್ಯ ಅವರನ್ನು ಬೆಂಬಲಿಸಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಉತ್ತಮ ಬೆಳವಣಿಗೆ ಎಂದರು.

ನೂತನ ಅಧ್ಯಕ್ಷೆ ಸೌಭಾಗ್ಯ ಮಾತನಾಡಿ, ಅಧ್ಯಕ್ಷ ಸ್ಥಾನಕ್ಕಾಗಿ ನನ್ನ ಪತಿಯನ್ನು ಕೊಲೆ ಮಾಡಲಾಗಿತ್ತು. ಎಲ್ಲಾ ಸದಸ್ಯರ ಸಹಕಾರದಿಂದ ನಾನು ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದೇನೆ. ಎಲ್ಲಾ ಸದಸ್ಯರು ಪಕ್ಷಾತೀತವಾಗಿ ನನ್ನನ್ನು ಆಯ್ಕೆ ಮಾಡಿರುವುದು ನನ್ನ ಪತಿ ಆತ್ಮಕ್ಕೆ ಶಾಂತಿ ಸಿಕ್ಕಿದಂತಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ ಎಂದರು.

ಈ ವೇಳೆ ಗ್ರಾಪಂ ಸದಸ್ಯರಾದ ಮುದ್ದುಮಾದಶೆಟ್ಟಿ, ಜಯಲಕ್ಷ್ಮಿ, ಶೋಭಾ, ಜಯಮ್ಮ, ನಂಜಪ್ಪ, ಗೀತಾ, ಶಿವಲಿಂಗ, ರಾಘವೇಂದ್ರ, ನಾರಾಯಣ, ಮುಖಂಡರಾದ ನಾಗರಾಜು, ಮಹದೇವ ಸ್ವಾಮಿ, ರಾಜು, ಸೋಮು, ಪಿಡಿಓ ಕರಿಯಪ್ಪ ಸೇರಿದಂತೆ ಇತರರಿದ್ದರು.

ಹುಲಿ ದಾಳಿ: ಹಸುವಿಗೆ ಗಾಯ



ಹುಲಿ ದಾಳಿಯಿಂದ ಹಸು ಗಾಯಗೊಂಡಿರುವುದು.

ಹೆಚ್.ಡಿ.ಕೋಟೆ, ಡಿ.16– ಕಳೆದ 2 ದಿನ ಗಳ ಹಿಂದೆ ಹುಲಿಗಳ ಕಾದಾಟದಲ್ಲಿ ಹುಲಿ ಸಾವನ್ನಪ್ಪಿದ್ದ ಸ್ಥಳದಲ್ಲೇ ಸೋಮವಾರ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿದೆ.

ತಾಲೂಕಿನ ಚಾಕಳ್ಳಿ ಗ್ರಾಮದ ರೈತ ಕ್ಯಾತ ನಾಯಕ ಎಂಬುವರು ಜಮೀನಿನಲ್ಲಿ ತಮ್ಮ 2 ಹಸುಗಳನ್ನು ಮೇಯಿ ಸುತ್ತಿದ್ದರು. ಈ ವೇಳೆ ಒಂದು ಹಸುವನ್ನು ಕೊಟ್ಟಿಗೆಗೆ ಕಟ್ಟಿ ಬರುವಷ್ಟರಲ್ಲಿ ಮತ್ತೊಂದು ಹಸುವಿನ ಮೇಲೆ ಹುಲಿ ಏಕಾಏಕಿ ದಾಳಿ ನಡೆಸಿದೆ. ಇದನ್ನು ಕಂಡ ರೈತ ಕ್ಯಾತನಾ ಯಕ ಕಿರುಚಿಕೊಂಡಾಗ ಹುಲಿ ಪರಾರಿ ಯಾಯಿತು. ಈ ವೇಳೆ ಹುಲಿ ದಾಳಿಯಿಂದ ಗಾಯಗೊಂಡಿದ್ದ ಹಸುವನ್ನು ಕ್ಯಾತ ನಾಯಕ ಗ್ರಾಮಸ್ಥರ ಸಹಾಯದಿಂದ ಮನೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು.

ಈ ವೇಳೆ ಮಾತನಾಡಿದ ಅವರು, 2 ಹಸುಗಳನ್ನು ಸಾಕುವ ಮೂಲಕ ಜೀವನ ನಿರ್ವಹಣೆ ಮಾಡುತ್ತಿದ್ದೆ. ಇದೀಗ 50 ಸಾವಿರಕ್ಕೂ ಹೆಚ್ಚು ಬೆಲೆಬಾಳುವ ಒಂದು ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿದೆ. ಹೀಗಾಗಿ ಸಂಬಂಧ ಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಿದರು.

ನೇಮಕ



ಮಲ್ಕುಂಡಿ, ಡಿ.16– ನಂಜನಗೂಡು ವಿಧಾನಸಭಾ ಕ್ಷೇತ್ರದ ಹೆಡಿಯಾಲ ಗ್ರಾಮದ ಗ್ರಾಪಂ ಸದಸ್ಯ ಅಶ್ರಫ್ ಅಲಿ ಅವರನ್ನು ಡಿಸಿಸಿ ಪ್ರೊಫೆಷನಲ್ ಸೇಲ್ ತಾಲೂಕು ಅಧ್ಯಕ್ಷ ರಾಗಿ ನೇಮಕ ಮಾಡಿ ಡಿಸಿಸಿ ಪ್ರೊಫೆಷನಲ್ ಸೇಲ್ ಜಿಲ್ಲಾಧ್ಯಕ್ಷ ಡಾ.ಪಿ.ರಾಜೇಂದ್ರ ಪ್ರಸಾದ್ ಆದೇಶ ಹೊರಡಿಸಿದ್ದಾರೆ.

ಒಕ್ಕಲಿಗರ ಸಂಘದ ಅಧ್ಯಕ್ಷರಿಂದ ಅಧಿಕಾರ ದುರುಪಯೋಗ

ಸಂಘದ ಉಪಾಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಆರೋಪ



ಸುದ್ದಿಗೋಷ್ಠಿಯಲ್ಲಿ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿದರು.

ಕೆ.ಆರ್.ನಗರ, ಡಿ.16– ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ. ಅಣ್ಣೇಗೌಡ ಅಧಿಕಾರ ದುರುಪಯೋಗ ಪಡಿಸಿಕೊಂಡು ನಿಯಮಬಾಹಿರವಾಗಿ ಆ ಸ್ಥಾನದಲ್ಲಿ ಮುಂದುವರೆಯುತ್ತಿದ್ದು, 2 ದಿನಗಳ ಹಿಂದೆ ಅವರು ರಚಿಸಿಕೊಂಡಿರುವ ಸಮಿತಿ ಅಸಿಂಧು ಎಂದು ಸಂಘದ ಉಪಾಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಆರೋಪಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ನಡೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 18 ವರ್ಷಗಳಿಂದ ಆಡಳಿತ ಮಂಡಳಿ ಚುನಾವಣೆ ನಡೆಸದೆ ತಮಗಿಷ್ಟ ಬಂದಂತೆ ಬೇಕಾದವರನ್ನು ಆಡಳಿತ ಮಂಡಳಿಗೆ ನೇಮಕ ಮಾಡಿಕೊಂಡು ಜಾತಿ ವಿರೋಧಿ ನೀತಿ ಅನುಸರಿಸುತ್ತಿದ್ದು, ಕೂಡಲೇ ಒಕ್ಕಲಿಗ ಸಮಾಜದ ಪ್ರಮುಖರ ಸಭೆ ಕರೆದು ನೂತನ ಆಡಳಿತ ಮಂಡಳಿ ರಚಿಸಲು ಮುಂದಾ ಗಬೇಕು ಎಂದು ಒತ್ತಾಯಿಸಿದರು.

ಸಂಘದ ಸಂಸ್ಥಾಪಕ ಅಧ್ಯಕ್ಷ, ಮಾಜಿ ಸಚಿವ ದಿ.ಎಸ್.ನಂಜಪ್ಪ ಮತ್ತು ಪಟ್ಟಣದಲ್ಲಿ ಒಕ್ಕಲಿಗ ಸಮಾಜದ ಬೃಹತ್ ಸಮುದಾಯ ಭವನ ನಿರ್ಮಾಣವಾಗಲು ಕಾರಣರಾದ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಗೌರವ ನೀಡದ ಎಂ.ಟಿ.ಅಣ್ಣೇಗೌಡ ವಿಶ್ವಾಸಕ್ಕೆ ಅರ್ಹರಲ್ಲ ಎಂದರು.

ಸಂಘದ ಅಧ್ಯಕ್ಷರಾಗಿ ನಿಯಮ ಬಾಹಿರ ವಾಗಿ ಮುಂದುವರೆದಿರುವ ಅವರು ತಮ್ಮನ್ನು ವಿರೋಧ ಮಾಡುವವರನ್ನು ಯಾವುದೇ ಸಭೆಗಳಿಗೆ ಕರೆಯುವುದಿಲ್ಲ. ಆದರೆ ಸಮಾಜದ ಹಿತ ದೃಷ್ಟಿಯಿಂದ ನಾವು ಎಲ್ಲಾ ವಿಚಾರಗಳನ್ನು ನುಂಗಿಕೊಂಡು ಬಂದಿದ್ದು ಮುಂದೆ ಒಕ್ಕಲಿಗರ ಹಿತದೃಷ್ಟಿಯಿಂದ ಇದನ್ನು ಸಹಿಸಲು ಸಾಧ್ಯವಿಲ್ಲ. ಹಾಗಾಗಿ ಕೂಡಲೇ ಸಾ.ರಾ.ಮಹೇಶ್ ಮತ್ತು ಕೆ.ಎನ್.ಬಸಂತ್ ಅವರ ಸಮ್ಮುಖದಲ್ಲಿ ಸಭೆ ಕರೆಯಬೇಕೆಂದು ಆಗ್ರಹಿಸಿದರು.


ಹೆಚ್.ಡಿ.ದೇವೇಗೌಡ ಸಮುದಾಯ ಭವನ ನಿರ್ಮಾಣಕ್ಕೆ ಮಾಜಿ ಸಚಿವ ದಿ.ಎಸ್.ನಂಜಪ್ಪ ಮತ್ತು ಮಾಜಿ ಸಚಿವ ಸಾ.ರಾ.ಮಹೇಶ್ ಹೆಸರೇಳಿಕೊಂಡು ಎಂ.ಟಿ. ಅಣ್ಣೇಗೌಡ ವಸೂಲಿ ಮಾಡಿದ್ದು, ಅದು ಸಹ ದುರುಪಯೋಗವಾಗಿರುವ ಅನುಮಾನ ವಿದ್ದು ಕೂಡಲೇ ಅವರು ಲೆಕ್ಕ ಕೊಡಬೇಕೆಂದು ಹಕ್ಕೋತ್ತಾಯ ಮಂಡಿಸಿದ ಅವರು ಗೌರವಯುತವಾಗಿ ಆಡಳಿತ ಮಂಡಳಿ ಚುನಾವಣೆ ನಡೆಸಿ ಸಮಾಜದ ಪ್ರಮುಖರ ಸಭೆ ಕರೆದು ಇತರರಿಗೆ ಮಾದರಿಯಾಗಿ ಎಂದು ಸಲಹೆ ನೀಡಿದರು.

ನಿಯಮಬಾಹಿರವಾಗಿ ನೇಮಕ ಮಾಡಿಕೊಂಡಿರುವವರನ್ನು ಸೇರಿಸಿ ಕೊಂಡು ಸಮುದಾಯ ಭವನದಲ್ಲಿ ಸಭೆ ನಡೆಸಿದರೆ ಮುತ್ತಿಗೆ ಹಾಕುವುದಾಗಿ ತಿಳಿಸಿದ ಅವರು 10 ದಿನಗಳ ಒಳಗೆ ಸಾ.ರಾ.ಮಹೇಶ್ ಮತ್ತು ಕೆ.ಎನ್.ಬಸಂತ್ ಸಮ್ಮುಖದಲ್ಲಿ ಸಮು ದಾಯದ ಸಭೆ ಕರೆಯದಿದ್ದರೆ ನಾವೇ ಮುಂದಾಗಿ ಒಕ್ಕಲಿಗ ಮುಖಂಡರ ಸಭೆ ಕರೆದು ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ಪ್ರಕಟಿಸಿದರು.

ನವ ನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಜಿಪಂ ಮಾಜಿ ಸದಸ್ಯ ಎಂ.ಟಿ. ಕುಮಾರ್ ಮಾತನಾಡಿದರು. ಪುರಸಭೆ ಸದಸ್ಯರಾದ ಕೆ.ಎಲ್.ಜಗದೀಶ್, ಸಂತೋಷ್ ಗೌಡ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ಮಾಜಿ ಅಧ್ಯಕ್ಷ ಹೆಚ್.ಕೆ. ಸುಜಯ್, ವಕ್ತಾರ ಕೆ.ಎಲ್. ರಮೇಶ್, ವಕೀಲ ಎ.ತಿಮ್ಮಪ್ಪ, ಮುಖಂಡರಾದ ಅನಿಲ್‌ಗೌಡ, ವಿ.ಸಿ.ಶಿವರಾಮು, ಬಿ. ರಮೇಶ್, ಬಿ.ಈ.ರವಿಕುಮಾರ್, ಅನೀಫ್‌ಗೌಡ, ಶಂಭು, ರಾಧಾಕೃಷ್ಣ, ರಾಜು, ವಡ್ಡರವಿ, ಎ.ಪಿ.ದರ್ಶನ್, ಅನಿಲ್, ಹರೀಶ್ ಸುದ್ದಿಗೋಷ್ಠಿಯಲ್ಲಿದ್ದರು.

ತ್ರಿವೇಣಿ ರಂಗಭೂಮಿ ಕಲಾವಿದರ ಸಂಘ ಉದ್ಘಾಟನೆ

ರಂಗಭೂಮಿ ಒಂದು ಶಕ್ತಿಶಾಲಿ ಮಾಧ್ಯಮ: ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ತಿ.ನರಸೀಪುರ, ಡಿ.16– ಸಮಾನತೆಯ ಆಶಯ ವನ್ನು ಬಿತ್ತಿ ಬೆಳೆಸಲು ರಂಗಭೂಮಿ ಒಂದು ಶಕ್ತಿಶಾಲಿ ಮಾಧ್ಯಮ ಎಂದು ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜೆನ್ನಿ) ತಿಳಿಸಿದರು.


ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ತ್ರಿವೇಣಿ ರಂಗಭೂಮಿ ಕಲಾವಿದರ ಸಂಘ ಉದ್ಘಾ ಟನೆ ಹಾಗೂ ಡ್ರಾಮಾ ಮಾಸ್ಟರ್ ಮಾದಪ್ಪನವರಿಗೆ ಬಂಗಾರದ ಕಡಗ ಸಮರ್ಪಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಲೆಯಲ್ಲಿ ಒಬ್ಬ ಮನುಷ್ಯನಿರುತ್ತಾನೆ. ಮನುಷ್ಯತ್ವ ಇರುತ್ತದೆ. ಸಂಬಂಧ, ಸ್ಪಂದನೆ, ಪ್ರೀತಿ, ಒಲವು ಎಲ್ಲವೂ ತುಂಬಿರು ತ್ತದೆ. ಇವೆಲ್ಲವೂ ಕೂಡ ಪರಿಪೂರ್ಣ, ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅಗತ್ಯ. ಈ ಹಿನ್ನೆಲೆಯಲ್ಲಿ ರಂಗ ಭೂಮಿ ಯಾವುದೇ ಜಾತಿ ಭೇದವಿಲ್ಲದೆ ಸಮಾನತೆಯ ಆಶಯವನ್ನು ಬಿತ್ತುವುದರಲ್ಲಿ ಒಂದು ಪ್ರಭಾವಿ ಮಾಧ್ಯಮವಾಗಿ ಕಾಣುತ್ತದೆ ಎಂದು ಅಭಿಪ್ರಾಯಪಟ್ಟರು.

ನಾವೀಗ ಸಂಸ್ಕೃತಿಯ ದಿನಗಳಲ್ಲಿ ಇದ್ದೇವೆ. ಕಲೆ ನಮ್ಮ ಸಂಸ್ಕೃತಿ, ಪರಂಪರೆಯ ಭದ್ರ ಬುನಾದಿ. ಈ ನಿಟ್ಟಿನಲ್ಲಿ ರಂಗಭೂಮಿ ಕಲೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಲಾವಿದರ ಸಂಘ ಉತ್ತಮ ಹೆಜ್ಜೆ ಗಳೊಂದಿಗೆ ಸಾಗಲಿ. ಇದೊಂದು ಮಾದರಿ ಸಂಘವಾಗಿ ಬೆಳೆಯಲಿ ಎಂದು ಸಲಹೆ ನೀಡಿದರು.

ವಾಟಾಳು ಮಠಾಧ್ಯಕ್ಷ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕಿರಗಸೂರು ಗ್ರಾಮದ ಮಾದಪ್ಪ ಹಾಗೂ ರಾಜಪ್ಪನವರು ಬಹಳಷ್ಟು ಖ್ಯಾತಿ ಪಡೆದವರು. ಆ ಗ್ರಾಮ ನಮ್ಮ ತಾಲೂಕಿನ ಹೆಮ್ಮೆ. ರಂಗಭೂಮಿ ಕಲಾವಿದರಿಗೆ ತರಬೇತಿ ನೀಡಿ ನಾಟಕ ಪ್ರದರ್ಶನ ಮಾಡಿಸುವ ಮೂಲಕ ಮಾದಪ್ಪ, ಸಂಗೀತದ ಮೂಲಕ ರಾಜಪ್ಪ ಖ್ಯಾತಿ ಹಿರಿದಾಗಿದೆ. ರಂಗಭೂಮಿ ಕಲಾವಿದರನ್ನು ಎಲ್ಲರೂ ಪ್ರೋತ್ಸಾಹಿಸಿ ಕಲೆ ಉಳಿಸಿ ಬೆಳೆಸುವಂತೆ ಕರೆ ನೀಡಿದರು.

ತ್ರಿವೇಣಿ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಕಿರಗ ಸೂರು ಎಂ.ಮಾದಪ್ಪ ಅವರು ಹಳೇ ಮೈಸೂರು ಪ್ರಾಂತ್ಯದ ಎಲ್ಲಾ ಜಿಲ್ಲೆಗಳಲ್ಲೂ 300ಕ್ಕೂ ಹೆಚ್ಚು ನಾಟಕ ಪ್ರದರ್ಶನಗಳನ್ನು ನೀಡಿದ್ದಾರೆ. ರಾಮಾಯಣ, ಮಹಾ ಭಾರತದಂತಹ ಕಥೆಗಳು ನಾಟಕ ರೂಪದಲ್ಲಿ ಪಾತ್ರಗಳು ಜೀವ ತುಂಬುತ್ತವೆ. ರಂಗಭೂಮಿಗೆ ತನ್ನದೇ ಆದ ಶಕ್ತಿ ಇದೆ. ಪ್ರತಿ ಗ್ರಾಮದಲ್ಲಿ ರಂಗಭೂಮಿ ನಂಟಿದೆ. ತಾಲೂಕಿನಲ್ಲಿ ಕೂಡ ರಂಗಭೂಮಿ ಕ್ಷೇತ್ರದಲ್ಲಿ ದುಡಿದ ಅನೇಕರಿದ್ದಾರೆ. ರಾಜಕುಮಾರ್ ಅವರಂತಹ ಮೇರು ನಟನನ್ನು ನಾಡಿಗೆ ಪರಿಚಯಿಸಿದ್ದೇ ರಂಗಭೂಮಿ. ಅವರ ತಂದೆ ಪುಟ್ಟಸ್ವಾಮಯ್ಯನವರು ಕಲಾವಿದರಾಗಿದ್ದರು. ಕಲಾವಿದರರಿಗೆ ಹೆಚ್ಚಿನ ಪ್ರೋತ್ಸಾಹ ಅಗತ್ಯ ಎಂದರು.

ಇದೇ ವೇಳೆ ಕಿರಗಸೂರು ಮಾದಪ್ಪನವರ ಚಂದ್ರಮನ ಪರಿಭಾವ ಅಥವಾ ಭೃಗುಮುನಿಯ ಗರ್ವಭಂಗ ಎಂಬ ಪೌರಾಣಿಕ ನಾಟಕ ಪ್ರದರ್ಶಿಸಲಾ ಯಿತು. ಕಾರ್ಯಕ್ರಮದಲ್ಲಿ ಸಂಗೀತ ವಿದ್ವಾನ್ ಆರ್.ರಾಜಪ್ಪ, ಹೆಳವರಹುಂಡಿ ಡ್ರಾಮಾ ಮಾಸ್ಟರ್ ಚೌಡಶೆಟ್ಟಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಕಲಾವಿದರ ಸಂಘದ ಗೌರವಾಧ್ಯಕ್ಷ ಎಸ್.ಆರ್. ಶಶಿಕಾಂತ್, ಅಧ್ಯಕ್ಷ ಕೆ.ಎನ್ ಪ್ರಭುಸ್ವಾಮಿ, ಕಾರ್ಯ ದರ್ಶಿ ಹೆಚ್.ಎಂ.ಪರಶಿವಮೂರ್ತಿ, ಸೋಸಲೆ ಎಸ್.ನಂಜುಂಡಯ್ಯ, ನಿಲಸೋಗೆ ನಂಜುಂಡಯ್ಯ, ಕಾನೂನು ಸಲಹೆಗಾರ ಎನ್.ಸಿದ್ದರಾಜು, ನಿರ್ದೇಶಕರಾದ ಎಸ್.ಎನ್.ಧರ್ಮ ರತ್ನಾಕರ್, ಪುಟ್ಟಸ್ವಾಮಿ, ಮಹದೇವಯ್ಯ, ಕೆ.ಮಹೇಶ್, ಸುರೇಶ್, ಮಹದೇವಯ್ಯ, ಡಿ.ಎನ್.ಲಕ್ಷ್ಮಣ, ಎನ್.ಜವರಯ್ಯ ಹಾಜರಿದ್ದರು.



ಹಿಟ್ಟುವಳ್ಳಿಯಲ್ಲಿ ವಿಷ್ಣು ದೀಪೋತ್ಸವ

ತಿ.ನರಸೀಪುರ ತಾಲೂಕಿನ ಹಿಟ್ಟುವಳ್ಳಿ ಗ್ರಾಮದ ಶ್ರೀವೇಣು ಗೋಪಾಲಸ್ವಾಮಿ ದೇವಸ್ಥಾನದಲ್ಲಿ ವಿಷ್ಣು ದೀಪೋತ್ಸವವನ್ನು ವಿಜೃಂಭಣೆಯಿಂದ ಆಚರಿಸ ಲಾಯಿತು. ಈ ವೇಳೆ ಪ್ರಧಾನ ಅರ್ಚಕರಾದ ಟಿ.ಎನ್. ಅಭಿಜಿತ್, ಟಿ.ಎನ್.ಅಜಯ್, ಟಿ.ಎಸ್. ಅರುಣ್, ನಾಗಮಣಿ, ಸ್ವಪ್ನ, ವೈಷ್ಣವಿ ಹಾಗೂ ಗ್ರಾಮಸ್ಥರು ಇದ್ದರು.

ನಿಧನ



ಎಂ.ರೇವಣ್ಣ

ನಂಜನಗೂಡು, ಡಿ.16– ನಗರದ ಜೀವ ವಿಮಾ ನಿಗಮದ ನಂಜನಗೂಡು ಶಾಖೆ ಆಡಳಿತಾಧಿಕಾರಿ ಎಂ.ರೇವಣ್ಣ (59) ಸೋಮ ವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಚುಂಚನಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದ್ಯಾವಯ್ಯ



ಸಾಲಿಗ್ರಾಮ, ಡಿ.16– ರಾಂಪುರ ಗ್ರಾಮದ ದಲಿತ ಸಮು ದಾಯದ ಯಜಮಾನ ದ್ಯಾವಯ್ಯ (70) ಭಾನುವಾರ ನಿಧನರಾ ದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮೈ ಬಿಲ್ಡ್–24 ಗೃಹ ನಿರ್ಮಾಣ ಸಾಮಗ್ರಿಗಳ ಪ್ರದರ್ಶನಕ್ಕೆ ತೆರೆ

ಉತ್ತಮ ಮಳಿಗೆಗಳಿಗೆ ಬಹುಮಾನ ವಿತರಣೆ



ಬಿಲ್ಡರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಮೈಸೂರು ಕೇಂದ್ರದ ವತಿಯಿಂದ ನಡೆದ ಐದು ದಿನಗಳ 'ಮೈಬಿಲ್ಡ್ 24' ವಸ್ತುಪ್ರದರ್ಶನದಲ್ಲಿ ಉತ್ತಮ ಮಳಿಗೆಗಳ ಮಾಲೀಕರಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಮೈಸೂರು, ಡಿ.16(ಎಸ್‌ಪಿಎನ್)–ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಕೇಂದ್ರದ ವತಿಯಿಂದ ನಡೆದ ಐದು ದಿನಗಳ 'ಮೈಬಿಲ್ಡ್–24' ವಸ್ತು ಪ್ರದರ್ಶನಕ್ಕೆ ಸೋಮವಾರ ತೆರೆಬಿದ್ದಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ಪತ್ರಕರ್ತ ರವೀಂದ್ರ ಜೋಶಿ ಮಾತನಾಡಿ, ದೇಶದ ಆರ್ಥಿಕ ಪ್ರಗತಿಯಲ್ಲಿ ಬಿಲ್ಡರ್ಸ್‌ಗಳ ಪಾತ್ರ ಪ್ರಮುಖವಾಗಿರುತ್ತದೆ. ಸೂರಿಲ್ಲದವರಿಗೆ ಸೂರು ಕಟ್ಟಿಕೊಡುವುದು ಸಾಮಾನ್ಯ ಸಂಗತಿಯಲ್ಲ. ಜನರ ಭಾವುಕತೆಗೆ ತಕ್ಕಂತೆ ಹಾಗೂ ಆಯಾಯ ಪಟ್ಟಣಗಳ ವಾಸ್ತುಶಿಲ್ಪಕ್ಕೆ ಪೂರಕವಾಗಿ ಬಿಲ್ಡರ್ಸ್‌ಗಳು ಕೆಲಸ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಸಾಮಾನ್ಯ ಜನರು 30–40 ವರ್ಷಗಳ ದುಡಿಮೆಯ ಹಣದಲ್ಲಿ ಒಂದು ಸ್ವಂತ ಸೂರು ಹೊಂದಲು ನೂರಾರು ಕನಸುಗಳನ್ನು ಕಂಡಿರುತ್ತಾರೆ. ಅವರ ಕನಸ್ಸಿಗೆ ಪೂರಕವಾಗಿ ಬಿಲ್ಡರ್ಸ್ ಮತ್ತು ಇಂಜಿನಿಯರ್‌ಗಳು ಉತ್ತಮ ಕೆಲಸ ಮಾಡಿ, ಜನರ ಕನಸನ್ನು ಸಾಕಾರಗೊಳಿಸಬೇಕು ಎಂದರು.

ಒಂದು ಸುಂದರ ನಗರ ಕಟ್ಟಬೇಕಾದರೆ, ಲಕ್ಷಾಂತರ ಇಂಜಿನಿಯರ್‌ಗಳ ಶ್ರಮ ಇರುತ್ತದೆ. ಇದಕ್ಕೆ ಕೋಟ್ಯಾಂತರ ಸಾಮಾನ್ಯ ಜನರ ತ್ಯಾಗ–ಶ್ರಮವಿರುತ್ತದೆ. ಸುಂದರ ನಗರ ನಿರ್ಮಾಣಕ್ಕೆ ನೂರಾರು ವರ್ಷಗಳೇ ಬೇಕಾಗುತ್ತವೆ. ಹಾಗಾಗಿ ದೇಶದ ಆರ್ಥಿಕತೆಗೆ ಬೆನ್ನೆಲುಬಾಗುತ್ತದೆ ಎಂದು ಹೇಳಿದರು.

ಕೆಲ ವರ್ಷಗಳ ಹಿಂದೆ ನಾನು ಬೆಂಗಳೂರಿನಲ್ಲಿ ನೂತನ ತಂತ್ರಜ್ಞಾನ ಬಳಸಿ ಮನೆ ಕಟ್ಟಿಸಿದ್ದು ಆ ಮನೆಯ ಗೃಹ ಪ್ರವೇಶಕ್ಕೆ ಹಲವು ಗಣ್ಯರನ್ನು ಆಹ್ವಾನಿಸಿದ್ದೆ. ಆ ಸಂದರ್ಭದಲ್ಲಿ ಹಿರಿಯ ಸಿನಿಮಾ ಕಲಾವಿದೆಯೊಬ್ಬರು ಸಂಪೂರ್ಣ ಮನೆ ವೀಕ್ಷಿಸಿದರು. ನಂತರ ಮಳೆಗಾಲ ಮುಗಿದ ಮೇಲೆ ನನಗೆ ಫೋನಾಯಿಸುವಂತೆ ತಿಳಿಸಿದ್ದರು.

ಮಳೆಗಾಲದಲ್ಲಿ ನನ್ನ ಮನೆ ಅಲ್ಲಲ್ಲಿ ಸೋರತೊಡಗಿತು. ನಾನು ಗಾಬರಿಗೊಂಡು ಮನೆಕಟ್ಟಿಕೊಟ್ಟ ಇಂಜಿನಿಯರ್ ಕೇಳಿದೆ. ಅದಕ್ಕವರು, ತಂತ್ರಜ್ಞಾನದಲ್ಲಿ ಸ್ವಲ್ಪ ಎಡವಟ್ಟಾಗಿದೆ. ಮಳೆನಿಂತ ಮೇಲೆ ಸರಿಪಡಿಸಲಾಗುವುದು ಎಂದು ಸಮಜಾಯಿಷಿ ನೀಡಿದ್ದ ಪ್ರಸಂಗವನ್ನು ವಿವರಿಸಿದರು.

ಈ ಘಟನೆಯ ನಂತರ ಗೃಹ ಪ್ರವೇಶಕ್ಕೆ ಬಂದಿದ್ದ ಆ ಸಿನಿಮಾ ನಟಿಗೆ ಫೋನಾಯಿಸಿ, ನೀವು ಹೇಳಿದ್ದು ಸತ್ಯವಾಗಿದೆ. ಈ ವಿಷಯ ನಿಮಗೆ ಮೊದಲೇ ತಿಳಿದಿತ್ತೇ ಎಂದಾಗ, ಅದಕ್ಕವರು, ನಾನೂ ನಿಮ್ಮ ರೀತಿಯ ಮನೆ ಕಟ್ಟಿಸಿದ್ದೆ. ಮಳೆ ಬಂದಾಗ ಸೋರತೊಡಗಿತು. ನಂತರ ಡಿಸೈನ್ ಅನ್ನೇ ಬದಲಾವಣೆ ಮಾಡಿದೆ ಎಂದು ಹೇಳಿದರು. ಹೀಗೆ ಹೊಸ ಮನೆಗಳು ಕಟ್ಟುವಾಗ ಸ್ವಲ್ಪ ಎಡವಟ್ಟಾದರೂ ಆ ಮನೆ ಮಾಲೀಕರ ಕನಸು ಭಗ್ನಗೊಳ್ಳುತ್ತದೆ ಎಂದರು.

ಉತ್ತಮ ಮಳಿಗೆಗಳಿಗೆ ಬಹುಮಾನ: ಐದು ದಿನಗಳ ಮೈಬಿಲ್ಡ್–24ನಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳು, ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ರಿಯಲ್ ಎಸ್ಟೇಟ್‌ನಲ್ಲಿ ಇತ್ತೀಚಿನ ಆವಿಷ್ಕಾರ ಬಿಂಬಿಸುವ ಮಳಿಗೆಗಳನ್ನು ಸ್ಥಾಪಿಸಿ, ಜನರನ್ನು ಆಕರ್ಷಿಸಿದ ಮಳಿಗೆಗೆ ಪ್ರಶಸ್ತಿ ನೀಡಲಾಯಿತು. ಪ್ಲಾಟಿನಂ ಸ್ಟಾಲ್‌ಗಳ ಝೀರೋ ನಿರ್ಮಾಣದ ವರ್ಗದಲ್ಲಿ ಶ್ರೀನಿಧಿ ಐಕಾನ್ ಸ್ಕ್ವೇರ್ ಪ್ರಥಮ, ಅಲಯನ್ಸ್ ಸ್ಕ್ವೇರ್ ದ್ವಿತೀಯ, ಯುರೋಪ್ ಲಾಕ್ಸ್ ತೃತೀಯ ಬಹುಮಾನ ಪಡೆದಿವೆ.

ಮಲ್ಟಿಸ್ಟಾಲ್ ವರ್ಗದಲ್ಲಿ ಆರ್‌ಕೆಬಿ ಬಿಲ್ಡ್ ಪ್ರೋ ಪ್ರಥಮ, ಎಸ್‌ಕೆ ಸೂಪರ್ ಟಿಎಂಟಿ ಸ್ಟೀಲ್ ದ್ವಿತೀಯ, ಡೋರ್ವಿನ್ ಕಿಂಜಾ ಸ್ಟೀಲ್ ಡೋರ್ಸ್ ತೃತೀಯ ಬಹುಮಾನ ಪಡೆದಿದೆ. ಡೈಮಂಡ್ ಸ್ಟಾಲ್‌ನ ಜೆ.ಕೆ.ಡಿಸೈನರ್ಸ್ ಟೈಲ್ ವರ್ಲ್ಡ್ ಏಕ ಸ್ಟಾಲ್ ವರ್ಗದಲ್ಲಿ ಎನ್ವಿರೋ ಸೋಚ್ ಪ್ರಥಮ, ಎಲ್‌ಸ್ಕ್ವೇರ್ ದ್ವಿತೀಯ, ಡೈನಾಮಿಕ್ ರೈಸ್ ಎಲಿವೇಟರ್‌ಗಳು ಮಳಿಗೆ ತೃತೀಯ ಸ್ಥಾನ ಪಡೆದಿದೆ. ಮಲ್ಟಿಸ್ಟಾಲ್ ವರ್ಗದಲ್ಲಿ ನಕ್ಷಾ ಬಿಲ್ಡರ್ಸ್‌ಗೆ ಪ್ರಥಮ, ಸಿಲಿಕಾನ್ ಟ್ರೇಡರ್ಸ್‌ಗೆ ದ್ವಿತೀಯ, ಫಾರ್ಚೂನ್ ಆರೋಗ್ಯ ಮತ್ತು ಫಿಟ್‌ನೆಸ್ ಸಂಸ್ಥೆ ತೃತೀಯ ಸ್ಥಾನ ಪಡೆದಿದ್ದು, ಸಂಬಂಧಪಟ್ಟ ಮಾಲೀಕರು ಪ್ರಮಾಣ ಪತ್ರ ಸ್ವೀಕರಿಸಿದರು.

ವೇದಿಕೆಯಲ್ಲಿ ಎಂಬಿಸಿಟಿ ಮ್ಯಾನೇಜಿಂಗ್ ಟ್ರಸ್ಟಿ ಎಂ.ಸಿ.ಮಲ್ಲಿಕಾರ್ಜುನ, ಬಿಎಐ ಮೈಸೂರು ಕೇಂದ್ರದ ಅಧ್ಯಕ್ಷ ಎ.ಎಸ್.ಯೋಗಾನರಸಿಂಹ, ಮೈಬಿಲ್ಡ್ 24ರ ಅಧ್ಯಕ್ಷ ಕೆ.ಟಿ.ಗೋವಿಂದರಾಜು, ಬಿಎಐ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಕೆ.ಆರ್.ಪ್ರಭಾಕರ್ ರಾವ್, ಮೈಬಿಲ್ಡ್24ರ ಕಾರ್ಯದರ್ಶಿ ಎಸ್.ಎಲ್.ದಿನೇಶ್ ಸೇರಿದಂತೆ ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮುತ್ತು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಿಸ್ ಯು (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುಷ್ಪ–2 (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.10ಕ್ಕೆ, ಮ.1.55ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ರುಧೀರಂ (ಮ): ರಾ.9.50ಕ್ಕೆ.
ಸ್ಕ್ರೀನ್ 2	ಸೌಧುಕವ್ವಂ (ತ): ಬೆ.11.05ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಮೋನಾ 2 (3ಡಿ)(ಇಂ): ಸಂ.4.40ಕ್ಕೆ, ಮಿಸ್ ಯು (ತ): ರಾ.7ಕ್ಕೆ, ಪುಷ್ಪಾ 2 (ಕ): ರಾ.9.40ಕ್ಕೆ.
ಸ್ಕ್ರೀನ್ 3	ದಿ ಲಾರ್ಡ್ ಆಫ್ ದಿ ರಿಂಗ್ಸ್ (ಇಂ): ಬೆ.11.10ಕ್ಕೆ, ರಾ.9.55ಕ್ಕೆ, ಮೋನಾ 2 (3ಡಿ) (ಇಂ): ಮ.1.55ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.05ಕ್ಕೆ.
ಸ್ಕ್ರೀನ್ 4	ಮೋನಾ 2(3ಡಿ)(ಇಂ): ಬೆ.11.55ಕ್ಕೆ, ಪುಷ್ಪಾ 2 (ತೆ): ಮ.2.10ಕ್ಕೆ, ಸಂ.6ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಟ್ಟುಹಬ್ಬದ ಶುಭಾಶಯಗಳು




ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಸಚಿವ ಸಾ.ರಾ.ಮಹೇಶ್ ಹುಟ್ಟುಹಬ್ಬದ ಶುಭಾಶಯ ಕೋರಿದರು.

ನಿಯೋಜಿತ ಮಂಡ್ಯ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪರಿಗೆ ನಾಳೆ ಅಭಿನಂದನೆ

ಶರಣ ದರ್ಶನ ಕೃತಿ ಬಿಡುಗಡೆ

ಮೈಸೂರು,ಡಿ.16(ಎಂಟಿವೈ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಡಿ.18ರಂದು ಬೆಳಿಗ್ಗೆ 11ಕ್ಕೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅವರಿಗೆ ಅಭಿನಂದನೆ ಹಾಗೂ ಶರಣ ದರ್ಶನ ಕೃತಿ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶರಣ ಸಾಹಿತ್ಯ ಪರಿಷತ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಕಲಾ ಕೂಟದಿಂದ ಆಯೋಜಿಸಿರುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಿ, 'ಶರಣ ದರ್ಶನ' ಕೃತಿ ಬಿಡುಗಡೆ ಮಾಡಿ, ಅಭಿನಂದಿಸಲಿದ್ದಾರೆ. ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಅಭಿನಂದನಾ ನುಡಿಗಳನ್ನು ಆಡಲಿದ್ದಾರೆ. ಮುಕ್ತ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕಿ ಜ್ಯೋತಿ ಶಂಕರ್ ಕೃತಿ ಕುರಿತು ಮಾತನಾಡಲಿದ್ದಾರೆ ಎಂದರು.

ಅಂದು ಬೆಳಿಗ್ಗೆ 10.30ಕ್ಕೆ ಇಲ್ಲಿನ ಜೆ.ಪಿ.ನಗರದ ನಾದಹಂಸಿನಿ ಭಜನಾ ತಂಡದಿಂದ ವಚನ ಗಾಯನ ಜರುಗಲಿದೆ. ಕಾರ್ಯಕ್ರಮದಲ್ಲಿ 700 ರೂ. ಮುಖಬೆಲೆಯ ಶರಣ ದರ್ಶನ ಕೃತಿಯನ್ನು 200 ರೂ.ಗೆ ನೀಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ ಉಪಸ್ಥಿತರಿದ್ದರು.

ಎರಡೂವರೆ ತಿಂಗಳು ಜೋಗ್‌ಫಾಲ್ಸ್ ಪ್ರವೇಶ ಬಂದ್!

ಶಿವಮೊಗ್ಗ: ವಿಶ್ವ ವಿಖ್ಯಾತ ಜೋಗ್ ಫಾಲ್ಸ್ ಅಥವಾ ಜೋಗ ಜಲಪಾತ ಪ್ರವಾಸಿಗರ ವೀಕ್ಷಣೆಗೆ ಎರಡೂವರೆ ತಿಂಗಳ ಕಾಲ ನಿರ್ಬಂಧ ವಿಧಿಸಲಾಗಿದೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕಿನ ಜೋಗ ಜಲಪಾತ ವೀಕ್ಷಣೆಗೆ ಪ್ರವಾಸಿಗರಿಗೆ ಜನವರಿ 1ರಿಂದ ಮಾರ್ಚ್ 15ರವರೆಗೆ ಪ್ರವೇಶ ನಿರ್ಬಂಧಿಸಲಾಗಿದೆ. ಜೋಗ ಜಲಪಾತದ ಮುಖ್ಯದ್ವಾರ ಮತ್ತು ಪ್ರವಾಸಿಗರಿಗೆ ಮೂಲ ಸೌಲಭ್ಯ ಒದಗಿಸಲು ಸಮಗ್ರ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎರಡೂವರೆ ತಿಂಗಳ ಕಾಲ ಪ್ರವಾಸಿಗರ ವೀಕ್ಷಣೆಗೆ ನಿರ್ಬಂಧಿಸಿ ಶಿವಮೊಗ್ಗ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಕಾಮಗಾರಿ ಅನುಷ್ಠಾನದ ಸಂದರ್ಭದಲ್ಲಿ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ತೊಂದರೆ ಆಗಬಾರದು ಎಂದು ಪ್ರವೇಶ ನಿರ್ಬಂಧಿಸಲಾಗಿದೆ. ಸಾರ್ವಜನಿಕರು ಮತ್ತು ಪ್ರವಾಸಿಗರು ಸಹಕರಿಸುವಂತೆ ಜಿಲ್ಲಾಧಿಕಾರಿ ಹಾಗೂ ಜೋಗ ಜಲಪಾತ ನಿರ್ವಹಣಾ ಪ್ರಾಧಿಕಾರ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 08182–251444 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ಜೋಗ ಜಲಪಾತದಲ್ಲಿ ಸಮಗ್ರ ಅಭಿವೃದ್ಧಿಗೆ 150 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಸದ್ಯ ಕಾಮಗಾರಿ ಬಿರುಸಿನಿಂದ ನಡೆಯುತ್ತಿದೆ. ಅಲ್ಲದೆ, ಕಾಮಗಾರಿ ನಡೆಯುತ್ತಿರುವುದರಿಂದ ಪ್ರವಾಸಿಗರು ದಿನನಿತ್ಯ ಕಿರಿಕಿರಿ ಅನುಭವಿಸುತ್ತಿದ್ದು, ಟ್ರಾಫಿಕ್ ಜಾಮ್ ಸೇರಿ ವಿವಿಧ ಸಮಸ್ಯೆಗಳು ಎದುರಿಸುವಂತಾಗಿದೆ. ಹೀಗಾಗಿ ಪ್ರವಾಸಿಗರಿಗೆ ತೊಂದರೆಯಾಗದಂತೆ ಜ.1 ರಿಂದ ಮಾ.15ರವರೆಗೆ ಸಾರ್ವಜನಿಕರು ಮತ್ತು ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಸೋಸಲೆ ಮಠದಲ್ಲಿ ಶ್ರೀ ವಿದ್ಯಾಪ್ರಸನ್ನ ತೀರ್ಥರ ಆರಾಧನ ಮಹೋತ್ಸವ

ತಿ.ನರಸೀಪುರ, ಡಿ.16– ತಾಲೂಕಿನ ಸೋಸಲೆ ಗ್ರಾಮದಲ್ಲಿರುವ ಸೋಸಲೆ ವ್ಯಾಸರಾಜರ ಮಹಾ ಸಂಸ್ಥಾನದಲ್ಲಿ ಹಿಂದಿನ ಯತಿಗಳಾದ ಶ್ರೀ ವಿದ್ಯಾ ಪ್ರಸನ್ನ ತೀರ್ಥರ ಆರಾಧನಾ ಮಹೋತ್ಸವ ನೆರವೇರಿತು.

ಪೀಠಾಧಿಪತಿ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮೂಲ ವೃಂದಾವನಕ್ಕೆ ನಿರ್ಮಾಲು ವಿಸರ್ಜನೆ, ಜಲಾಭಿಷೇಕ, ಫಲ ಪಂಚಾಮೃತ ಅಭಿಷೇಕ, ಅಲಂಕಾರ ಮತ್ತು ವಿಶೇಷ ಮಂಗಳಾರತಿ ನೆರವೇರಿಸಲಾಯಿತು. ಇದೇ ವೇಳೆ ಶ್ರೀಗಳು ಸಂಸ್ಥಾನ ಪೂಜೆಯೊಂದಿಗೆ ನಮನ ಸಲ್ಲಿಸಿದರು. ಮಾರ್ಗಶಿರ ಹುಣ್ಣಿಮೆ ಅಂಗವಾಗಿ ಮಠದ ಮೂಲ ಪ್ರತಿಮೆ ಮತ್ತು ಸಾಲಿಗ್ರಾಮಗಳಿಗೆ ಸಹಸ್ರ ಶಂಖಾಭಿಷೇಕ ನೆರವೇರಿಸಿದ ನಂತರ ಶ್ರೀಗಳು ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡಿ, ಆಶೀರ್ವದಿಸಿದರು.

ಇದೇ ವೇಳೆ ಆಶೀರ್ವಚನ ನೀಡಿದ ಅವರು, ವೇದಾಂತ ಕ್ಷೇತ್ರ ಮತ್ತು ಮಾಧ್ವ ಪರಂಪರೆಗೆ ಶ್ರೀ ವಿದ್ಯಾ ಪ್ರಸನ್ನ ತೀರ್ಥರ ಕೊಡುಗೆ ಅಪಾರವಾಗಿದೆ. ಪ್ರಖರ ವಾಗ್ಮಿಗಳು, ಅಪ್ರತಿಮ ಪಂಡಿತರು, ಕೃತಿ ರಚನೆಕಾರರೂ ಆಗಿದ್ದ ಶ್ರೀಗಳು ಮಠದಲ್ಲಿ ವಿರಾಜಮಾನರಾಗಿದ್ದರೂ ಜನಾನುರಾಗಿಯಾಗಿ ಭಕ್ತರ ಮನದಲ್ಲಿ ನೆಲೆಸಿದ್ದರು. ಅವರ ಜೀವನ ಮತ್ತು ಸಾಧನೆ ಮಾದರಿ ಎಂದು ಸ್ಮರಿಸಿದರು.

ಶ್ರೀ ವಿದ್ಯಾವಾರಿಧಿ ತೀರ್ಥರನ್ನು ಗುರುವಾಗಿ ಪಡೆದಿದ್ದ ಅವರು ಹಲವಾರು ಧಾರ್ಮಿಕ, ಸಾಂಸ್ಕೃತಿಕ ಸಂಘ–ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ನಾಡಿನ ಪರಂಪರೆಗೆ ಬಹು ದೊಡ್ಡ ಕೊಡುಗೆ ನೀಡಿದರು. ಅವರಿಂದ ಚಾಲನೆಗೊಂಡ ಅನೇಕ ಸಂಘಟನೆಗಳು ಇಂದಿಗೂ ಧಾರ್ಮಿಕ, ವೈದಿಕ ಕಾರ್ಯಗಳನ್ನು ಮುಂದುವರಿಸಿಕೊಂಡು ಬರುತ್ತಿರುವುದು ಗಮನಾರ್ಹ ಸಂಗತಿ. ಶ್ರೀ ವಿದ್ಯಾ ಪ್ರಸನ್ನ ತೀರ್ಥರು 1969ರಲ್ಲಿ ವೃಂದಾವನಸ್ಥರಾದರೂ ಅವರು ಹಾಕಿಕೊಟ್ಟ ಮಾರ್ಗ, ರಚಿಸಿದ ಪದ್ಯ, ಗ್ರಂಥಗಳು ಎಂದಿಗೂ ದಾರಿದೀಪವಾಗಿರುತ್ತವೆ ಎಂದು ಬಣ್ಣಿಸಿದರು.



ತಿ.ನರಸೀಪುರ ಸಮೀಪದ ಸೋಸಲೆಯಲ್ಲಿ ಶ್ರೀ ವಿದ್ಯಾ ಪ್ರಸನ್ನ ತೀರ್ಥರ ಆರಾಧನಾ ಮಹೋತ್ಸವ ಅಂಗವಾಗಿ ಮೂಲ ವೃಂದಾವನಕ್ಕೆ ವಿಶೇಷ ಪೂಜೆ ನೆರವೇರಿಸಲಾಯಿತು. ಸೋಸಲೆ ವ್ಯಾಸರಾಜ ಮಠದ ಶ್ರೀ ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ ಪೂಜಾದಿಗಳನ್ನು ನೆರವೇರಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಆರಾಧನಾ ಮಹೋತ್ಸವದ ವೇಳೆ ನೂರಾರು ಭಕ್ತರು ದೇವರು ಹಾಗೂ ವೃಂದಾವನದ ದರ್ಶನ ಪಡೆದು ಧನ್ಯರಾದರು. ಅವರಿಗೆ ತೀರ್ಥಪ್ರಸಾದ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕ ಜಗನ್ನಾಥ ರಾವ್, ಮಠದ ಪ್ರಮುಖರಾದ ರಾಯರಹುಂಡಿ ಆನಂದ ರಾವ್, ಸುಧೀಂದ್ರ ರಾವ್, ವೆಂಕಣ್ಣ, ಶ್ರೀಗಳ ಆಪ್ತ ಕಾರ್ಯದರ್ಶಿ ಅಭಿಜಿತ್ ರಾವ್, ಮಠದ ವ್ಯವಸ್ಥಾಪಕ ಶ್ರೀಧರ್ ಮತ್ತಿತರರು ಭಾಗವಹಿಸಿದ್ದರು.

ಕೃಷಿ ಹೊಂಡದಲ್ಲಿ ಸ್ಫೋಟ ಪ್ರಕರಣ: ಡ್ರೋನ್ ಪ್ರತಾಪ್‌ಗೆ 10 ದಿನ ನ್ಯಾಯಾಂಗ ಬಂಧನ

ತುಮಕೂರು: ನೀರಿಗೆ ಸೋಡಿಯಂ ಮೆಟಲ್ ಎಸೆದು ಬ್ಲಾಸ್ಟ್ ಮಾಡಿದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಕನ್ನಡದ ಬಿಗ್‌ಬಾಸ್ ಖ್ಯಾತಿಯ ಡ್ರೋನ್ ಪ್ರತಾಪ್ ಅವರನ್ನು ಮಧುಗಿರಿ ಕೋರ್ಟ್ ಸೋಮವಾರ 10 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ಡ್ರೋನ್ ಪ್ರತಾಪ್ ಅವರ ಪೊಲೀಸ್ ಕಸ್ಟಡಿ ಅವಧಿ ಇಂದು ಅಂತ್ಯಗೊಂಡ ಹಿನ್ನೆಲೆಯಲ್ಲಿ ಪೊಲೀಸರು ಮಧುಗಿರಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಆರೋಪಿಯ ವಿಚಾರಣೆ ನಡೆಸಿದ ಕೋರ್ಟ್, ಡಿಸೆಂಬರ್ 26ರವರೆಗೂ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದೆ.

ಮಧುಗಿರಿ ತಾಲೂಕಿನ ಜನಕಲೋಟಿ ಬಳಿ ಕೃಷಿ ಹೊಂಡಕ್ಕೆ ಸೋಡಿಯಂ ಎಸೆದು ಸ್ಫೋಟಿಸಿದ ಆರೋಪದ ಮೇಲೆ ಕಳೆದ ಗುರುವಾರ ಡ್ರೋನ್ ಪ್ರತಾಪ್ ಅವರನ್ನು ಮಿಡಿಗೇಶಿ ಪೊಲೀಸರು ಬಂಧಿಸಿದ್ದರು.

ಬಳಿಕ, ಪೊಲೀಸರು ಡ್ರೋನ್ ಪ್ರತಾಪ್‌ನನ್ನು ಶುಕ್ರವಾರ ಮಧುಗಿರಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು. ಪೊಲೀಸರ ಮನವಿ ಮೇರೆಗೆ ನ್ಯಾಯಾಲಯ ಡ್ರೋನ್ ಪ್ರತಾಪ್ ಅವರನ್ನು ಮೂರು ದಿನ ಪೊಲೀಸ್ ಕಸ್ಟಡಿಗೆ ನೀಡಿತ್ತು.

ಕೃಷಿ ಹೊಂಡದಲ್ಲಿ ಸ್ಫೋಟ ಪ್ರಕರಣ ಸಂಬಂಧ ಡ್ರೋನ್ ಪ್ರತಾಪ್ ಅವರ ವಿರುದ್ಧ ಮಿಡಿಗೇಶಿ ಠಾಣೆ ಪೊಲೀಸರು BNS ಸೆಕ್ಷನ್ 288 ಮತ್ತು ಸ್ಫೋಟಕ ವಸ್ತು ನಿಯಂತ್ರಣ ಕಾಯ್ದೆ 3ರ ಅಡಿ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರಲ್ಲಿ ಪತ್ನಿ ಕಿರುಕುಳಕ್ಕೆ ಮತ್ತೋರ್ವ ಬಲಿ

ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾದ ಕ್ರಿಕೆಟಿಗ!

ಬೆಂಗಳೂರು: ಪತ್ನಿಯ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದ ಬೆಂಗಳೂರಿನ ಟೆಕ್ಕಿ ಅತುಲ್ ಸುಭಾಷ್ ಪ್ರಕರಣ ದೇಶಾದ್ಯಂತ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಪತ್ನಿ ಕಾಟಕ್ಕೆ ಬೆಂಗಳೂರಿನಲ್ಲಿ ಮತ್ತೋರ್ವ ಬಲಿಯಾಗಿದ್ದು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾನೆ. ಬೆಂಗಳೂರು ಉತ್ತರ ತಾಲೂಕಿನ ಹೆಸರಘಟ್ಟ ರಸ್ತೆಯ ಸಿಲುವೆಪುರದಲ್ಲಿ ಈ ಘಟನೆ ನಡೆದಿದ್ದು ಪತ್ನಿಯ ಕಿರುಕುಳ ಹಾಗೂ ಅಕ್ರಮ ಸಂಬಂಧದಿಂದ ಬೇಸತ್ತು 41 ವರ್ಷದ ಬಾಲರಾಜ್ ಮನೆಯಲ್ಲೇ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಬಾಲರಾಜ್ 18 ವರ್ಷದ ಹಿಂದೆ ಪತ್ನಿ ಕುಮಾರಿ ಎಂಬುವರನ್ನು ಎರಡನೇ ಮದುವೆಯಾಗಿದ್ದರು. ಆದರೆ ಇಬ್ಬರ ಮಧ್ಯೆ ನಿರಂತರವಾಗಿ ಜಗಳವಾಗುತ್ತಿತ್ತು ತನ್ನ ಪತ್ನಿ ತನಗೆ ಕಿರುಕುಳ ನೀಡುವುದರ ಜೊತೆಗೆ ಅಕ್ರಮ ಸಂಬಂಧ ಹೊಂದಿದ್ದಾಳೆ ಎಂದು ಬಾಲರಾಜ್ ಆರೋಪಿಸಿದ್ದಾರೆ. ಇನ್ನು ಗಲಾಟೆ ನಂತರ ಕುಮಾರಿ ಗಂಡನ ಮನೆ ಬಿಟ್ಟು ತವರು ಮನೆ ಸೇರಿಕೊಂಡಿದ್ದಳು. ಸದ್ಯ ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಾಳೆ ರಾಷ್ಟ್ರೀಯ ಅಂಗವಿಕಲರ ಸಬಲೀಕರಣ ದಿನಾಚರಣೆ

ವಿಶೇಷ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ಡಿ.16(ಎಂಟಿವೈ)– ಮೈಸೂರಿನ ಕುವೆಂಪುನಗರದ ಗಾನಭಾರತಿ ರಮಾ ಗೋವಿಂದ ಕಲಾ ವೇದಿಕೆಯಲ್ಲಿ ಡಿ.18ರಂದು ಬೆಳಗ್ಗೆ 9ಕ್ಕೆ ರಾಷ್ಟ್ರೀಯ ಅಂಗವಿಕಲರ ಸಬಲೀಕರಣ ದಿನಾಚರಣೆ ಹಾಗೂ ವಿಶೇಷಚೇತನ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಕ್ಷಮ ಸಂಸ್ಥೆ ನಗರ ಘಟಕದ ಅಧ್ಯಕ್ಷ ಬಿ.ಎನ್.ಜಯರಾಮ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದಲ್ಲಿ 10ರಿಂದ 12 ಶಾಲೆಗಳ ವಿಶೇಷ ಚೇತನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದಲ್ಲಿ ನೃತ್ಯಾಲಯ ಟ್ರಸ್ಟ್ ನಿರ್ದೇಶಕಿ ತುಳಸಿ ರಾಮಚಂದ್ರ, ಸಕ್ಷಮ ಮಹಾಪೋಷಕ ಡಾ.ಚಂದ್ರಶೇಖರ್, ಮೈಸೂರು ವಿಭಾಗ ಸಂಯೋಜಕ ಅರುಣಾಚಲ ಶರ್ಮ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಕ್ಷಮ ಸಂಸ್ಥೆ 21 ಬಗೆಯ ದೈಹಿಕ, ಮಾನಸಿಕ ಸಮಸ್ಯೆಗಳಿಂದ ಬಳಲುವ ಮಕ್ಕಳ ಅಭಿವೃದ್ಧಿಗೆ ಸಂಸ್ಥೆ ಶ್ರಮಿಸುತ್ತಿದೆ ಎಂದರು.


ಸುದ್ದಿಗೋಷ್ಠಿಯಲ್ಲಿ ಸಕ್ಷಮ ಮೈಸೂರು ಘಟಕದ ಕಾರ್ಯದರ್ಶಿ ಗಣೇಶ್, ಸಹ ಕಾರ್ಯದರ್ಶಿ ಪ್ರವೀಣ್ ಕುಮಾರ್ ಇದ್ದರು.

ಅಂಕಗಳಿರಲಿ ಹೆಚ್ಚಿನ ಕೌಶಲ್ಯ ಬೆಳೆಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಮೈಸೂರು ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ ಸಲಹೆ

ಮೈಸೂರು, ಡಿ.16(ಎಸ್‌ಬಿಡಿ)– ಕೇವಲ ಅಂಕಗಳೇ ಮಾನದಂಡವಲ್ಲ, ಅಗತ್ಯ ಕೌಶಲ್ಯ ಬೆಳೆಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ, ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಮೊದಲ ಪೀಳಿಗೆಯ 11 ಉದ್ಯಮಿಗಳನ್ನು ಕುರಿತು ಮೈಕಾಸ್ ಕಾಲೇಜಿನ ಬಿ.ಕಾಂ ಆನರ್ಸ್(ಹಣಕಾಸು ನಿರ್ವಹಣೆ) ವಿಭಾಗದ ವಿದ್ಯಾರ್ಥಿಗಳು ರಚಿಸಿರುವ 'ಫೌಂಡರ್ಸ್ ನೆಕ್ಸ್ಟ್ ಡೋರ್' ಕೃತಿಯನ್ನು ಸೋಮವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ತರಗತಿಯ ಪಾಠಕ್ಕಿಂತ ಸಮಾಜ ಹಾಗೂ ಪ್ರಕೃತಿಯಲ್ಲಿ ಕಲಿಯುವುದು ಬಹಳಷ್ಟಿದೆ. ಅಂಕಪಟ್ಟಿ ಪಾಸ್‌ಪೋರ್ಟ್ ಇದ್ದಂತೆ. ಕೌಶಲ್ಯ ವೀಸಾ ಇದ್ದಂತೆ. ಕೇವಲ ಅಂಕಗಳೇ ಮಾನದಂಡವಾಗುವುದಿಲ್ಲ. ಆದ್ದರಿಂದ ಕೌಶಲ್ಯ ರೂಪಿಸಿಕೊಳ್ಳುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಮೊದಲ ಪೀಳಿಗೆಯ ಉದ್ಯಮಿಗಳ ಕುರಿತ ಪುಸ್ತಕ ಹೊರತಂದಿರುವುದು ಶ್ಲಾಘನಾರ್ಹ ಎಂದರು.



ನವ ಉದ್ಯಮಿಗಳ ಕುರಿತ 'ಫೌಂಡರ್ಸ್ ನೆಕ್ಸ್ಟ್ ಡೋರ್' ಕೃತಿಯನ್ನು ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ ಬಿಡುಗಡೆ ಮಾಡಿದರು.

ಅಂಕಣಕಾರ ರಂಗಸ್ವಾಮಿ ಮೂಕನಹಳ್ಳಿ ಮಾತನಾಡಿ, ಉದ್ಯೋಗ ಮಾಡುವುದು ಸುಲಭ. ಆದರೆ ಉದ್ಯಮವನ್ನು ಕಟ್ಟಿ ಬೆಳೆಸುವುದು ಕಷ್ಟಸಾಧ್ಯ. ಈ ಕಾರ್ಯಕ್ಕೆ ಮುಂದಾದವರಿಗೆ ಪ್ರೋತ್ಸಾಹ ಹಾಗೂ ಸಹಾಯ ಅಗತ್ಯ. ಉದ್ಯಮದ ಮೂಲಕ ಇತರರಿಗೆ ಉದ್ಯೋಗ ಕಲ್ಪಿಸುವವರನ್ನೂ ಸಮಾಜ ಗೌರವಿಸಬೇಕು. ದೇಶದ ಜಿಡಿಪಿಯ ಶೇ.40ರಷ್ಟು ಸಣ್ಣ ಉದ್ಯಮಿಗಳ ಕೊಡುಗೆಯಾಗಿದೆ. ಉದ್ಯಮ ಸ್ಥಾಪಿಸುವವರು ಬುಕ್ಸ್ ಆಫ್ ಅಕೌಂಟ್ಸ್, ಕಾನೂನುಬದ್ಧ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು. ದೊಡ್ಡ ಕನಸು ಹಾಗೂ ಗುರಿಯೊಂದಿಗೆ ಶ್ರಮಿಸಬೇಕು ಎಂದು ಹೇಳಿದರು.

ಮತ್ತೋರ್ವ ಅಂಕಣಕಾರ ಎನ್.ರವಿಶಂಕರ್ ಮಾತನಾಡಿ, ಕೈಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳು ಪ್ರೋತ್ಸಾಹದಾಯಕವಾಗಿರಬೇಕು. ದೇಶದ ಹಲವು ಸಮಸ್ಯೆಗಳಿಗೆ ಉದ್ಯಮಗಳ ಸ್ಥಾಪನೆ ಯಿಂದ ಪರಿಹಾರವಿದೆ ಎಂದು ಅಭಿಪ್ರಾಯಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ನವ ಉದ್ಯಮಿಗಳನ್ನು ಭೇಟಿ ಮಾಡಿ, ಈ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಸ್ಫೂರ್ತಿದಾಯಕ ಯಶೋಗಾಥೆಗಳಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಕಾಸ್ ಆಡಳಿತ ಮಂಡಳಿ ಟ್ರಸ್ಟಿಗಳಾದ ಅಮಿರ್ ಸದಾನ್, ಪಾಜೀನ್ ರಾಹೀಲ್. ಆಯೇಷಾ, ಕಾಲೇಜಿನ ಪ್ರಾಂಶುಪಾಲ ಜಿ.ರಾಮಚರಣ್, ಉದ್ಯಮಿಗಳಾದ ಅಭಿಜ್ಞಾ ರಾಜೀವ್, ಮಹಿಮಾ ಹೆಗ್ಡೆ, ವಿನುತಾ ಸುಬ್ಬಯ್ಯ, ರಾಯಲ್ ರೆಬ್ಬೆಲೋ, ನಂದಿತಾ ಶರ್ಮ, ಕಲ್ಪನಾ, ಶ್ರೀವತ್ಸ ಹೆಬ್ಬಾರ್, ವಿದ್ಯಾರ್ಥಿ ಲೇಖಕರಾದ ಈಶಾನ್, ನಿದಾ, ಮನೀಷಾ ಹೆಬ್ಬಾರ್, ಹುದಾ ಅಕ್ಮಲ್, ನಿದಾ ಫಾತಿಮಾ ಮತ್ತಿತರರು ಉಪಸ್ಥಿತರಿದ್ದರು.

ಡಿ. 20ರಿಂದ ಮೂರು ದಿನ 'ದಿ ವೆಡ್ಡಿಂಗ್ ಮೇಳ'

ಮದುವೆಗೆ ಅಗತ್ಯವಿರುವ ಸೇವೆ, ಸರಕುಗಳ ಪ್ರದರ್ಶನ–ಮಾರಾಟ

ಮೈಸೂರು,ಡಿ.16(ಎಂಟಿವೈ)– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಕಾಲೇಜು ಮೈದಾನದಲ್ಲಿ ಡಿ. 20ರಿಂದ 22ರವರೆಗೆ ಮದುವೆಗೆ ಅಗತ್ಯವಾದ ಸೇವೆ, ಸಾಮಗ್ರಿಗಳ ಪ್ರದರ್ಶನ ಹಾಗೂ ಮಾರಾಟದ 'ದಿ ವೆಡ್ಡಿಂಗ್ ಮೇಳ' ಆಯೋಜಿಸಲಾಗಿದೆ ಎಂದು ಎಂಐ 7 ಸಂಸ್ಥೆಯ ವ್ಯವಸ್ಥಾಪಕ ಬೆನೆಟ್ ಜೋನ್ಸ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮ್ಯಾನೇಜ್ಮೆಂಟ್ ಮತ್ತು ಇನಿಶಿಯೇಟಿವ್ 7(ಎಂಐ 7) ಸಂಸ್ಥೆ, ವಿಎಸ್‌ಪಿ ಎಂಟರ್‌ಟೈನ್ಮೆಂಟ್, ಎಸ್‌ಆರ್‌ಕೆ ಇವೆಂಟ್ಸ್ ಸಂಸ್ಥೆ ವತಿಯಿಂದ ವೆಡ್ಡಿಂಗ್ ಮೇಳ ಆಯೋಜಿಸಲಾಗಿದ್ದು, ಡಿ.20ರಂದು ಬೆಳಗ್ಗೆ 11ಕ್ಕೆ ಉದ್ಘಾಟನೆಗೊಳ್ಳಲಿದೆ ವಿಸಿಆರ್ ಡೆವಲಪರ್ಸ್ ಮತ್ತು ಬಿಲ್ಡರ್ಸ್ ಮಾಲೀಕ ವಿ.ಸಿ.ರವಿಕುಮಾರ್, ಚಿರಾಗ್ ಆ್ಯಡ್ಸ್ ಮಾಲೀಕ ವಿವೇಕ್, ವಿ.ಎಸ್.ಪಿ ಎಂಟರ್‌ಟೈನ್ಮೆಂಟ್ ಮಾಲೀಕ ಧೀರಜ್ ಪ್ರಸಾದ್, ಕರಿಯರ್ ಪಾಯಿಂಟ್ ಮಾಲೀಕ ಆಶೀಶ್ ಚಡ್ಡಾ, ಫ್ಯೂಶನ್ ಮೈಂಡ್ಸ್ ಟೆಕ್ನಾಲಜೀಸ್ ಮಾಲೀಕ ಯಶವಂತ್, ಫ್ರಾಂಚೈಸ್ ಬ್ರಿಗೇಡ್ ಮಾಲೀಕ ಪ್ರವೀಣ್, ಪಾಲ್ ಪರ್ಫೆಕ್ಟ್ ವೆಡ್ಡಿಂಗ್ ಮಾಲೀಕ ಪಾಲ್, ಎಸ್.ಆರ್.ಕೆ ಸಂಸ್ಥೆಯ ದರ್ಶನ್ ಪಾಲ್ಗೊಳ್ಳುವರು ಎಂದರು.

ಮದುವೆಗೆ ಅಗತ್ಯವಾದ ಆಮಂತ್ರಣ ಪತ್ರಿಕೆಯಿಂದ ಹಿಡಿದು ಡೆಕೊರೇಷನ್, ಕ್ಯಾಟರಿಂಗ್, ಸೌಂಡ್ ಸಿಸ್ಟಮ್, ಹನಿಮೂನ್ ಪ್ಲಾನಿಂಗ್‌ವರೆಗೂ ಸಹಕಾರ ನೀಡುವ ಉದ್ಯಮಗಳ ಸುಮಾರು 75 ಮಳಿಗೆಗಳು ಮೇಳದಲ್ಲಿ ಭಾಗವಹಿಸಲಿವೆ. ಮದುವೆ ಸೆಟ್‌ಗಳ ಲೈವ್ ಪ್ರದರ್ಶನವೂ ಇರಲಿದೆ. ಪ್ರತಿದಿನ ಸಂಜೆ 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಡಿ.22ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ. ಮೇಳಕ್ಕೆ ಎಲ್ಲರಿಗೂ ಉಚಿತ ಪ್ರವೇಶಾವಕಾಶವಿದೆ ಎಂದು ತಿಳಿಸಿದರು.

ಹೆಬ್ಬಾಳು ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದಲ್ಲಿ ವಿಜೃಂಭಣೆಯ ವಿಷ್ಣು ದೀಪೋತ್ಸವ;

ಲಕ್ಷಕ್ಕೂ ಅಧಿಕ ಹಣತೆಗಳ ಬೆಳಕಲ್ಲಿ ಕಂಗೊಳಿಸಿದ ದೇವಾಲಯ ಆವರಣ

ನಮ್ಮ ಅಂತಃಕರಣದ ಅಂಧಕಾರದಿಂದ ಜ್ಞಾನದ ಜ್ಯೋತಿಯತ್ತ ಪಯಣಿಸಲು ನಮ್ಮ ಹಿರಿಯರು ದೀಪೋತ್ಸವದಂತಹ ಪರಂಪರೆ ಕಟ್ಟಿಕೊಟ್ಟಿದ್ದಾರೆ; ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ





ಹೆಬ್ಬಾಳಿನ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಪೂಜಾ ವಿಧಿವಿಧಾನ ನೆರವೇರಿಸಿದರು.

ಮೈಸೂರು,ಡಿ.16(ಪಿಎಂ)– ಪ್ರಾಚೀನ ಪರಂಪರೆಯುಳ್ಳ ಹೆಬ್ಬಾಳಿನ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ವಿಷ್ಣು ದೀಪೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನದ ಆವರಣದ ಸುತ್ತಲು ಲಕ್ಷಾಂತರ ದೀಪಗಳ ಬೆಳಗುವ ಮೂಲಕ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರ ಕಣ್ಣಿಗೆ ಬೆಳಕಿನ ಹಬ್ಬವನ್ನುಂಟು ಮಾಡಿದವು.

ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದ ದೇವಸ್ಥಾನವು ಲಕ್ಷಕ್ಕೂ ಹೆಚ್ಚು ದೀಪಗಳಿಂದ ಮತ್ತಷ್ಟು ಕಂಗೊಳಿಸಿತು. ಭಕ್ತರು ಸಡಗರ–ಸಂಭ್ರಮದಿಂದ ಪಾಲ್ಗೊಂಡಿದ್ದ ಈ ಉತ್ಸವಕ್ಕೆ ಭೈರವೈಕ್ಯ ಪದ್ಮಭೂಷಣ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಭಾವಚಿತ್ರದ ಎದುರು ದೀಪ ಬೆಳಗಿಸುವ ಮೂಲಕ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಚಾಲನೆ ನೀಡಿದರು.

ಬೆಳಗಿದವು ಲಕ್ಷಾಂತರ ದೀಪಗಳು: ಇದಕ್ಕೂ ಮುನ್ನ ಗರ್ಭಗುಡಿಯಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ವಿಗ್ರಹಕ್ಕೆ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಪೂಜೆ ನೆರವೇರಿಸಿದರು. ಅಲ್ಲದೆ, ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಮ್ಮುಖದಲ್ಲಿ ಗಣಪತಿ ಹೋಮ, ಸುದರ್ಶನ ಹೋಮ, ಪೂರ್ಣಾಹುತಿ ಸಹ ನಡೆದವು. ನಂತರ ದೀಪೋತ್ಸವಕ್ಕೆ ಚಾಲನೆ ದೊರೆಯುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಲಕ್ಷಾಂತರ ಸಂಖ್ಯೆಯಲ್ಲಿದ್ದ ದೀಪಗಳನ್ನು ಹಚ್ಚಿ ಭಕ್ತಿಭಾವ ಮೆರೆದರು.

ಬಳಿಕ ದೇವಸ್ಥಾನದ ಆವರಣದಲ್ಲಿರುವ ಬಿಜಿಎಸ್ ಸಾಂಸ್ಕೃತಿಕ ಸಭಾ ಭವನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಆಶೀರ್ವಚನ ನೀಡಿದರು. ನಮ್ಮ ಅಂತಃಕರಣದಲ್ಲಿರುವ ಅಂಧಕಾರದಿಂದ ಜ್ಞಾನದ ಜ್ಯೋತಿಯತ್ತ ಪಯಣಿಸಬೇಕೆಂಬ ಉದ್ದೇಶದಿಂದ ನಮ್ಮ ಹಿರಿಯರು ದೀಪೋತ್ಸವದಂತಹ ಪರಂಪರೆಯನ್ನು ನಮಗೆ ಕಟ್ಟಿಕೊಟ್ಟಿದ್ದಾರೆ ಎಂದು ತಿಳಿಸಿದರು.

ನಮ್ಮೊಳಗೆ ಕತ್ತಲೆ ಇದ್ದರೆ ಜಗತ್ತೆಲ್ಲಾ ಕತ್ತಲೆಯಾಗಿ ಕಾಣುತ್ತದೆ. ಬುದ್ಧನಿಗೆ ಜ್ಞಾನೋದಯವಾದ ತಕ್ಷಣ ಇಡೀ ಜಗತ್ತಿಗೆಲ್ಲಾ ಜ್ಞಾನೋದಯವಾಯಿತು ಎಂಬಂತೆ ಭಾಸವಾಯಿತು. ಆದರೆ ಒಬ್ಬನ ಒಳಗಿನ ಜ್ಯೋತಿ ಇನ್ನೊಬ್ಬನ ಒಳಗಿನ ಜ್ಯೋತಿಯಾಗಲು ಸಾಧ್ಯವಿಲ್ಲವೆಂದು ತದನಂತರದಲ್ಲಿ ಅವನ ಅರಿವಿಗೆ ಬಂದಿತು. ಹಾಗಾಗಿಯೇ ಅವರವರ ಒಳಗಿನ ಬೆಳಕನ್ನು ಅವರೇ ಸ್ವಯಂ ಆಗಿ ಹೊತ್ತಿಸಿಕೊಳ್ಳಬೇಕೆಂಬ ಸಂದೇಶವನ್ನು ಬುದ್ಧ ನೀಡಿದ್ದಾನೆ ಎಂದರು.

ಐನ್‌ಸ್ಟೈನ್‌ನ ಸೂತ್ರದ ಆಧಾರದಲ್ಲಿ ಆಟಂ ಬಾಂಬ್ ಅನ್ನು ರಾಬರ್ಟ್ ಓಪನ್ ಹೈಮರ್ ಕಂಡು ಹಿಡಿದನು. ಅದನ್ನು ಮೊದಲ ಬಾರಿಗೆ ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ಮೇಲೆ ಪ್ರಯೋಗ ಮಾಡಿದಾಗ, ನೂರಾರು ಮೈಲಿ ದೂರದಲ್ಲಿ ಸಿಡಿದ ಆಟಂ ಬಾಂಬ್‌ನ ದಳ್ಳುರಿ ನೋಡಿದ ಯೋಜನಾ ನಿರ್ದೇಶಕ ನಾಗಿದ್ದವನಿಗೆ ತಕ್ಷಣಕ್ಕೆ ನಮ್ಮ ದೇಶದ ಭಗದ್ಗೀತೆಯ ಕೃಷ್ಣನ ಮಾತುಗಳು ನೆನಪಾಯಿತಂತೆ. ಆದರೆ ಅವನು ಹಿಂದೂ ಅಲ್ಲ ಎಂದು ತಿಳಿಸಿದರು.

ಬೆಳಕಿನ ಪ್ರಭೆ ಪ್ರತಿಯೊಬ್ಬರಲ್ಲಿದೆ: ದೀಪಕ್ಕೆ ಬತ್ತಿ ಹಾಕಿ ಅದರೊಳಗೆ ಎಣ್ಣೆ ಹಾಕುತ್ತೇವೆ. ಎಣ್ಣೆ ಇರುವಷ್ಟು ಕಾಲ ದೀಪ ಉರಿಯುತ್ತದೆ. ಅದೇ ರೀತಿ ನಮ್ಮ ಸೂರ್ಯ ಒಳಗಡೆ ಉರಿಯಲು ಎಣ್ಣೆಯಂತಹ ವಸ್ತು ಇದೆ. ಅದೇ ಹೈಡ್ರೋಜನ್ ಹಾಗೂ ಹೀಲಿಯಂ. ಅವು ಎಣ್ಣೆಯಂತೆ ಕೆಲಸ ಮಾಡುವ ಮೂಲಕ ಸೂರ್ಯ ಸದಾ ಉರಿಯಲು ಅವಕಾಶ ಮಾಡಿವೆ. ಸುಮಾರು 550 ಕೋಟಿ ವರ್ಷಗಳ ಹಿಂದೆ ಸೂರ್ಯ ಉರಿಯಲು ಪ್ರಾರಂಭಿಸಿದೆ. ಸೂರ್ಯನಲ್ಲಿರುವ ಹೈಡ್ರೋಜನ್ ಮತ್ತು ಹೀಲಿಯಂ ಅನ್ನು ಒಂದೇ ಬಾರಿಗೆ ಉರಿಸಿದರೆ ಪ್ರಜ್ವಲಿಸುವುದಕ್ಕಿಂತಲೂ ಹೆಚ್ಚಿನ ಬೆಳಕಿನ ಪ್ರಭೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಡಗಿದೆ ಎಂದರು.

ಹೊರಗೆ ಹೊತ್ತಿಸಿದ ಸಾಂಕೇತಿಕ ಬೆಳಕು ನಮ್ಮ ನಿಮ್ಮೆಲ್ಲರಿಗೂ ಪಾಠವಾಗಿದೆ. ಅಕ್ಕಮಹಾದೇವಿ, ಮೀರಬಾಯಿ ಜ್ಞಾನದ ಬೆಳಕನ್ನು ಹುಡುಕಿ ಹೊರಟರು. ಅಂತೆಯೇ ಚಕ್ರವರ್ತಿ ಆಗಬಹುದಾದ ಸಿದ್ಧಾರ್ಥ ಹಾಗೂ ಮಹಾವೀರ ಸಹ ಅದೇ ಬೆಳಕಿಗಾಗಿ ಹೊರಟರು. ಈ ಮಹನೀಯರು ಹುಡುಕಿ ಹೊರಟ ಜ್ಞಾನದ ಬೆಳಕಿನ ಹಿನ್ನೆಲೆಯಲ್ಲಿಯೇ ನಮ್ಮ ಹಿರಿಯರು ದೀಪೋತ್ಸವದ ಹೆಸರಿನಲ್ಲಿ ಜ್ಯೋತಿ ಹೊತ್ತಿಸುವ ಈ ಕೈಂಕರ್ಯದ ಪರಂಪರೆ ಹುಟ್ಟು ಹಾಕಿದ್ದಾರೆ ಎಂದು ತಿಳಿಸಿದರು.

ಸಮೃದ್ಧಿ ಕಡೆ ಸಾಗಬೇಕಿದೆ: ಇದಕ್ಕೂ ಮುನ್ನ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಮಾತನಾಡಿ, ಭಾರತದ ಸನಾತನ ಸಂಸ್ಕೃತಿಯಲ್ಲಿ ಮನಸ್ಸನ್ನು ಭಗವಂತನ ಕಡೆಗೆ ಕರೆದೊಯ್ಯಲು ಹಬ್ಬಗಳು, ಪೂಜೆಗಳಿವೆ. ನಾವು ನಮ್ಮ ನಿತ್ಯ ಜೀವನದ ವ್ಯವಹಾರದಲ್ಲಿ ತಲ್ಲೀನರಾಗಿರುತ್ತೇವೆ. ಆದರೆ ದೈವ ಸಾನಿಧ್ಯವನ್ನು ನಾವು ಜೊತೆ ಜೊತೆಗೆ ಅನುಭವಿಸಬೇಕೆಂಬುದು ಸನಾತನ ಧರ್ಮದ ಕರೆಯಾಗಿದೆ. ಭಗವಂತನ ದಿವ್ಯ ಬೆಳಕನ್ನು ಹೃದಯಾಂತರಾಳದಲ್ಲಿ ಅನುಭವಿಸಬೇಕು. ಆದ್ದರಿಂದ ನಾವು ಇಂದು ಲಕ್ಷಾಂತರ ದೀಪಗಳನ್ನು ಹಚ್ಚಿದ್ದೇವೆ. ಆದರೆ ಬಾಹ್ಯವಾಗಿ ಲಕ್ಷ ದೀಪಗಳನ್ನು ಹಚ್ಚಿಸುವುದೆಂದರೆ ಅಂತರ್ಯದಲ್ಲಿ ನಮ್ಮ ದಿವ್ಯ ಭಗವಂತನ ಸ್ಮರಣೆಯ ಭಕ್ತಿಯ ದೀಪ ಬೆಳಗುತ್ತಿರಬೇಕೆಂಬುದು ಮುಖ್ಯ ಉದ್ದೇಶ. ಆದ್ದರಿಂದ ಸನಾತನ ಸಂಸ್ಕೃತಿ ಮನೆ ಮನೆಗಳಲ್ಲಿ ಬೆಳಗಬೇಕು. ಸನಾತನ ಸಂಸ್ಕೃತಿ ಬೆಳಸಿ ನಮ್ಮ ದೇಶವನ್ನು, ನಮ್ಮ ಧರ್ಮ ಸಂಸ್ಕೃತಿಯ ಆಧಾರದ ಮೇಲೆ ಸಮೃದ್ಧಿಯಾಗಿ ಅಭಿವೃದ್ಧಿ ಕಡೆಗೆ ಕೊಂಡೊಯ್ಯಬೇಕಿದೆ ಎಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಕುಂಬಾರಕೊಪ್ಪಲು ಹಿರಿಯ ಮುಖಂಡ ಡಿ.ಮಾದೇಗೌಡರು ಮಾತನಾಡಿ, 1980ರ ದಶಕದಲ್ಲಿ ಈ ಕ್ಷೇತ್ರದ ಜೀರ್ಣೋದ್ಧಾರದ ಪ್ರತಿಷ್ಠಾಪನೆಯು ಭೈರವೈಕ್ಯ ಪದ್ಮಭೂಷಣ ಡಾ.ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಸಮ್ಮುಖದಲ್ಲೇ ನಡೆಯಿತು. ಅಂದು ಜೀವರಾಜ್ ಆಳ್ವಾ ಮುಖ್ಯಅತಿಥಿಯಾಗಿ ಆಗಮಿಸಿದ್ದರು. ಆ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಅದರ ಹೆಸರು 'ಸಿರಿ ದೇಗುಲ'. ಆದರೆ ದೇವಸ್ಥಾನ ಪಾಳು ಬಿದ್ದಿತ್ತು. ಹೀಗಾಗಿ ಅನೇಕರು ಹಾಸ್ಯ ಮಾಡಿದ್ದರು. ಬಹುಶಃ ನೀವೆಲ್ಲರೂ ಈ ದೀಪೋತ್ಸವ ಆಚರಣೆ ಸಂದರ್ಭದಲ್ಲಿ ಆ ಹೆಸರು ಎಷ್ಟು ಸಾರ್ಥಕವಾಗಿದೆ ಎಂದು ಅರ್ಥ ಮಾಡಿಕೊಂಡಿದ್ದೀರಿ ಎಂದು ಭಾವಿಸುತ್ತೇನೆ. ಇದಕ್ಕೆಲ್ಲಾ ಕಾರಣೀಭೂತರು ಬಾಲಗಂಗಾಧರನಾಥ ಶ್ರೀಗಳು. ಅವರ ಕಾಲದಲ್ಲೇ ಅನೇಕ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಯಿತು ಎಂದು ಸ್ಮರಿಸಿದರು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಸೋಮವಾರ ಬೆಳಗ್ಗೆ ಲಕ್ಷ್ಮೀಕಾಂತಸ್ವಾಮಿ ಮತ್ತು ಶ್ರೀ ಲಕ್ಷ್ಮೀದೇವಿಗೆ ಅಭಿಷೇಕ, ವಿಶೇಷ ಹೋಮ, ಹವನ ಹಾಗೂ ವಿಶೇಷ ಅಲಂಕಾರದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಕಾಗಿನೆಲೆ ಕನಕ ಗುರು ಪೀಠದ ಮೈಸೂರು ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಎಲ್.ನಾಗೇಂದ್ರ, ವಾಗ್ಮಿ ಮತ್ತು ಚಿಂತಕ ಪ್ರೊ.ಎಂ.ಕೃಷ್ಣೇಗೌಡ ಮತ್ತಿತರರು ಸಭಾ ಕಾರ್ಯಕ್ರಮದ ವೇದಿಕೆಯಲ್ಲಿದ್ದರು. ಮುಖಂಡ ಬೆಳಗೊಳ ಸುಬ್ರಹ್ಮಣ್ಯಂ, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಶ್ರೀಧರ್, ಕೆ.ವಿ.ಮಲ್ಲೇಶ್, ಕೆ.ಟಿ.ಚೆಲುವೇಗೌಡ ಸೇರಿದಂತೆ ಹಲವು ಮುಖಂಡರು ಪಾಲ್ಗೊಂಡಿದ್ದರು.



ಹೆಬ್ಬಾಳಿನ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಷ್ಣು ದೀಪೋತ್ಸವಕ್ಕೆ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಸ್ವಾಮಿ ಮುಕ್ತಿದಾನಂದ ಮಹಾರಾಜ್, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.



ಹೆಬ್ಬಾಳಿನ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ನಡೆದ ವಿಷ್ಣು ದೀಪೋತ್ಸವದಲ್ಲಿ ಭಕ್ತರು ದೀಪಗಳ ಬೆಳಗಿದರು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ನನ್ನ ಕಕ್ಷೀದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು, ಶ್ರೀ ಸುಮಂತ್ ಚಗಂತಿ ಬಿನ್ ಲಾಟ್ ಸಿ. ಶ್ರೀನಿವಾಸ್ ರಾವ್ ಸುಮಾರು 62 ವರ್ಷ ವಯಸ್ಸು, ಕೆ. ಹೆಮ್ಮನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ರಲ್ಲಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಿಂದ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಈ ಸಂಬಂಧ ಕ್ರಯಕ್ಕೆ ನೀಡುತ್ತಿರುವವರು ಷೆಡ್ಯೂಲ್ ಸ್ವತ್ತುಗಳು ಸಂಪೂರ್ಣ ಹಕ್ಕುವುಳ್ಳ ಮಾಲೀಕರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಕ್ರಯ ನೀಡುತ್ತಿರುವವರ ಹೊರೆತುಪಡಿಸಿ ಇನ್ನು ಯಾರಿಗಾದರೂ ಹಕ್ಕು ಹಾಗೂ ಹಿತಾಸಕ್ತಿ ಇದ್ದಲ್ಲಿ ಈ ಪತ್ರಿಕೆ ಪ್ರಕಟಣೆ ನೀಡಿದ 10 ದಿನಗಳ ಒಳಗೆ ಕೆಳಗೆ ತಿಳಿಸಿದ ವಕೀಲರ ಕಛೇರಿಯನ್ನು ದಾಖಲಾತಿಗಳ ಸಮೇತ ಸಂಪರ್ಕಿಸುವುದು. ಈ ಅವಧಿಯ ಒಳಗೆ ಯಾವುದೇ ತಂಟೆ ತಕರಾರು ಬರದಿದ್ದ ಪಕ್ಷದಲ್ಲಿ ಕ್ರಯಕ್ಕೆ ನೀಡುತ್ತಿರುವವರು ಕಾನೂನುಬದ್ಧ ಮಾಲೀಕರೆಂದು ಪರಿಗಣಿಸಿ ಅವರಿಂದ ನನ್ನ ಕಕ್ಷಿದಾರರ ಸ್ವತ್ತಿನ ಕ್ರಯವನ್ನು ಪಡೆಯಲು ಮುಂದಾಗುತ್ತಾರೆ ಹಾಗೂ ಆ ನಂತರ ಬರುವ ಯಾವುದೇ ತಂಟೆ ತಕರಾರುಗಳಿಗೆ ನಮ್ಮ ಕಕ್ಷಿದಾರರು ಭಾದ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಕೆ. ಹೆಮ್ಮನಹಳ್ಳಿ ಗ್ರಾಮ, ಇಲವಾಲ ಹೋಬಳಿ, ರಲ್ಲಿರುವ ಸರ್ವೆ ನಂ. 112/2 ರಲ್ಲಿನ ವಿಸ್ತೀರ್ಣ 2 ಎಕರೆ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 112 ರಲ್ಲಿರುವ ಉಳಿಕೆ ಜಮೀನು ಹಾಗೂ ಸರ್ವೆ ನಂ. 113 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 102 ರ ಜಮೀನು, ಉತ್ತರಕ್ಕೆ: 9.00 ಮೀ ರಸ್ತೆ ಹಾಗೂ ಸರ್ವೆ ನಂ. 111/2A, 111/2B ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ. 125 ರ ಜಮೀನು.

ಸಹಿ/– ಕೆ.ಎಸ್. ರಾಜೇಶ್ ಬಾಬು,
ನಂಬರ್ 45, 9ನೇ ಮೇನ್, 5ನೇ ಕ್ರಾಸ್,
ಜಯಲಕ್ಷ್ಮೀಪುರಂ, ಮೈಸೂರು.
ಮೊ: 9481817814

ಸ್ಥಳ: ಮೈಸೂರು
ದಿನಾಂಕ: 14.12.2024

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಾಮರಾಜನಗರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಚಾಮರಾಜನಗರ

ದೂರವಾಣಿ: 0821–222421 ಇ–ಮೇಲ್: dhochamarajanagar@gmail.com

ಸಂಖ್ಯೆ: ಸರಬ/02/2024–25 ದಿನಾಂಕ: 09–12–2024

ಇ–ಟೆಂಡರ್ ಪ್ರಕಟಣೆ

ವಿಷಯ: 2024–25ನೇ ಸಾಲಿನಲ್ಲಿ ಈ ಕಛೇರಿಯ ಅಧೀನದ ಆಸ್ಪತ್ರೆಗಳ ಉಪಕರಣ / ಸಲಕರಣೆ ದುರಸ್ಥಿಪಡಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿರುವ ಬಗ್ಗೆ.

01	ಟೆಂಡರ್ ಅಂದಾಜು ಮೌಲ್ಯ	ರೂ. 11.00 ಲಕ್ಷ
02	ಇ.ಎಂ.ಡಿ. @2% ಮೊಬಲಗು	ರೂ. 22,000=00
03	ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ	ದಿನಾಂಕ: 10–12–2024 ರಂದು ಮಧ್ಯಾಹ್ನ 03:00 ಗಂಟೆಗೆ
04	ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 26–12–2024 ರಂದು ಮಧ್ಯಾಹ್ನ 03:00 ಗಂಟೆಗೆ
05	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 27–12–2024 ರಂದು ಬೆಳಗ್ಗೆ 11:00 ಗಂಟೆಗೆ
06	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:– 31–12–2024 ರಂದು ಬೆಳಗ್ಗೆ 11:00 ಗಂಟೆಗೆ
07	ಟೆಂಡರ್ ತೆರೆಯುವ ಸ್ಥಳ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಾಮರಾಜನಗರ.

ಹೆಚ್ಚಿನ ವಿವರಗಳಿಗೆ http://kppp.karnataka.gov.in ಮೂಲಕ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ: ವಾಸಾಸಂಇ:ಚಾನಗರ:480:2024–25